ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 18 ಸೋಮವಾರ 2023

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 154 | ಪುಟಗಳು: 10

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಯುವಕನ ವ್ಹೀಲಿಂಗ್‌ಗೆ ದನಗಾಹಿ ಸಾವು ಪ್ರಕರಣ

ಮಹಿಳಾ ಎಸ್‌ಐ ಅಮಾನತಿಗೆ ಆಗ್ರಹಿಸಿ ರೈತ ಸಂಘ ಪ್ರತಿಭಟನೆ

- ಶವಾಗಾರದ ಮುಂದೆ ರೈತರ ಆಕ್ರೋಶ
- ಶವ ಕೊಂಡೊಯ್ಯುವುದಿಲ್ಲವೆಂದು ಪಟ್ಟು
- ಕಡೆಗೆ ಎಎಸ್ಪಿ ನೀಡಿದ ಭರವಸೆಗೆ ಸ್ಪಂದನೆ



ಮೈಸೂರು, ಸೆ.17(ಬಿಎಲ್‌ಯು)– ವ್ಹೀಲಿಂಗ್ ಮಾಡುವ ವೇಳೆ ಅಮಾಯಕನ ಪ್ರಾಣ ತೆಗೆದಿರುವ ಯುವಕನ ತಾಯಿ ಸಬ್ ಇನ್ಸ್‌ಪೆಕ್ಟರ್ ಅನ್ನು ಅಮಾನತು ಮಾಡುವಂತೆ ಆಗ್ರಹಿಸಿ ರೈತ ಸಂಘದ ಕಾರ್ಯಕರ್ತರು ಮೈಸೂರಿನ ಕೆ.ಆರ್.ಆಸ್ಪತ್ರೆಯ ಶವಾಗಾರದ ಮುಂದೆ ಪ್ರತಿಭಟನೆ ನಡೆಸಿದರು.

ಮೈಸೂರಿನ ನಂಜನಗೂಡು ಕೈಗಾರಿಕಾ ಪ್ರದೇಶ ಇಮ್ಮಾವುನಲ್ಲಿ ಮಹಿಳಾ ಸಬ್ ಇನ್ಸ್‌ಪೆಕ್ಟರ್ ಪುತ್ರ ಸೈಯ್ಯದ್ ಐವಾನ್ ವ್ಹೀಲಿಂಗ್ ಮಾಡುವ ವೇಳೆ ರಸ್ತೆ ಬದಿ ಕುಳಿತಿದ್ದ ದನಗಾಹಿ ಗುರುಸ್ವಾಮಿಗೆ ಡಿಕ್ಕಿ ಹೊಡೆದು ಆತ ಬಲಿಯಾಗಿದ್ದ ಘಟನೆ ನಿನ್ನೆ ನಡೆದಿತ್ತು. ಈ ಹಿನ್ನೆಲೆಯಲ್ಲಿ ಮೈಸೂರಿನ ಕೆ.ಆರ್.ಆಸ್ಪತ್ರೆಯ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಯುವ ವೇಳೆ ರೈತ ಸಂಘದ ಕಾರ್ಯಕರ್ತರು ಭಾನುವಾರ ಮಹಿಳಾ ಎಸ್‌ಐ ವಿರುದ್ಧ ಪ್ರತಿಭಟನೆ ನಡೆಸಿದರು.

ಸೈಯ್ಯದ್ ಐವಾನ್ ಈ ಹಿಂದೆ ಕೂಡ ವ್ಹೀಲಿಂಗ್ ಮಾಡುತ್ತಿದ್ದನು. ಆದರೆ ಆತ ಸಬ್ ಇನ್ಸ್‌ಪೆಕ್ಟರ್ ಮಗ ಎಂಬ ಕಾರಣಕ್ಕೆ ಯಾವುದೇ ಕ್ರಮ ಕೈಗೊಂಡಿರಲಿಲ್ಲ. ಇದರಿಂದಾಗಿ ಈಗ ಆತ ಅಮಾಯಕನ ಸಾವಿಗೆ ಕಾರಣನಾಗಿದ್ದಾನೆ ಎಂದು ಆರೋಪಿಸಿದರು. ಮಗನ ಕೃತ್ಯಕ್ಕೆ ತಾಯಿಯ ಕುಮ್ಮಕ್ಕು ಇಷ್ಟೆಲ್ಲಾ ಅವಾಂತರಕ್ಕೆ ಕಾರಣವಾಗಿದೆ. ಈ ಹಿನ್ನೆಲೆ ಅವರನ್ನು ಅಮಾನತು ಮಾಡಿ ಬಂಧಿಸಬೇಕು ಎಂದು ಪ್ರತಿಭಟನಾ ನಿರತರು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಪ್ರತಿಭಟನೆ ಕೈಬಿಡುವಂತೆ ಡಿವೈಎಸ್ಪಿ ಗೋವಿಂದ ರಾಜು ಮಾಡಿದ ಮನವಿಗೆ ರೈತ ಸಂಘದವರು ಸ್ಪಂದಿಸಲಿಲ್ಲ. ಮಹಿಳಾ ಎಸ್‌ಐ ವಿರುದ್ಧ ಕ್ರಮ ಕೊಳ್ಳುವ ತನಕ ಶವವನ್ನು ತೆಗೆದುಕೊಂಡು ಹೋಗುವುದಿಲ್ಲ ಎಂದು ಪಟ್ಟು ಹಿಡಿದರು. ತರುವಾಯ ಎಎಸ್ಪಿ ನಂದಿನಿ ಅವರು ಫೋನ್ ಮೂಲಕ ಪ್ರತಿಭಟನಾನಿರತರ ಜೊತೆ ಮಾತನಾಡಿ, ಈ ವಿಚಾರ ಕುರಿತು ಮಹಿಳಾ ಎಸ್‌ಐ ಅವರಿಂದ ವಿವರಣೆ ಪಡೆಯುತ್ತೇನೆ. ಆ ಬಗ್ಗೆ ಪರಿಶೀಲನೆ ನಡೆಸಿ ಕ್ರಮ ಕೈಗೊಳ್ಳುತ್ತೇನೆ ಎಂದು ಭರವಸೆ ನೀಡಿದ್ದ ಮೇರೆಗೆ ಪ್ರತಿಭಟನೆ ವಾಪಸು ಪಡೆದರು. ರೈತ ಸಂಘದ ಬಕ್ಕಳ್ಳಿ ನಂಜುಂಡಸ್ವಾಮಿ, ಪ್ರೇಮ್‌ಕುಮಾರ್, ಮರಂಕಯ್ಯ ಸೇರಿದಂತೆ ಹಲವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಮಹಿಳಾ ಎಸ್‌ಐ ವರ್ಗಾವಣೆ

ನಂಜನಗೂಡು, ಸೆ.17– ನಂಜನಗೂಡಿನ ಸಂಚಾರಿ ಠಾಣೆಯ ಮಹಿಳಾ ಸಬ್‌ಇನ್ಸ್‌ಪೆಕ್ಟರ್ ಅನ್ನು ಮೈಸೂರಿನ ಜಿಲ್ಲಾ ಅಪರಾಧ ದಾಖಲೆಗಳ ವಿಭಾಗಕ್ಕೆ ವರ್ಗಾವಣೆ ಮಾಡಿ ಮೈಸೂರು ಜಿಲ್ಲಾ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್ ಆದೇಶ ಹೊರಡಿಸಿದ್ದಾರೆ.

ಶನಿವಾರ ತಾಲೂಕಿನ ಇಮ್ಮಾವು ಕೈಗಾರಿಕಾ ಪ್ರದೇಶದ ಏಷಿಯನ್ ಕಾರ್ಖಾನೆಯ ಬಳಿ ಈ ಪಿಎಸ್‌ಐ ಪುತ್ರ ಸೈಯದ್ ಐವಾನ್ ಬೈಕ್ ವ್ಹೀಲಿಂಗ್ ಮಾಡಿ ಅಮಾಯಕ ದನಗಾಯಿಯ ಜೀವವನ್ನು ಬಲಿ ಪಡೆದಿದ್ದ. ಅಪರಾಧ ನಡೆಸಿದ ಕೃತ್ಯ ನಂಜನಗೂಡು ಪೊಲೀಸ್ ಠಾಣೆಯ ವ್ಯಾಪ್ತಿಗೆ ಒಳಪಡುವ ಹಿನ್ನೆಲೆಯಲ್ಲಿ ಪ್ರಭಾವ ಬೀರಬಹುದು ಎಂಬ ಉದ್ದೇಶದಿಂದ ಅವರನ್ನು ಮೈಸೂರಿನ ಜಿಲ್ಲಾ ಅಪರಾಧ ದಾಖಲೆಗಳ ವಿಭಾಗ (ಡಿಸಿಆರ್‌ಬಿ) ವರ್ಗಾವಣೆ ಮಾಡಲಾಗಿದೆ.

ಮೈಸೂರಲ್ಲಿ ವಿಶ್ವಕರ್ಮ ಸಮುದಾಯ ಭವನ ನಿರ್ಮಿಸಲು ಸ್ಪಂದಿಸುವೆ

ಶ್ರೀ ವಿಶ್ವಕರ್ಮ ಜಯಂತಿ ಆಚರಣೆ ಕಾರ್ಯಕ್ರಮದಲ್ಲಿ ಶಾಸಕ ತನ್ವೀರ್ ಸೇಠ್ ಭರವಸೆ



ಮೈಸೂರು, ಸೆ.17(ಬಿಎಲ್‌ಯು)– ಮೈಸೂರಿನಲ್ಲಿ ವಿಶ್ವಕರ್ಮ ಸಮುದಾಯ ಭವನ ನಿರ್ಮಿಸಲು ಸ್ಪಂದಿಸುವುದಾಗಿ ಶಾಸಕ ತನ್ವೀರ್ ಸೇಠ್ ಭರವಸೆ ನೀಡಿದರು.

ಕಲಾಮಂದಿರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಯೋಜಿಸಿದ್ದ ಶ್ರೀ ವಿಶ್ವಕರ್ಮ ಜಯಂತಿ ಆಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸಮುದಾಯದ ಬೇಡಿಕೆಗಳನ್ನು ಸರ್ಕಾರದ ಮುಂದಿಡಲು ಇಂತಹ ಆಚರಣೆಗಳು ಪ್ರಸ್ತುತ ಎಂದು ಅಭಿಪ್ರಾಯಪಟ್ಟರು. ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ನ್ಯಾಯ ಸಿಗಬೇಕು. ಉತ್ತಮ ಸಮಾಜ ನಿರ್ಮಾಣಕ್ಕಾಗಿ ಕಾಯಕ ಜೀವಿಗಳಿಗೆ ನ್ಯಾಯಯುತ ಅವಕಾಶಗಳು ದೊರೆಯಬೇಕು ಎಂದು ತನ್ವೀರ್ ಸೇಠ್ ಆಶಿಸಿದರು.

ಕರ್ನಾಟಕದಲ್ಲಿ ಒಟ್ಟು 52 ಮಹಾನ್ ವ್ಯಕ್ತಿಗಳ ಜಯಂತಿ ಮಹೋತ್ಸವವನ್ನು ರಾಜ್ಯ ಸರ್ಕಾರವೇ ಆಚರಣೆ ಮಾಡುತ್ತಿದೆ. ಸಮುದಾಯದ ಶೈಕ್ಷಣಿಕ, ಸಾಮಾಜಿಕ ಬೆಳವಣಿಗೆಗೆ ಪೂರಕವಾದ ಬೇಡಿಕೆಗಳನ್ನು ಸರ್ಕಾರದ ಮುಂದಿಡಲು ಇಂತಹ ಆಚರಣೆ ಪೂರಕ ಮಾಧ್ಯಮವಾಗಿದೆ ಎಂದರು.

ನಾನು ಪ್ರತಿನಿಧಿಸುತ್ತಿರುವ ನರಸಿಂಹರಾಜ ವಿಧಾನ ಸಭಾ ಕ್ಷೇತ್ರ ಪುಟ್ಟ ಭಾರತವಿದ್ದಂತೆ ಇದೆ. ಎಲ್ಲಾ ಜಾತಿ, ಧರ್ಮದವರು ನನ್ನ ಕ್ಷೇತ್ರದಲ್ಲಿದ್ದಾರೆ. ಬೇರೆ ಜಾತಿಗಳಿಗಿಂತ ನನ್ನ ಜಾತಿಯೇ ಶ್ರೇಷ್ಠ ಎಂದು ವಾದ ಮಾಡುವುದರ ಬದಲು ಪ್ರತಿಯೊಂದು ಜಾತಿಗಳಿಗೂ ಅದರದೆ ಆದ ಶ್ರೇಷ್ಠತೆ ಇದೆ ಎಂಬ ಭಾವನೆ ತಳೆಯಬೇಕು ಎಂದು ತನ್ವೀರ್ ಸೇಠ್ ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ, ಪ್ರತಿಯೊಂದು ಕ್ಷೇತ್ರದಲ್ಲೂ ವಿಶ್ವಕರ್ಮ ಸಮುದಾಯದ ಕೊಡುಗೆ ಸ್ಮರಣೀಯ ಎಂದರು. ನನ್ನ ಕ್ಷೇತ್ರದಲ್ಲಿ 30 ಸಾವಿರ ವಿಶ್ವಕರ್ಮ ಸಮುದಾಯದವರು ಇದ್ದಾರೆ. ಇಂತಹ ಕಾಯಕ ಸಮುದಾಯದ ಬೇಡಿಕೆ ಈಡೇರಿಸಲು ನಾನು ಶ್ರಮಿಸುತ್ತೇನೆ ಎಂದು ಹರೀಶ್‌ಗೌಡ ಭರವಸೆ ನೀಡಿದರು.

ವಿಶ್ವಕರ್ಮ ಸಮುದಾಯದವರು ತಮ್ಮ ಕಾಯಕವನ್ನು ದೇವರ ಕೆಲಸವೆಂದು ಭಾವಿಸಿ ಕಾಯಕದ ಮಹತ್ವವನ್ನು ಸಾರಿದ್ದಾರೆ. ಇಂತಹ ಸಮುದಾಯದ ಬೆಳವಣಿಗೆಗೆ ಸರ್ಕಾರ ಮತ್ತಷ್ಟು ಸೌಲಭ್ಯ ಕಲ್ಪಿಸಲಿದೆ ಎಂದು ನಂಜನಗೂಡು ಶಾಸಕ ದರ್ಶನ್ ಧ್ರುವನಾರಾಯಣ್ ತಿಳಿಸಿದರು.

ಕೆಲವು ಸಮುದಾಯಗಳಲ್ಲಿ ಒಗ್ಗಟ್ಟಿನ ಕೊರತೆ ಇದೆ. ಸರ್ಕಾರದ ಸೌಲಭ್ಯಗಳನ್ನು ಪಡೆಯಲು ಸಮುದಾಯದ ಜನರಲ್ಲಿ ಒಗ್ಗಟ್ಟು ಇರಬೇಕು. ಜೊತೆಗೆ ಪರಸ್ಪರ ಪ್ರೀತಿ ವಿಶ್ವಾಸವಿರಬೇಕು ಎಂದು ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಸಲಹೆ ನೀಡಿದರು. ಶ್ರೀ ಕ್ಷೇತ್ರ ಪಂಚನಂದಿ ಪಾಪಗ್ನಿ ಮಹಾ ಸಂಸ್ಥಾನ ಮಠದ ಶ್ರೀ ಸೂರ್ಯನಾರಾಯಣ ಸ್ವಾಮೀಜಿ, ವಿಧಾನಪರಿಷತ್ ಸದಸ್ಯ ಡಾ.ತಿಮ್ಮಯ್ಯ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಜೆ.ಗೋವಿಂದರಾಜು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಕಾರ್ಪೋರೇಟರ್ ರಮೇಶ್ ರಮಣಿ, ಪ್ರಾಧ್ಯಾಪಕ ಶೆಲ್ವಪಿಳ್ಳೆ, ಮೈಸೂರು ಜಿಲ್ಲಾ ವಿಶ್ವಕರ್ಮ ಒಕ್ಕೂಟದ ಅಧ್ಯಕ್ಷ ಹುಟ್ಟಪ್ಪ, ಭಾರತೀಯ ಸೇನೆಯ ಪರಮೇಶ್ವರ್, ಜಯಂತಿ ಆಚರಣೆ ಸಮಿತಿ ಅಧ್ಯಕ್ಷ ಸಿದ್ದಾಚಾರ್, ಉಪಾಧ್ಯಕ್ಷ ರಾಜುಕಾರ್ಯ, ಕಾರ್ಯದರ್ಶಿ ನಾರಾಯಣಾಚಾರ್, ಸಹ ಕಾರ್ಯದರ್ಶಿ ಸೋಮಾಚಾರ್ ಸ್ವಾಮಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಬಿಎಎಂಎಸ್‌ನಲ್ಲಿ ಸೋನು ಸಾಧನೆ



ಮೈಸೂರು: ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯ ನಡೆಸಿದ 2022–23ನೇ ಸಾಲಿನ ಆಯುರ್ವೇದ ಪದವಿ ಅಂತಿಮ ವರ್ಷದ ಪರೀಕ್ಷೆಯಲ್ಲಿ ಮೈಸೂರಿನ ಸರ್ಕಾರಿ ಆಯುರ್ವೇದ ಕಾಲೇಜು ವಿದ್ಯಾರ್ಥಿನಿ ಎನ್.ಎಸ್.ಸೋನು ಅತ್ಯುತ್ತಮ ಅಂಕಗಳೊಂದಿಗೆ ತೇರ್ಗಡೆ ಹೊಂದಿದ್ದಾರೆ. ಅವರು ನಂಜನಗೂಡಿನ ತಮ್ಮಡಗೇರಿಯ ಸಂಸ್ಕೃತ ಉಪನ್ಯಾಸಕ ಶಿವಣ್ಣ ಅವರ ಪುತ್ರಿ

ದಸರಾ ಫಲಪುಷ್ಪ ಪ್ರದರ್ಶನದಲ್ಲಿ ಭಾಗವಹಿಸಲು ಉದ್ಯಮಿಗಳಿಗೆ ಆಹ್ವಾನ



ಮೈಸೂರು.ಸೆ.17– 2023–24ನೇ ಸಾಲಿನ ದಸರಾ ಫಲಪುಷ್ಪ ಪ್ರದರ್ಶನವನ್ನು ತೋಟಗಾರಿಕೆ ಇಲಾಖೆ ಮತ್ತು ಜಿಲ್ಲಾ ತೋಟಗಾರಿಕೆ ಸಂಘ ಮೈಸೂರು ಇವರ ಸಂಯುಕ್ತಾಶ್ರಯದಲ್ಲಿ ಅಕ್ಟೋಬರ್ 15ರಿಂದ 24ರವರೆಗೆ ನಿಶಾದ್ ಬಾಗ್ (ಕುಪ್ಪಣ್ಣ ಪಾರ್ಕ್) ಅವರಣದಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಮೈಸೂರು ಜಿಲ್ಲೆಯಲ್ಲಿರುವ ವಿವಿಧ ಬೃಹತ್ ಕೈಗಾರಿಕಾ ಉದ್ಯಮದವರು ಫಲಪುಷ್ಪ ಪ್ರದರ್ಶನದಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಲಾಗಿದೆ. ಆಸಕ್ತರು ಅ.5ರೊಳಗೆ ಮೈಸೂರಿನ ಕರ್ಜನ್ ಪಾರ್ಕ್‌ನಲ್ಲಿರುವ ಜಿಲ್ಲಾ ತೋಟಗಾರಿಕೆ ಸಂಘದ ಕಚೇರಿಯಲ್ಲಿ ತಮ್ಮ ಹೆಸರು ನೋಂದಾಯಿಸಿಕೊಳ್ಳಬಹುದು.

ತಮಿಳುನಾಡಿಗೆ ಕಾವೇರಿ ನೀರು: ವಾಟಾಳ್‌ರಿಂದ ಖಾಲಿ ಕೊಡ ಪ್ರದರ್ಶಿಸಿ ಪ್ರತಿಭಟನೆ



ಮೈಸೂರು, ಸೆ.17(ಎಂಟಿವೈ)– ತಮಿಳುನಾಡಿಗೆ ಕಾವೇರಿ ನೀರು ಬಿಡದಂತೆ ಆಗ್ರಹಿಸಿ, ಕನ್ನಡ ಚಳವಳಿ ವಾಟಾಳ್ ಪಕ್ಷದ ವಾಟಾಳ್ ನಾಗರಾಜ್ ಬೆಂಬಲಿಗರೊಂದಿಗೆ ಖಾಲಿ ಕೊಡ ಪ್ರದರ್ಶಿಸಿ ಪ್ರತಿಭಟನೆ ನಡೆಸಿದರು. ಮೈಸೂರಿನ ಹಾರ್ಡಿಂಜ್ ವೃತ್ತದಲ್ಲಿ ಖಾಲಿ ಬಿಂದಿಗೆ ಹಿಡಿದು ಪ್ರತಿಭಟನೆ ನಡೆಸಿದ ಅವರು ಈ ಬಾರಿ ಕಾವೇರಿ ಕಣಿವೆಯಲ್ಲಿ ಮಳೆ ಕೊರತೆ ತೀವ್ರಗೊಂಡಿದೆ. ಇದರಿಂದಾಗಿ ಜಲಾಶಯಗಳು ನೀರಿಲ್ಲದೆ ಬರಿದಾಗಿವೆ. ನಮ್ಮ ಬೆಳೆಗಳಿಗೆ ನೀರೊದಗಿಸಲು ಸಾಧ್ಯವಾಗದೆ ಬೆಳೆ ಒಣಗುತ್ತಿವೆ. ಭವಿಷ್ಯದಲ್ಲಿ ಕುಡಿಯುವ ನೀರಿಗೂ ಪರದಾಡುವಂತಹ ಸ್ಥಿತಿ ನಿರ್ಮಾಣವಾಗಲಿದೆ. ಆದರೆ, ವಾಸ್ತವ ಸ್ಥಿತಿ ಅರಿಯದ ತಮಿಳುನಾಡು ಪದೇ ಪದೆ ಕ್ಯಾತೆ ತೆಗೆದು ನೀರು ಬಿಡುವಂತೆ ಒತ್ತಾಯಿಸುತ್ತಿದೆ. ಈ ಕೂಡಲೇ ರಾಜ್ಯ ಸರ್ಕಾರ ತಮಿಳುನಾಡಿಗೆ ನೀರು ಬಿಡುವುದನ್ನು ನಿಲ್ಲಿಸಬೇಕು ಎಂದು ಒತ್ತಾಯಿಸಿದರು. ತಮಿಳುನಾಡು ನಟರಾದ ರಜನಿಕಾಂತ್, ಕಮಲ್ ಹಾಸನ್ ಕರ್ನಾಟಕ ಪರ ಧ್ವನಿ ಎತ್ತಬೇಕು. ಸ್ಟಾಲಿನ್ ತಮ್ಮ ಹಠ ಬಿಡದಿದ್ದರೆ ಮುಂದಿನ ದಿನಗಳಲ್ಲಿ ನಮ್ಮ ಹೋರಾಟ ಮತ್ತಷ್ಟು ತೀವ್ರಗೊಳ್ಳಲಿದೆ ಎಂದು ಎಚ್ಚರಿಕೆ ನೀಡಿದರು. ಪ್ರತಿಭಟನೆಯಲ್ಲಿ ಕನ್ನಡ ಪರ ಹೋರಾಟಗಾರ ಶಿವಶಂಕರ್ ಸೇರಿದಂತೆ ಹಲವರು ಭಾಗವಹಿಸಿದ್ದರು.

ಪ್ರಧಾನಿ ಮೋದಿಗೆ 73ನೇ ಜನ್ಮದಿನದ ಸಂಭ್ರಮ; ರಾಷ್ಟ್ರಪತಿ ದ್ರೌಪದಿ ಮುರ್ಮು, ದೇವೇಗೌಡ ಸೇರಿ ಗಣ್ಯರಿಂದ ಶುಭಾಶಯ

ನವದೆಹಲಿ: ಪ್ರಧಾನಮಂತ್ರಿ ನರೇಂದ್ರ ಮೋದಿಯವರು 73ನೇ ಜನ್ಮದಿನದ ಸಂಭ್ರಮದಲ್ಲಿದ್ದು, ಈ ಹಿನ್ನೆಲೆಯಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಸೇರಿದಂತೆ ಗಣ್ಯಾತಿಗಣ್ಯರು ಶುಭಾಶಯ ಕೋರಿದ್ದಾರೆ.

ಸಾಮಾಜಿಕ ಜಾಲತಾಣ ಎಕ್ಸ್ (ಟ್ವಿಟರ್) ನಲ್ಲಿ ಪೋಸ್ಟ್ ಮಾಡಿ ಶುಭಾಶಯ ಕೋರಿರುವ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, ಪ್ರಧಾನಿ ಮೋದಿ ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು ಮತ್ತು ಶುಭಾಶಯಗಳು. ನಿಮ್ಮ ದೂರದೃಷ್ಟಿ ಮತ್ತು ದೃಢವಾದ ನಾಯಕತ್ವದಿಂದ 'ಅಮೃತ ಕಾಲ' ದಲ್ಲಿ ಭಾರತದ ಸರ್ವಾಂಗೀಣ ಅಭಿವೃದ್ಧಿಗೆ ದಾರಿ ಮಾಡಿಕೊಡಬೇಕೆಂದು ಬಯಸುತ್ತೇನೆ. ನೀವು ಯಾವಾಗಲೂ ಆರೋಗ್ಯವಂತರಾಗಿ ಮತ್ತು ಸಂತೋಷದಿಂದಿರಿ. ನಿಮ್ಮ ಅತ್ಯುನ್ನತ ನಾಯಕತ್ವದಿಂದ ದೇಶವಾಸಿಗಳಿಗೆ ಪ್ರಯೋಜನವಾಗಲಿ ಎಂದು ಪ್ರಾರ್ಥಿಸುತ್ತೇನೆಂದು ಹೇಳಿದ್ದಾರೆ.

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರು ಪೋಸ್ಟ್ ಮಾಡಿ, ಮೋದಿ ಅವರಿಗೆ 73ನೇ ಹುಟ್ಟುಹಬ್ಬಕ್ಕೆ ಹಾರ್ದಿಕ ಶುಭಾಶಯಗಳು. ದೇವರು ರಾಷ್ಟ್ರ ಸೇವೆ ಮಾಡಲು ಅವರಿಗೆ ಉತ್ತಮ ಆರೋಗ್ಯವನ್ನು ನೀಡಲಿ ಎಂದು ತಿಳಿಸಿದ್ದಾರೆ. ಕಾಂಗ್ರೆಸ್ ನಾಯಕರಾದ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ ಕೂಡ ಶುಭಾಶಯ ತಿಳಿಸಿದ್ದಾರೆ.

ಚಾಮುಂಡೇಶ್ವರಿಗೆ ವಿಶೇಷ ಪೂಜೆ



ಮೈಸೂರು, ಸೆ.17(ಬಿಎಲ್‌ಯು)– ಪ್ರಧಾನಿ ನರೇಂದ್ರ ಮೋದಿ ಅವರ ಹುಟ್ಟುಹಬ್ಬದ ಹಿನ್ನೆಲೆ ಸಂಸದ ಪ್ರತಾಪ್ ಸಿಂಹ ಸೇರಿದಂತೆ ಬಿಜೆಪಿ ಮುಖಂಡರು ದೇಶಸೇವೆ ಮಾಡುತ್ತಿರುವ ಮೋದಿ ಅವರ ಆಯುಷ್ಯವೃದ್ಧಿಯಾಗಲಿ ಎಂದು ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಿದರು. ನಂತರ ಮೋದಿ ಅವರ 73ನೇ ಹುಟ್ಟುಹಬ್ಬದ ಸಂಖ್ಯೆಯ ಸಂಕೇತ ವಾಗಿ ದೇವಿ ಸನ್ನಿಧಿಯಲ್ಲಿ 73 ಈಡು ಗಾಯಿ ಹೊಡೆಯಲಾಯಿತು. ನಂತರ ಕುರುಬಾರಹಳ್ಳಿಯಲ್ಲಿ 21 ಪೌರಕಾರ್ಮಿಕರಿಗೆ ಮನೆ ನಿರ್ಮಿಸಲು ಶಂಕುಸ್ಥಾಪನೆ ನೆರವೇರಿಸಲಾಯಿತು. ಈ ವೇಳೆ ಪ್ರತಾಪ್ ಸಿಂಹ ಇತರರು 21 ಪೌರಕಾರ್ಮಿಕರ ಪಾದ ಪೂಜೆ ನೆರವೇರಿಸಿದರು. ಶಾಸಕ ಟಿ.ಎಸ್.ಶ್ರೀವತ್ಸ ಮೇಯರ್ ಶಿವಕುಮಾರ್, ಉಪ ಮೇಯರ್ ಡಾ.ರೂಪ, ನಗರ ಒಬಿಸಿ ಮೋರ್ಚಾ ಅಧ್ಯಕ್ಷ ಜೋಗಿ ಮಂಜು ಇನ್ನಿತರರು ಉಪಸ್ಥಿತರಿದ್ದರು.

ನೀರಿನ ಮಟ್ಟ

ಕೆಆರ್‌ಎಸ್ ಅಣೆಕಟ್ಟು	ಕಬಿನಿ ಅಣೆಕಟ್ಟು	ಹಾರಂಗಿ ಅಣೆಕಟ್ಟು
ಗರಿಷ್ಠ ಮಟ್ಟ 124.80 ಅಡಿ	ಗರಿಷ್ಠ ಮಟ್ಟ 2,284.00 ಅಡಿ	ಗರಿಷ್ಠ ಮಟ್ಟ 2,859.00 ಅಡಿ
ಇಂದಿನ ಮಟ್ಟ 96.94 ಅಡಿ	ಇಂದಿನ ಮಟ್ಟ 2,276.28 ಅಡಿ	ಇಂದಿನ ಮಟ್ಟ 2,858.21 ಅಡಿ
ಹಿಂದಿನ ವರ್ಷದ ಮಟ್ಟ 124.30 ಅಡಿ	ಹಿಂದಿನ ವರ್ಷದ ಮಟ್ಟ 2,282.96 ಅಡಿ	ಹಿಂದಿನ ವರ್ಷದ ಮಟ್ಟ 2,857.94 ಅಡಿ
ನಿನ್ನೆಯ ಮಟ್ಟ 97.16 ಅಡಿ	ನಿನ್ನೆಯ ಮಟ್ಟ 2,276.26 ಅಡಿ	ನಿನ್ನೆಯ ಮಟ್ಟ 2858.19 ಅಡಿ

ಸೆ.30ರೊಳಗೆ ಕಬ್ಬು ಬೆಳೆಗಾರರಿಗೆ ಹೆಚ್ಚುವರಿ ಹಣ ಕೊಡಿಸದಿದ್ದರೆ ವಿಧಾನಸೌಧ ಮುಂದೆ ಪ್ರತಿಭಟನೆ



ಕುರುಬೂರು ಶಾಂತಕುಮಾರ್ ಎಚ್ಚರಿಕೆ

ಮೈಸೂರು,ಸೆ.17(ಎಂಟಿವೈ)–ಸಕ್ಕರೆ ಕಾರ್ಖಾನೆಗಳಿಂದ ಕಬ್ಬು ಬೆಳೆಗಾರರಿಗೆ ಬರಬೇಕಾದ ಹೆಚ್ಚುವರಿ ಹಣವನ್ನು ಸೆ.30ರೊಳಗೆ ಕೊಡಿಸದಿದ್ದರೆ ವಿಧಾನ ಸೌಧದ ಮುಂದೆ ಪ್ರತಿಭಟನೆ ನಡೆಸುವುದಾಗಿ ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ತಿಳಿಸಿದ್ದಾರೆ.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಟನ್ ಕಬ್ಬಿಗೆ ಹೆಚ್ಚುವರಿ ದರ 150 ರೂ. ಕೊಡದೆ ಬಾಕಿ ಉಳಿಸಿಕೊಳ್ಳಲಾಗಿದೆ. ಸಕ್ಕರೆ ಕಾರ್ಖಾನೆಗಳ ಆಡಳಿತ ಮಂಡಳಿಗಳ ಉದ್ಧಟತನದಿಂದಾಗಿ ಕಬ್ಬು ಬೆಳೆಗಾರರು ಸಂಕಷ್ಟಕ್ಕೀಡಾಗಿದ್ದಾರೆ. ರಾಜ್ಯ ಸರ್ಕಾರ ಸಕ್ಕರೆ ಕಾರ್ಖಾನೆಗಳ ಆಡಳಿತ ಮಂಡಳಿಗೆ ಖಡಕ್ ಸೂಚನೆ ನೀಡಿ, ಬಾಕಿ ಉಳಿಸಿಕೊಂಡಿರುವ ಹಣವನ್ನು ರೈತರಿಗೆ ನೀಡುವಂತೆ ಆದೇಶಿಸಬೇಕು. ಸೆ.30ರೊಳಗೆ ಬಾಕಿ ಹಣ ರೈತರಿಗೆ ತಲುಪದಿದ್ದರೆ, ವಿಧಾನಸೌಧದ ಮುಂದೆ ನಿರಂತರವಾಗಿ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು.


ರಾಜ್ಯದಲ್ಲಿ 30 ಲಕ್ಷ ಕಬ್ಬು ಬೆಳೆಗಾರರು ಬರಗಾಲದಿಂದ ಸಂಕಷ್ಟ ಎದುರಿಸುತ್ತಿದ್ದಾರೆ. ನೀರಿಲ್ಲದೆ ಕಬ್ಬು ಬೆಳೆ ಒಣಗುತ್ತಿದೆ. ಇದರಿಂದ ಶೇ.40ರಷ್ಟು ಇಳುವರಿ ಕಡಿಮೆಯಾಗಿದೆ. ಸಕ್ಕರೆ ಕಾರ್ಖಾನೆಗಳು ರೈತರಿಂದ ಕಬ್ಬು ಖರೀದಿಸಲು ಪೈಪೋಟಿ ನಡೆಸುತ್ತಿದ್ದಾರೆ. ಸಕ್ಕರೆ ಉತ್ಪಾದನೆ ಕಡಿಮೆಯಾಗಿರುವ ಕಾರಣ ಕೇಂದ್ರ ಸರ್ಕಾರ ಸಕ್ಕರೆ ರಫ್ತು ನಿಷೇಧಿಸಿದೆ. ಆದರೆ ಕಬ್ಬಿನ ಎಫ್‌ಆರ್‌ಪಿ ದರವನ್ನು ಕಳೆದ ವರ್ಷಕ್ಕಿಂತ ಕೇವಲ 100 ರೂ. ಮಾತ್ರ ಏರಿಕೆ ಮಾಡಿ, ಟನ್‌ಗೆ 3150 ರೂ. ನಿಗದಿ ಮಾಡಿ ಅನ್ಯಾಯ ಮಾಡಿದೆ. ಸಕ್ಕರೆ ಕಾರ್ಖಾನೆಗಳು ಕಬ್ಬಿನಿಂದ ಎಥೆನಾಲ್ ಉತ್ಪಾದನೆ ಮಾಡಿ, ಹೆಚ್ಚು ಲಾಭಗಳಿಸುತ್ತಿವೆ. ಆದರೆ, ಕಬ್ಬು ಬೆಳೆಗಾರರಿಗೆ ಹೆಚ್ಚುವರಿ ಹಣ ನೀಡಲು ಹಿಂದೇಟು ಹಾಕಲಾಗುತ್ತಿದೆ ಎಂದರು.

ರೈತರ ಸಾಲ ಮನ್ನಾ ಮಾಡಲಿ: ರಾಜ್ಯ ಸರ್ಕಾರ ಬರಗಾಲ ಘೋಷಣೆ ಮಾಡಿದರೆ ಸಾಲದು, ಬರಗಾಲ ಘೋಷಣೆ ಮಾಡಿರುವ ಪ್ರದೇಶಗಳ ರೈತರ ಸಾಲವನ್ನು ಮನ್ನಾ ಮಾಡಬೇಕು. ಬೆಳೆ ನಷ್ಟ ಪರಿಹಾರ ಪ್ರತಿ ಎಕರೆಗೆ 25 ಸಾವಿರ ರೂ. ಪರಿಹಾರ ನೀಡಬೇಕು. ಬರ ಕಾಮಗಾರಿಯಲ್ಲಿ ಸಂಕಷ್ಟದ ರೈತರಿಗೆ ಎನ್‌ಆರ್ ಇಜಿ ಉದ್ಯೋಗ ಭರವಸೆ ಯೋಜನೆಯಡಿ ಅಕ್ಕಿ, ರಾಗಿ, ಗೋಧಿ, ಬೇಳೆ ವಿತರಿಸಬೇಕು. ಜಾನುವಾರುಗಳಿಗೆ ಕುಡಿಯುವ ನೀರು, ಮೇವು ಪೂರೈಕೆಗೆ ಕ್ರಮ ಕೈಗೊಳ್ಳಬೇಕು. ಹಗಲು ವೇಳೆ ಕೃಷಿ ಪಂಪ್‌ಸೆಟ್‌ಗಳಿಗೆ ಸಮರ್ಪಕ ವಿದ್ಯುತ್ ಪೂರೈಕೆ ಮಾಡಿ ಒಣಗುತ್ತಿರುವ ಬೆಳೆ ರಕ್ಷಣೆಗೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ತಮಿಳುನಾಡಿಗೆ ನೀರು ಹರಿಸಿ ಕಾವೇರಿ ಕಣಿವೆಯ ಜಲಾಶಯಗಳಲ್ಲಿ ನೀರು ಖಾಲಿಯಾಗಿದೆ. ಇದರಿಂದ ಈ ಭಾಗದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಕಾವೇರಿ ಕಣಿವೆಯನ್ನು ಬರಪೀಡಿತ ಪ್ರದೇಶವೆಂದು ಘೋಷಣೆ ಮಾಡಿ, ಪರಿಹಾರಕ್ಕೆ ಕ್ರಮ ಕೈಗೊಳ್ಳಬೇಕು. ಕಾವೇರಿ ಜಲಾನಯನ ಪ್ರದೇಶದ ಕೆಆರ್‌ಎಸ್, ಕಬಿನಿ, ಮೇಕೆದಾಟು, ಬಿಳಿಗುಂಡ್ಲು ಭಾಗದ ವಸ್ತುಸ್ಥಿತಿಯ ಅರಿಯಲು ಕರ್ನಾಟಕ ಜಲ ಸಂರಕ್ಷಣಾ ಸಮಿತಿಯ ಹತ್ತು ಮಂದಿ ಪರಿಣತರ ನಿಯೋಗ ಶೀಘ್ರವೇ ಭೇಟಿ ನೀಡಿ, ನೀರಿನ ಲಭ್ಯತೆ, ರೈತರ ಬೆಳೆ ನಷ್ಟ ಅಂದಾಜು, ಅಧ್ಯಯನ ನಡೆಸಿ, ವರದಿ ಸಲ್ಲಿಸಲಿದೆ ಎಂದರು.

ಸರಳ ದಸರಾ ಆಚರಿಸಲಿ: ಬರಗಾಲದಿಂದಾಗಿ ರೈತರು, ಕೂಲಿ ಕಾರ್ಮಿಕರು ತತ್ತರಿಸಿದ್ದಾರೆ. ಬರಗಾಲದ ತೀವ್ರತೆ ಹೆಚ್ಚಾಗಿರುವುದರಿಂದ ಅದ್ಧೂರಿ ದಸರಾ ಆಚರಿಸುವುದು ಸೂಕ್ತವಲ್ಲ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಸಾಂಪ್ರದಾಯಿಕ ಸರಳ ದಸರಾ ಆಚರಣೆ ಮಾಡಲು ಮುಂದಾಗಬೇಕು. ಸಂಕಷ್ಟದಲ್ಲೂ ಅದ್ಧೂರಿ ಆಚರಣೆ ಸರಿಯಾಗುವುದಿಲ್ಲ ಎಂದು ತಿಳಿಸಿದರು.

ದೇಶದ ಅಭಿವೃದ್ಧಿ ದೃಷ್ಟಿಯಿಂದ ಒಂದು ದೇಶ, ಒಂದು ಚುನಾವಣೆ ನಡೆಸುವುದು ಸೂಕ್ತ. ಇದರಿಂದ ಖರ್ಚು ಹಾಗೂ ಸಮಯ ಉಳಿತಾಯ ಮಾಡಲು ಸಹಕಾರಿಯಾಗಲಿದೆ. ಇದಕ್ಕೆ ಎಲ್ಲಾ ರಾಜಕೀಯ ಪಕ್ಷಗಳು ಬೆಂಬಲ ನೀಡಬೇಕು ಎಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಕಬ್ಬು ಬೆಳೆಗಾರರ ಸಂಘದ ಪದಾಧಿಕಾರಿಗಳಾದ ಅತ್ತಹಳ್ಳಿ ದೇವರಾಜ್, ಬರಡನಪುರ ನಾಗರಾಜ್, ಲಕ್ಷ್ಮೀಪುರ ವೆಂಕಟೇಶ್, ಹೆಗ್ಗೂರು ರಂಗರಾಜ್, ಕಾಟೂರು ಮಹದೇವಸ್ವಾಮಿ, ಮಾರ್ಬಳ್ಳಿ ನೀಲಕಂಠಪ್ಪ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

18.9.2023 ಸೋಮವಾರ, ಮಳೆ ನಕ್ಷತ್ರ: ಉತ್ತರಾ 14.09.2023ರಿಂದ 27.09.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಶುಕ್ಲ ಪಕ್ಷ, ತಿಥಿ: ತದಿಗೆ, ನಕ್ಷತ್ರ: ಚಿತ್ತ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

- **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.
- **ಎಸ್‌ಪಿವಿಜಿಎಂಸಿ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ:** 62ನೇ ಪಾರಂಪರಿಕ ಸಂಗೀತೋತ್ಸವ, ನಾದಸ್ವರ–ವಿದ್ವಾನ್ ಮೂರ್ತಿ ಕೊಡಿಯಾಲ, ವಯೋಲಿನ್–ವಿದ್ವಾನ್ ಕೇಶವ ಮೋಹನ್, ಮೃದಂಗ–ವಿದ್ವಾನ್ ಎ.ರಾದೇಶ್, ಘಟಂ–ವಿದ್ವಾನ್ ಶರತ್ ಕೌಶಿಕ್, ಸ್ಥಳ: 8ನೇ ಕ್ರಾಸ್, ವಿ.ವಿ.ಮೊಹಲ್ಲಾ, ಸಂಜೆ 6.45ಕ್ಕೆ.
- **ಮೈಸೂರು ಧಾರ್ಮಿಕ ಪ್ರತಿಷ್ಠಾನ, ಮೈಸೂರು ಕಲಾ ಪ್ರತಿಷ್ಠಾನ:** ಮೈಸೂರು ಗಣೇಶ ಉತ್ಸವ–2023, ಗಣೇಶ ವಿಗ್ರಹ ಪ್ರತಿಷ್ಠಾನ, ಸ್ಥಳ: ಮಾಧವಕೃಪ, ಬೆಳಗ್ಗೆಯಿಂದ.
- **ಶ್ರೀ ಶ್ರೀ ಶ್ರೀ 101 ಗಣಪತಿ ದೇವಸ್ಥಾನ ಟ್ರಸ್ಟ್:** ಶ್ರೀ ಗೌರಿ–ಗಣೇಶ ಹಬ್ಬ ಮತ್ತು ಶ್ರೀ 101 ಗಣಪತಿ ಪ್ರತಿಷ್ಠಾನ, 69ನೇ ವಾರ್ಷಿಕೋತ್ಸವದ ಪ್ರಯುಕ್ತ ವಿಶೇಷ ಪೂಜಾ ಮಹೋತ್ಸವ, ಬ್ರಾಹ್ಮಿ ಮುಹೂರ್ತದಲ್ಲಿ ಪುಣ್ಯಾಹ, ಪಂಚಗವ್ಯ ಸಾಧನೆ, ಪೋಷಣೆ, ರಕ್ಷಾಬಂಧನ, ಬೆಳಗ್ಗೆ 10 ಗಂಟೆಗೆ ಮಹಾರುದ್ರಾಭಿಷೇಕ, 101 ಗಣಪತಿಗೆ ತೈಲಾಭಿಷೇಕ, ಕ್ಷೀರಾಭಿಷೇಕ, ಪಂಚಾಮೃತ, ರಜತ ಕವಚಾಲಂಕಾರ, ವಿಶೇಷ ಹೂವಿನ ಅಲಂಕಾರ, ಸಂಜೆ 4ಕ್ಕೆ ಮಹಾ ಮಂಗಳಾರತಿ, ದಿವ್ಯಸಾನ್ನಿಧ್ಯ, ಶ್ರೀ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿಗಳು, ಸ್ಥಳ: ತ್ಯಾಗರಾಜ ವೃತ್ತ, ಕೆಆರ್ ಮೊಹಲ್ಲಾ.
- **ಇಂಡಿಯನ್ ಥಿಯೇಟರ್ ಫೌಂಡೇಶನ್:** ರಾಷ್ಟ್ರೀಯ ಮಕ್ಕಳ ರಂಗೋತ್ಸವ, ಜಿ.ಪಿ.ನಾಗರತ್ನಂ ದಿನ, ಉದ್ಘಾಟನೆ: ಖ್ಯಾತ ಸರೋದ್‌ವಾದಕ ರಾಜೀವ್ ತಾರನಾಥ್, ಸ್ಥಳ: ಹಾರ್ಡ್ವಿಕ್ ಪದವಿ ಪೂರ್ವ ಕಾಲೇಜು ಆವರಣ, ಮಧ್ಯಾಹ್ನ 3.30ಕ್ಕೆ.

ನಾಳಿನ ಪಂಚಾಂಗ

19.9.2023 ಮಂಗಳವಾರ, ಮಳೆ ನಕ್ಷತ್ರ: ಉತ್ತರಾ 14.09.2023ರಿಂದ 27.09.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಶುಕ್ಲ ಪಕ್ಷ, ತಿಥಿ: ಚೌತಿ, ನಕ್ಷತ್ರ: ಸ್ವಾತಿ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

- **ರಂಗಾಯಣ:** ರಂಗಭೀಷ್ಮ ಬಿ.ವಿ.ಕಾರಂತರ ಜನ್ಮ ದಿನಾಚರಣೆ ಅಂಗವಾಗಿ ಬಿ.ವಿ.ಕಾರಂತರ ಪುತ್ಥಳಿಗೆ ಮಾಲಾರ್ಪಣೆ, ಬೆಳಗ್ಗೆ 10.30ಕ್ಕೆ, ಸ್ಥಳ; ರಂಗಾಯಣದ ಆವರಣ, ಸಂಜೆ 6.30ಕ್ಕೆ ಶೈಕ್ಷಣಿಕ ರಂಗಭೂಮಿ ಉತ್ಸವ–2023 ಅಂಗವಾಗಿ ಪಿ.ಲಂಕೇಶ್ ಅವರ 'ಮುಟ್ಟಿಸಿಕೊಂಡವರು' ನಾಟಕ ಪ್ರದರ್ಶನ, ಸ್ಥಳ: ಭೂಮಿಗೀತ.
- **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನ, ಸ್ಥಳ: ಬೊಂಬೆ ಮನೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10 ಗಂಟೆಯಿಂದ ಸಂಜೆ 7ರವರೆಗೆ.

ಮೈಸೂರು ಆಕಾಶವಾಣಿ



ಸೋಮವಾರ: 18–09–2023

ಬೆಳಗ್ಗೆ: 6.10 ಚಿಂತನ: ಕಸ್ತೂರಿ ಗೋವಿಂದಮ್ಮಯ್ಯ, 6.15 ಗೀತಾರಾಧನ, 6.35 "ಅಂಚೆ–ಅಂಕನ ಆಕಾಶವಾಣಿ ಅಂಕಣ": ಪ್ರಾಯೋಜಿತ ಬಾನುಲಿ ಸರಣಿ, 6.40 ಪದಸಂಸ್ಕೃತಿ: ಪ್ರಸ್ತುತಿ–ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್, 7.15 ಕರುನಾಡ ಕಲ್ಪವೃಕ್ಷ: ಪ್ರಾಯೋಜಿತ ಕಾರ್ಯಕ್ರಮ, 8.30 ಗಣೇಶ ಚತುರ್ಥಿಯ ಸಂದರ್ಭದಲ್ಲಿ ವಿಶೇಷ ಸಂಗೀತ ವೈವಿಧ್ಯ "ಎಲ್ಲೆಲ್ಲೂ ಗಣಪ", ಪ್ರಸ್ತುತಿ–ಮೈಸೂರಿನ ಶಾರದಾ ಕಲಾಕೇಂದ್ರದ ವಿದ್ಯಾರ್ಥಿಗಳು, ನಿರೂಪಣಾ ಸಾಹಿತ್ಯ ಮತ್ತು ಸಂಗೀತ ನಿರ್ದೇಶನ– ವಿದುಷಿ ರೇಖಾ ವೆಂಕಟೇಶ್, 9.05 ನೆನಪಿನಂಗಳ: ಸಂಗೀತ ಶಾಸ್ತ್ರಜ್ಞರು, ಆಕಾಶವಾಣಿಯ ನಿವೃತ್ತ ಅಧಿಕಾರಿ ಎಸ್.ಕೃಷ್ಣಮೂರ್ತಿ ಅವರೊಂದಿಗೆ ಜಿ.ರಾಜಲಕ್ಷ್ಮಿ ಶ್ರೀಧರ್ ಅವರು ನಡೆಸಿದ್ದ ಸಂವಾದದ 2ನೇ ಭಾಗ, 10.00 ಲಯ ಸಂಭ್ರಮ: ಗಣೇಶ ಚತುರ್ಥಿ ಸಂದರ್ಭದಲ್ಲಿ ವಿಶೇಷ ಸಂಚಿಕೆ ಪರಿಕಲ್ಪನೆ ಹಾಗೂ ಪ್ರಸ್ತುತಿ–ಹೆಚ್.ಎಲ್.ಶಿವಶಂಕರಸ್ವಾಮಿ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ. **ಮಧ್ಯಾಹ್ನ:** 12.30 ದೇವರ ನಾಮ– ಪುತ್ತೂರು ನರಸಿಂಹ ನಾಯಕ್, ಎಂ.ರಾಘವೇಂದ್ರ, 12.45 ನಮ್ಮ ಆರೋಗ್ಯ: ಆಲ್ಝೈಮರ್ ಕಾಯಿಲೆ ಕುರಿತು ಡಾ.ಹನುಮಂತಾಚಾರ್, ಜೋಷಿ ಕೆ. ಅವರೊಂದಿಗೆ ಮಾತುಕತೆ, 1.00 ಪ್ರಗತಿ ಪಥ: ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 1.20 ಭಾವಗೀತೆ: ಕೆ.ಎಸ್. ಸುರೇಖಾ, 3.00 ಗೌರಿ ಗಣೇಶ ಹಬ್ಬದ ಪ್ರಯುಕ್ತ ಗೌರಿ ಗಣೇಶ ಕೃತಿಗಳು. **ಸಂಜೆ:** 4.00 ಮಹಿಳಾರಂಗ ವಿಶೇಷ ಕಾರ್ಯಕ್ರಮ: "ಚಂದನ ಸುಂದರಿ ಶ್ರೀ ಶಕ್ತಿ ಸ್ವರೂಪಿಣಿ ಶ್ರೀಗೌರಿ ಗೀತರೂಪಕ– ನಾದರೂಪಿಣೀ ಕಲಾ ಬಳಗದವರಿಂದ, 4.45 ಹಿಂದಿ ಪಾಠ: ಜಯಂತಿ ಪ್ರಸಾದ್ ನೌಟಿಯಾಲ್, 6.00 "ಅಂಚೆ–ಅಂಕನ ಆಕಾಶವಾಣಿ ಅಂಕಣ": ಪ್ರಾಯೋಜಿತ ಬಾನುಲಿ ಸರಣಿ, 6.50 ಕೃಷಿರಂಗ: "ಹಣ್ಣು ಹೊನ್ನು" ತೋಟಗಾರಿಕಾ ಬೆಳೆಗಳ ಸಮಗ್ರ ಬೇಸಾಯ ವಿಧಾನ ಕುರಿತ ಬಾನುಲಿ ಸರಣಿ. **ರಾತ್ರಿ:** 9.30 ಹಳ್ಳೀ ಹಾಡು: ಲಕ್ಷ್ಮೀ ಸಾಗರದ ಕೆಂಚಮ್ಮ ಮತ್ತು ಸಂಗಡಿಗರು, ಪ್ರಸ್ತುತಿ– ಅಬ್ದುಲ್ ರಶೀದ್.

ಮಂಗಳವಾರ: 19–09–2023

ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಶ್ರದ್ಧೆಯಶಿಲ್ಪ: ಲೇಖನ ಮತ್ತು ಪ್ರಸ್ತುತಿ–ಟಿ.ಎಸ್.ಗೋಪಾಲ್, 6.40 ಪದ ಸಂಸ್ಕೃತಿ: ಪ್ರಸ್ತುತಿ–ಡಾ.ಟಿ.ವಿ.ಸತ್ಯನಾರಾಯಣ, 7.15 ಕಾದಂಬರಿ ವಿಹಾರ– ನಾ ಕಸ್ತೂರಿ ಅವರ ರಂಗನಾಯಕಿ ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್ ಎಸ್.ಎಸ್., 8.30 ಕರೆಗೊಂದು ಗೀತೆ, 10.00 ಎಂ.ಕೆ. ಸರಸ್ವತಿ–ವೀಣಾವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ. **ಮಧ್ಯಾಹ್ನ:** 12.05 ವನಿತಾ ವಿಹಾರ, 12.30 ದೇವರನಾಮ– ಪಿ. ರಮಾ, 12.45 ಉದ್ಯಾನದ ಉದ್ಯಮಿ ಮೈಸೂರಿನ ಕೃಷ್ಣ ಸಿ. ಆರೊಂದಿಗೆ ಸಂದರ್ಶನ, ಸಂದರ್ಶಕರು– ದಿವಾಕರ ಹೆಗಡೆ, 1.20 ಭಾವಗೀತೆಗಳು: ಹೆಚ್.ಆರ್. ವಿಜಯಾ 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಎಸ್. ಕಲ್ಯಾಣರಾಮನ್– ಹಾಡುಗಾರಿಕೆ. **ಸಂಜೆ:** 4.00 ಕಥಾಕಾಲಕ್ಷೇ– "ಗಜ ಗೌರಿ ವ್ರತ": ವಿದ್ವಾನ್ ಆರ್. ಗುರುರಾಜುಲು ನಾಯ್ಡು, 6.50 ಕೃಷಿರಂಗ: ತರಕಾರಿ ಬೇಸಾಯ ಕುರಿತು ಬಿ.ಎಸ್. ಅನಸೂಯ ಅವರೊಂದಿಗೆ ಸಂದರ್ಶನ. **ರಾತ್ರಿ:** 9.30 ಕೆ.ಎಸ್. ಹೇರಂಬ ಮತ್ತು ಕೆ.ಎಸ್. ಹೇಮಂತ್– ಯುಗಳ ವೇಣುವಾದನ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 18 ಸೋಮವಾರ 2023

ಸಂಪುಟ: 44 | ಸಂಚಿಕೆ: 154 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಪ್ರಧಾನಿ ಮೋದಿ ಅವರಿಂದ 13,000 ಕೋಟಿ ರೂ.ಗಳ
ಪಿಎಂ ವಿಶ್ವಕರ್ಮ ಯೋಜನೆಗೆ ಚಾಲನೆ




ವಿಶ್ವಕರ್ಮ ಜಯಂತಿ ದಿನದಂದು ಪ್ರಧಾನಿ ನರೇಂದ್ರ ಮೋದಿ ವಿಶ್ವಕರ್ಮರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

ಯಾರಿಗೆ ಲಾಭ? ಮೊದಲ ಹಂತದಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶಗಳ 18 ಸಾಂಪ್ರದಾಯಿಕ ಉದ್ಯಮಗಳನ್ನು ಯೋಜನೆ ವ್ಯಾಪ್ತಿಗೆ ತರಲಾಗಿದೆ. ಅವುಗಳೆಂದರೆ ಬಡಗಿ, ಬೋಟ್ ನಿರ್ಮಾಣ ಮಾಡುವವರು, ಕಮ್ಮಾರ, ಸುತ್ತಿಗೆ ಮತ್ತು ಟೂಲ್‌ಕಿಟ್ ನಿರ್ಮಾಣ ಮಾಡುವವರು, ಶಸ್ತ್ರಾಸ್ತ್ರ ತಯಾರಿಸುವವರು, ಬೀಗ ತಯಾರಿಸುವವರು, ಅಕ್ಕಸಾಲಿಗ, ಕುಂಬಾರರು, ಶಿಲ್ಪ ಕೆತ್ತನೆ ಮಾಡುವವರು, ಚಮ್ಮಾರ, ಮೇಸ್ತ್ರಿ, ಮ್ಯಾಟ್/ಹಿಡಿ/ಬಾಸ್ಕೆಟ್ ತಯಾರಿಸುವವರು, ಸಾಂಪ್ರದಾಯಿಕ ಗೊಂಬೆ ತಯಾರಿಸುವವರು, ಕ್ಷೌರಿಕರು, ಹೂವಿನ ಹಾರ ತಯಾರಿಸುವವರು, ಧೋಬಿ, ದರ್ಜಿ, ಮೀನುಗಾರಿಕೆ ನೆಟ್ ತಯಾರಿಸುವವರಿಗೆ ನೀಡಲಾಗುವುದು. ಈ ಪೈಕಿ ಮೊದಲ ಹಂತದಲ್ಲಿ 1 ಲಕ್ಷ ರೂ. ಮತ್ತು 2ನೇ ಹಂತದಲ್ಲಿ 2 ಲಕ್ಷ ರೂ. ಸಾಲ ವಿತರಿಸಲಾಗುತ್ತದೆ.

ನವದೆಹಲಿ, ಸೆ.17– 'ವಿಶ್ವಕರ್ಮ ಜಯಂತಿ'ಯಂದು ಪ್ರಧಾನಿ ನರೇಂದ್ರ ಮೋದಿ ಅವರು 13,000 ಕೋಟಿ ರೂ. ಗಳ 'ಪಿಎಂ ವಿಶ್ವಕರ್ಮ' ಯೋಜನೆಗೆ ಭಾನುವಾರ ಚಾಲನೆ ನೀಡಿದರು.

ಈ ಯೋಜನೆ ಅಡಿಯಲ್ಲಿ ಸಾಂಪ್ರದಾಯಿಕ ಕುಶಲಕರ್ಮಿಗಳಿಗೆ ಕನಿಷ್ಠ ಬಡ್ಡಿ ದರದಲ್ಲಿ ಸಾಲ ನೀಡಲಾಗುತ್ತದೆ. ಭಾನುವಾರ ಇಂಡಿಯಾ ಇಂಟರ್‌ನ್ಯಾಷನಲ್ ಕನ್ವೆನ್ಷನ್ ಮತ್ತು ಎಕ್ಸ್‌ಪೋ ಸೆಂಟರ್‌ನಲ್ಲಿ ಪ್ರಧಾನಿ ಮೋದಿ ಅವರು 'ಪಿಎಂ ವಿಶ್ವಕರ್ಮ' ಯೋಜನೆಗೆ ಚಾಲನೆ ನೀಡಿದರು. ಮುಂದಿನ 5 ವರ್ಷಗಳ ಅವಧಿಯಲ್ಲಿ ಈ ಯೋಜನೆಗಾಗಿ ಕೇಂದ್ರ ಸರ್ಕಾರ 13,000 ಕೋಟಿ ರೂ. ವೆಚ್ಚ ಮಾಡಲಿದೆ. ಈ ಯೋಜನೆ ಅಡಿ ನೇಕಾರರು, ಅಕ್ಕಸಾಲಿಗರು, ಕಮ್ಮಾರರು, ಲಾಂಡ್ರಿ ಕಾರ್ಮಿಕರು ಮತ್ತು ▸ 8ನೇ ಪುಟಕ್ಕೆ

ಹೊಸ ಸಂಸತ್ ಭವನದಲ್ಲಿ ನಾಳೆ ಅಧಿವೇಶನ ಆರಂಭ



"ಸಂಸತ್ತಿನಲ್ಲಿ ಮಹಿಳಾ ಮೀಸಲಾತಿ ಮಸೂದೆಯನ್ನು ಮಂಡಿಸಿದರೆ ಒಮ್ಮತದಿಂದ ಅಂಗೀಕಾರವಾಗುವ ವಿಶ್ವಾಸವಿದೆ.
–ಪ್ರಹ್ಲಾದ್ ಜೋಶಿ

ನವದೆಹಲಿ, ಸೆ.17– ಸೋಮವಾರದಿಂದ ಐದು ದಿನ ಸಂಸತ್ ವಿಶೇಷ ಅಧಿವೇಶನ ಆರಂಭವಾಗಲಿದ್ದು, ಮೊದಲ ದಿನದ ಅಧಿವೇಶನ ಹಳೆಯ ಸಂಸತ್ ಕಟ್ಟಡದಲ್ಲಿಯೇ ನಡೆಯಲಿದೆ. ಸೆಪ್ಟೆಂಬರ್ 19ರಂದು ಹೊಸ ಸಂಸತ್ ಭವನದಲ್ಲಿ ಅಧಿವೇಶನ ಆರಂಭವಾಗಲಿದೆ ಎಂದು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ್ ಜೋಷಿ ತಿಳಿಸಿದ್ದಾರೆ.

ಸರ್ವಪಕ್ಷ ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸೆ.20ರಿಂದ ನೂತನ ಸಂಸತ್ ಭವನದಲ್ಲಿ ನಿಯಮಿತ ಸರ್ಕಾರಿ ಕೆಲಸಗಳು ಆರಂಭವಾಗಲಿವೆ. ಸಂಸತ್ ವಿಶೇಷ ಅಧಿವೇಶನದ ಮೊದಲ ದಿನದ ಅಧಿವೇಶನ ನಾಳೆ ಹಳೆಯ ಸಂಸತ್ ಕಟ್ಟಡದಲ್ಲಿಯೇ ನಡೆಯಲಿದೆ. ಸೆ.19ರಂದು ಹಳೆಯ ಸಂಸತ್ ಕಟ್ಟಡದಲ್ಲಿ ಫೋಟೋ ಸೆಷನ್ಸ್ ಇರಲಿದೆ. ನಂತರ ಅಂದು ಬೆಳಗ್ಗೆ 11 ಗಂಟೆಗೆ ಸೆಂಟ್ರಲ್ ಹಾಲ್‌ನಲ್ಲಿ ಕಾರ್ಯಕ್ರಮವಿರಲಿದೆ. ಬಳಿಕ ನಾವು ಹೊಸ ಸಂಸತ್ ಕಟ್ಟಡ ಪ್ರವೇಶಿಸುವುದಾಗಿ ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ವಿವರಿಸಿದರು.

ಸರ್ವಪಕ್ಷ ಸಭೆ: ಸೋಮವಾರದಿಂದ ಪ್ರಾರಂಭವಾಗುವ ಐದು ದಿನಗಳ ಸಂಸತ್ ವಿಶೇಷ ಅಧಿವೇಶನದಲ್ಲಿ ಮಹಿಳಾ ಮೀಸಲಾತಿ ಮಸೂದೆ ಮಂಡಿಸಿ ಅಂಗೀಕರಿಸುವಂತೆ ಆಡಳಿತ ಮತ್ತು ವಿರೋಧ ಪಕ್ಷಗಳು ಸೇರಿದಂತೆ ಹಲವು ಪ್ರಾದೇಶಿಕ ಪಕ್ಷಗಳು ಭಾನುವಾರ ಆಗ್ರಹಿಸಿವೆ.

ಕೇಂದ್ರ ಸರ್ಕಾರ ಕರೆದಿದ್ದ ಸರ್ವ ಪಕ್ಷಗಳ ಸಭೆಯಲ್ಲಿ ಹಲವು ನಾಯಕರು, ಬಹುಕಾಲದಿಂದ ಬಾಕಿ ಉಳಿದಿರುವ ಮಹಿಳಾ ಮೀಸಲಾತಿ ಮಸೂದೆಯನ್ನು ಮಂಡಿಸಬೇಕು ಎಂದು ಹೇಳಿದ್ದು, ಒಮ್ಮತದಿಂದ ಅಂಗೀಕಾರವಾಗಬಹುದೆಂದು ಆಶಿಸಿದ್ದಾರೆ. ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ 3ನೇ ಒಂದು ಭಾಗದಷ್ಟು ಸ್ಥಾನಗಳನ್ನು ಮೀಸಲಿಡಲು ಮಹಿಳಾ ಮೀಸಲಾತಿ ಮಸೂದೆ ಪ್ರಯತ್ನಿಸುತ್ತಿದೆ. ಬಿಜೆಡಿ ಮತ್ತು ಬಿಆರ್‌ಎಸ್ ಸೇರಿದಂತೆ ಹಲವಾರು ಪ್ರಾದೇಶಿಕ ಪಕ್ಷಗಳು ಮಹಿಳಾ ಮೀಸಲಾತಿ ಮಸೂದೆಯನ್ನು ಮಂಡಿಸಲು ▸ 8ನೇ ಪುಟಕ್ಕೆ

ಭಾರತ ಏಷ್ಯಾ ಕಪ್ ಚಾಂಪಿಯನ್



- 8ನೇ ಬಾರಿ ಪ್ರಶಸ್ತಿ ಪಡೆದ ಇಂಡಿಯಾ
- ಶ್ರೀಲಂಕಾಗೆ ಹೀನಾಯ ಸೋಲು
- ಕುಲದೀಪ್ ಯಾದವ್ ಸರಣಿ ಶ್ರೇಷ್ಠ

ಕೊಲಂಬೊ, ಸೆ.17– ಏಕಪಕ್ಷೀಯವಾಗಿ ನಡೆದ ಫೈನಲ್ ಪಂದ್ಯದಲ್ಲಿ ಶ್ರೀಲಂಕಾವನ್ನು 10 ವಿಕೆಟ್‌ಗಳಿಂದ ಮಣಿಸಿದ ಭಾರತ, ಏಷ್ಯಾಕಪ್ ಚಾಂಪಿಯನ್ ಆಗಿ ಹೊರಹೊಮ್ಮಿದೆ. ಆ ಮೂಲಕ ಭಾರತ 8ನೇ ಬಾರಿಗೆ ಟ್ರೋಫಿ ಮುಡಿಗೇರಿಸಿಕೊಂಡ ಸಾಧನೆಯೊಂದಿಗೆ ಭಾರತೀಯರಿಗೆ ಗೌರಿ ಗಣೇಶ ಹಬ್ಬದ ಗಿಫ್ಟ್ ನೀಡಿದೆ.

ಇಲ್ಲಿನ ಆರ್.ಪ್ರೇಮದಾಸ ಕ್ರೀಡಾಂಗಣದಲ್ಲಿ ನಡೆದ ಏಷ್ಯಾಕಪ್ ಫೈನಲ್ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಶ್ರೀಲಂಕಾ ನಿರೀಕ್ಷಿತ ಆರಂಭ ಪಡೆಯಲಿಲ್ಲ. ಇನ್ನಿಂಗ್ಸ್‌ನ ಮೊದಲ ಓವರ್‌ನಲ್ಲೇ ಜಸ್‌ಪ್ರೀತ್ ಬುಮ್ರಾ ಅವರು ಕುಶಾಲ್ ಪೆರೇರಾ ಅವರನ್ನು ಶೂನ್ಯಕ್ಕೆ ಔಟ್ ಮಾಡಿದರು. ಬಳಿಕ ದಾಳಿಗಿಳಿದ ಮೊಹಮ್ಮದ್ ಸಿರಾಜ್ ತಮ್ಮ 2ನೇ ಓವರ್‌ನಲ್ಲಿ ಪಂದ್ಯದ ದಿಕ್ಕನ್ನೇ ಬದಲಿಸಿದರು. ಆರು ಎಸೆತಗಳ ಅಂತರದಲ್ಲಿ ಪಥುಮ ನಿಸಾಂಕ(2), ಸದೀರ ಸಮರವಿಕ್ರಮ(0), ಚರಿತಾ ಅಸಲಂಕ(0), ಹಾಗೂ ಧನಂಜಯ ಡಿಸಿಲ್ವಾ(4), ಅವರುಗಳ ವಿಕೆಟ್ ಉರುಳಿಸಿದರು. ▸ 8ನೇ ಪುಟಕ್ಕೆ

ಪ್ರಶಸ್ತಿ ವಿವರ

ಅತ್ಯುತ್ತಮ ಕ್ಯಾಚ್: ರವೀಂದ್ರ ಜಡೇಜಾ (ಭಾರತ) 3000 ಯುಎಸ್ ಡಾಲರ್ ನಗದು ಬಹುಮಾನ (ಭಾರತೀಯ ಮೌಲ್ಯ 2.4 ಲಕ್ಷ ರೂ.)

ಪಂದ್ಯ ಶ್ರೇಷ್ಠ: ಮೊಹಮ್ಮದ್ ಸಿರಾಜ್ (ಭಾರತ) 5000 ಯುಎಸ್ ಡಾಲರ್ ನಗದು ಬಹುಮಾನ (ಭಾರತೀಯ ಮೌಲ್ಯ 4 ಲಕ್ಷ ರೂ.)

ಸರಣಿ ಶ್ರೇಷ್ಠ: ಕುಲ್ದೀಪ್ ಯಾದವ್ (ಭಾರತ)– 15000 ಯುಎಸ್ ಡಾಲರ್ ನಗದು ಬಹುಮಾನ (ಭಾರತೀಯ ಮೌಲ್ಯ 12 ಲಕ್ಷ ರೂ.)

ರನ್ನರ್ಸ್ ಅಪ್: ಶ್ರೀಲಂಕಾ– 75,000 ಯುಎಸ್ ಡಾಲರ್ ನಗದು ಬಹುಮಾನ (ಭಾರತೀಯ ಮೌಲ್ಯ 62 ಲಕ್ಷ)

ವಿನ್ನರ್ಸ್: ಭಾರತ– 150,000 ಯುಎಸ್ ಡಾಲರ್ ನಗದು ಬಹುಮಾನ (ಭಾರತೀಯ ಮೌಲ್ಯ 1.25 ಕೋಟಿ ರೂ.)

ವಿಶೇಷ ಪ್ರಶಸ್ತಿ ಮೊತ್ತ: ಮೈದಾನದ ಸಿಬ್ಬಂದಿಗಳಿಗೆ 50,000 ಯುಎಸ್ ಡಾಲರ್ ನಗದು (ಭಾರತೀಯ ಮೌಲ್ಯ 41 ಲಕ್ಷ)

"ಮೊಹಮ್ಮದ್ ಸಿರಾಜ್ ಅವರ ಬೌಲಿಂಗ್ ದಾಳಿ ಕಂಡು ಬೆರಗಾದೆ. ಟೀಂ ಇಂಡಿಯಾ ಕಲಿಗಳ ಗೆಲುವಿನ ನಾಗಾಲೋಟ ಹೀಗೇ ಮುಂದುವರಿಯಲಿ. ಜೈಹೋ ಟೀಂ ಇಂಡಿಯಾ!
–ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ.

ಲಂಕಾ ಗ್ರೌಂಡ್ ಸಿಬ್ಬಂದಿಗೆ ಪ್ರಶಸ್ತಿ ಮೊತ್ತ ನೀಡಿದ ಸಿರಾಜ್





ಕೊಲೊಂಬೊ: 6 ವಿಕೆಟ್ ಪಡೆದು ಏಷ್ಯಾಕಪ್ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ ಮೊಹಮ್ಮದ್ ಸಿರಾಜ್ ಪಂದ್ಯದಲ್ಲಿ ಮಾತ್ರವಲ್ಲ, ಪಂದ್ಯದ ಬಳಿಕವೂ ಅಭಿಮಾನಿಗಳ ಮನಸ್ಸು ಗೆದ್ದಿದ್ದಾರೆ. ಪಂದ್ಯಶ್ರೇಷ್ಠ ಪ್ರಶಸ್ತಿ ಸ್ವೀಕರಿಸಿದ ಸಿರಾಜ್, ಪ್ರಶಸ್ತಿ ಮೊತ್ತವನ್ನು ಶ್ರೀಲಂಕಾ ಗ್ರೌಂಡ್ ಸ್ಟಾಫ್‌ಗೆ ನೀಡಿದ್ದಾರೆ. ಪಂದ್ಯಶ್ರೇಷ್ಠ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಸಿರಾಜ್, ಬಹುಮಾನ ಮೊತ್ತವನ್ನು ಶ್ರೀಲಂಕಾದ ಗ್ರೌಂಡ್ ಸಿಬ್ಬಂದಿಗೆ ನೀಡುವುದಾಗಿ ಘೋಷಿಸಿದರು. ಶ್ರೀಲಂಕಾದಲ್ಲಿನ ಬಹುತೇಕ ಎಲ್ಲಾ ಪಂದ್ಯಕ್ಕೆ ಮಳೆ ಅಡ್ಡಿಯಾಗಿತ್ತು. ಆದರೆ ಲಂಕಾ ಗ್ರೌಂಡ್ ಸಿಬ್ಬಂದಿ ಸತತವಾಗಿ ಕೆಲಸ ಮಾಡಿದ್ದಾರೆ. ಪಂದ್ಯ ಮತ್ತೆ ಆರಂಭಗೊಳ್ಳುವಂತೆ ಮಾಡಿದ್ದಾರೆ. ಅವಿರತ ಪರಿಶ್ರಮದ ಮೂಲಕ ಪಂದ್ಯಕ್ಕೆ ಅನುವು ಮಾಡಿಕೊಟ್ಟಿದ್ದಾರೆ ಎಂದು ಸಿರಾಜ್ ಹೇಳಿದ್ದಾರೆ.

ಶುಭಾಶಯಗಳು



"ನಾಡಿನ ಸಮಸ್ತರಿಗೂ ಗೌರಿ–ಗಣೇಶ ಹಬ್ಬದ ಶುಭಾಶಯಗಳು

ಬಿಡುವು

ಗೌರಿ–ಗಣೇಶ ಹಬ್ಬದ ಪ್ರಯುಕ್ತ ಇಂದು ನಮ್ಮ ಕಾರ್ಯಾಲಯಕ್ಕೆ ರಜೆ ಇರುವುದರಿಂದ 19.9.2023ರ ಮಂಗಳವಾರದ 'ಮೈಸೂರು ಮಿತ್ರ' ಸಂಚಿಕೆ ಪ್ರಕಟವಾಗುವುದಿಲ್ಲ.
–ವ್ಯವಸ್ಥಾಪಕರು

ಮೂರು ಡಿಸಿಎಂ ಸ್ಥಾನಕ್ಕೆ ಬೇಡಿಕೆ: ಹೈಕಮಾಂಡ್ ನಿರ್ಧಾರಕ್ಕೆ ಬದ್ಧ



ಸಿದ್ದರಾಮಯ್ಯ

ಕಲಬುರಗಿ, ಸೆ.17– ರಾಜ್ಯದಲ್ಲಿ ಇನ್ನೂ ಮೂರು ಉಪಮುಖ್ಯಮಂತ್ರಿ ಹುದ್ದೆ ಸೃಷ್ಟಿಸಬೇಕು ಎಂಬ ತಮ್ಮ ಸಂಪುಟದ ಸಚಿವರ ಬೇಡಿಕೆಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಈ ಕುರಿತು ಪಕ್ಷದ ಹೈಕಮಾಂಡ್ ಅಂತಿಮ ತೀರ್ಮಾನ ತೆಗೆದುಕೊಳ್ಳಲಿದೆ ಮತ್ತು ಹೈಕಮಾಂಡ್ ನಿರ್ಧಾರಕ್ಕೆ ತಾವು ಬದ್ಧ ಎಂದು ಭಾನುವಾರ ಹೇಳಿದ್ದಾರೆ.

ರಾಜ್ಯದಲ್ಲಿ ಇನ್ನೂ ಮೂವರು ಉಪಮುಖ್ಯಮಂತ್ರಿಗಳನ್ನು ಮಾಡಬೇಕು ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ಅವರು ಶನಿವಾರ ಹೇಳಿದ್ದರು ಮತ್ತು 2024ರ ಲೋಕಸಭೆ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಕಾಂಗ್ರೆಸ್ ಹೈಕಮಾಂಡ್‌ಗೆ ಈ ಸಂಬಂಧ ಪತ್ರ ಬರೆಯುವುದಾಗಿ ತಿಳಿಸಿದ್ದರು.

ಇದು ಸಚಿವರ ವೈಯಕ್ತಿಕ ಅಭಿಪ್ರಾಯವಾಗಿದ್ದು, ಅದನ್ನು ಪಕ್ಷದ ನಾಯಕತ್ವದ ಮುಂದೆ ಪ್ರಸ್ತಾಪಿಸುವುದಾಗಿ ತಿಳಿಸಿದ ಸಿಎಂ, ಈ ಬಗ್ಗೆ ತಾವು ಯಾವುದೇ ಹೇಳಿಕೆ ನೀಡುವುದಿಲ್ಲ ಮತ್ತು ಅದನ್ನು ಹೈಕಮಾಂಡ್ ನಿರ್ಧರಿಸುತ್ತದೆ ಎಂದು ಸ್ಪಷ್ಟಪಡಿಸಿದ್ದಾರೆ.

ರಾಜಣ್ಣ ಅವರು ತಮ್ಮ ಅಭಿಪ್ರಾಯ ತಿಳಿಸಿದ್ದಾರೆ. ಆದರೆ ಅಂತಿಮವಾಗಿ ಹೈಕಮಾಂಡ್ ತೀರ್ಮಾನಿಸಬೇಕಾಗಿದೆ. ಒಬ್ಬ ಉಪಮುಖ್ಯಮಂತ್ರಿ ಸಾಕು ಎಂದು ಹೈಕಮಾಂಡ್ ಹೇಳಿತ್ತು ಮತ್ತು ಒಬ್ಬರನ್ನು ನೇಮಿಸಿದೆ. ಇನ್ನೂ ಮೂರು ಡಿಸಿಎಂ ಸ್ಥಾನಕ್ಕಾಗಿ ಅವರು (ರಾಜಣ್ಣ) ಹೈಕಮಾಂಡ್ ಜೊತೆ ಮಾತನಾಡುವುದಾಗಿ ಹೇಳಿದ್ದಾರೆ. ಮಾತನಾಡಲಿ ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಅಪರಿಚಿತ ವಾಹನಕ್ಕೆ ಕಾರು ಡಿಕ್ಕಿ

- ನಿವೃತ್ತ ಸೈನಿಕ ಸಾವು, ನಾಲ್ವರಿಗೆ ಗಂಭೀರ ಗಾಯ
- ಅಪಘಾತದಲ್ಲಿ ಹೊತ್ತಿ ಉರಿದ ಕಾರು





ಶ್ರೀರಂಗಪಟ್ಟಣ, ಸೆ.17–ನಿಯಂತ್ರಣ ತಪ್ಪಿದ ಕಾರು ಅಪರಿಚಿತ ವಾಹನಕ್ಕೆ ಡಿಕ್ಕಿ ಹೊಡೆದ ಪರಿಣಾಮ ಮಾಜಿ ಸೈನಿಕ ಸಾವನ್ನಪ್ಪಿ, ನಾಲ್ವರು ತೀವ್ರವಾಗಿ ಗಾಯಗೊಂಡ ಘಟನೆ ಶ್ರೀರಂಗಪಟ್ಟಣ ತಾಲೂಕು ನಗುವಿನಹಳ್ಳಿ ಬಳಿ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಭಾನುವಾರ ಮುಂಜಾನೆ ಸಂಭವಿಸಿದೆ.

ಆನೇಕಲ್ ತಾಲೂಕಿನ ನಿವೃತ್ತ ಸೈನಿಕ ಕಿಶೋರ್ ಬಾಬು(45) ಅಪಘಾತದಲ್ಲಿ ಸಾವನ್ನಪ್ಪಿದವರಾಗಿದ್ದು, ಇವರೊಂದಿಗೆ ಪ್ರಯಾಣಿಸುತ್ತಿದ್ದ ನವೀನ್ ಬಾಬು, ಯುವರಾಜ, ರಮೇಶ್ ಮತ್ತು ಧನಪಾಲ್ ಎಂಬುವರು ತೀವ್ರವಾಗಿ ಗಾಯಗೊಂಡಿದ್ದು, ಅವರನ್ನು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿದೆ.

ಆನೇಕಲ್‌ನಿಂದ ಮಹೇಂದ್ರ ಎಕ್ಸ್‌ಯುವಿ ಕಾರಿನಲ್ಲಿ ಊಟಿಗೆ ಇವರು ಪ್ರಯಾಣಿಸುತ್ತಿದ್ದರು ಎಂದು ಹೇಳಲಾಗಿದ್ದು, ವೇಗವಾಗಿ ಬರುತ್ತಿದ್ದ ಇವರ ಕಾರು ನಗುವಿನಹಳ್ಳಿ ಬಳಿ ನಿಯಂತ್ರಣ ತಪ್ಪಿ ಅಪರಿಚಿತ ವಾಹನಕ್ಕೆ ಡಿಕ್ಕಿ ಹೊಡೆದು ಪಲ್ಟಿಯಾಗಿದೆ. ಈ ರಭಸಕ್ಕೆ ಕಾರು ಸಂಪೂರ್ಣವಾಗಿ ಸುಟ್ಟು ಕರಕಲಾಗಿದ್ದು, ಈ ವೇಳೆ ಸ್ಥಳೀಯರು ಕಾರಿನಲ್ಲಿದ್ದವರನ್ನು ರಕ್ಷಿಸಿದ್ದಾರೆ. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ▸ 8ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಪತ್ನಿ : ರೀ... ಮದುವೆ ಆದ ಮೇಲೆ ನೀವು ನನ್ನ ಪ್ರೀತಿ ಮಾಡ್ತಾ ಇಲ್ಲಾ?

ಪತಿ : ಅಲ್ವೇ, ಪರೀಕ್ಷೆ ಪಾಸ್ ಆದ ನಂತರ ಮತ್ತೆ ಯಾರ್‍ತಾನೆ ಓದ್ತಾರೆ?!

ಮೈಸೂರು ಮಿತ್ರ

ಸೋಮವಾರ, 18 ಸೆಪ್ಟೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

'ಒಳ್ಳೆಯ ಸ್ವಭಾವವಿರುವ ವ್ಯಕ್ತಿ, ಗಣಿತದಲ್ಲಿರುವ ಶೂನ್ಯದಂತೆ. ಅವರು, ಯಾರ ಜೊತೆ ಇದ್ದರೂ ಅವರ ಬೆಲೆ ಹೆಚ್ಚುತ್ತಲೇ ಇರುತ್ತದೆ'

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅಗೆದಷ್ಟು ಆಳ, ಜಗಿದಷ್ಟು ರುಚಿ.

ನಿಮ್ಮ ಪತ್ರಗಳು

ಪಕ್ಷದ ವೇದಿಕೆಯಲ್ಲಿ ಚರ್ಚಿಸಿ

ಮಾನ್ಯರೆ,

ಕಾಂಗ್ರೆಸ್ ಪಕ್ಷದ ಹಿರಿಯ ನಾಯಕ ಹಾಗೂ ವಿಧಾನಪರಿಷತ್ತಿನ ಸದಸ್ಯ ಬಿ.ಕೆ. ಹರಿಪ್ರಸಾದ್ ಮುಖ್ಯಮಂತ್ರಿ ಸಿದ್ದರಾಮಯ್ಯನವರ ವಿರುದ್ದ ನಿರಂತರವಾಗಿ ಹರಿಹಾಯುತ್ತಿರುವುದು ಮಾಧ್ಯಮಗಳಲ್ಲಿ ವ್ಯಾಪಕ ಪ್ರಚಾರ ಪಡೆಯುತ್ತಿದೆ. ಬಿ.ಕೆ.ಹರಿಪ್ರಸಾದ್ ಅವರು ರಾಜ್ಯಸಭೆಯ ಮಾಜಿ ಸದಸ್ಯರೂ ಕೂಡ ಆಗಿದ್ದು, ಕೆಲವು ರಾಜ್ಯಗಳಲ್ಲಿ ಕಾಂಗ್ರೆಸ್ ಉಸ್ತುವಾರಿಯಾಗಿ ಕೆಲಸ ಮಾಡಿದಂತಹವರು. ಮುಖ್ಯಮಂತ್ರಿಗಳನ್ನು ಸೃಷ್ಟಿಸುವುದು ಹಾಗೂ ಇಳಿಸುವುದು ತಮಗೆ ಕರಗತವಾಗಿದೆ ಎಂದು ಬಹಿರಂಗವಾಗಿ ಹೇಳಿಕೊಂಡವರು. ಪಕ್ಷದಲ್ಲಿನ ತಮ್ಮ ಹಿರಿತನ ಪರಿಗಣಿಸಿ, ತಮಗೆ ರಾಜ್ಯ ಸಚಿವ ಸಂಪುಟದಲ್ಲಿ ಅವಕಾಶ ಸಿಗಬಹುದೆಂದು ಭಾವಿಸಿದ್ದ ಅವರಿಗೆ ತೀವ್ರ ನಿರಾಸೆಯಾಗಿರುವುದು ಸಹಜವಾಗಿದೆ. ಬಿ.ಕೆ.ಹರಿಪ್ರಸಾದ್ ರೀತಿಯಲ್ಲಿ ಅನೇಕ ಅರ್ಹರಿಗೆ ಮಂತ್ರಿ ಪದವಿ ದೊರಕದಿರುವುದನ್ನು ಸಹ ಇಲ್ಲಿ ಉಲ್ಲೇಖ ಮಾಡಬಹುದು. ಆದರೆ, ಅದಕ್ಕೆಲ್ಲಾ ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಕಾರಣ ಎಂದು ಹರಿಪ್ರಸಾದ್ ಭಾವಿಸಿದ ಹಾಗೇ ತೋರುತ್ತದೆ. ಹೀಗಾಗಿಯೇ ಅವರು ಸಿದ್ದರಾಮಯ್ಯನವರ ವಿರುದ್ಧ ನಿರಂತರ ವಾಗ್ದಾಳಿ ನಡೆಸುತ್ತಿದ್ದಾರೆ. ಎಷ್ಟರ ಮಟ್ಟಿಗೆ ಎಂದರೇ ಖಾಲಿ ಇರುವ ವಿರೋಧ ಪಕ್ಷದ ನಾಯಕನ ಸ್ಥಾನದಲ್ಲಿ ಅವರೇ ಕುಳಿತಿದ್ದಾರೇನೋ ಎಂಬ ರೀತಿಯಲ್ಲಿ ಬಿ.ಕೆ.ಹರಿಪ್ರಸಾದ್, ಪಕ್ಷದ ನಾಯಕತ್ವವನ್ನು ಅರ್ಥಾತ್ ಮುಖ್ಯಮಂತ್ರಿಯವರನ್ನು ಬಹಿರಂಗವಾಗಿ ಟೀಕಿಸುವ ಬದಲು, ಇಂತಹ ಸೂಕ್ಷ್ಮ ವಿಚಾರಗಳನ್ನು ಪಕ್ಷದ ವೇದಿಕೆಯಲ್ಲಿ ಚರ್ಚಿಸಿ ತಮಗೆ ಸೂಕ್ತ ಸ್ಥಾನಮಾನ ನೀಡಬೇಕೆಂದು ಪಕ್ಷದ ವರಿಷ್ಠ ಮಂಡಳಿಯನ್ನು ಕೇಳುವುದು ಒಳಿತು. ಪಕ್ಷದ ಶಿಸ್ತು ಉಲ್ಲಂಘಿಸುತ್ತಿರುವ ಅವರಿಗೆ ಈಗಾಗಲೇ ಆ ಪಕ್ಷದ ವರಿಷ್ಠ ಮಂಡಳಿ ನೋಟಿಸ್ ನೀಡಿರುವುದನ್ನು ಕೂಡ ಇಲ್ಲಿ ಸ್ಮರಿಸಬಹುದು.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ರೈಲ್ವೆಯಲ್ಲಿ ಟಿಕೆಟ್ ಕಲೆಕ್ಟರ್‌ಗಳು ಪ್ರಾಮಾಣಿಕ ಸೇವೆ ಮಾಡಲಿ

ಮಾನ್ಯರೆ,

ಬೆಂಗಳೂರಿನಿಂದ ಮೈಸೂರಿಗೆ ಶನಿವಾರ ಬರುತ್ತಿದ್ದ ರಾಜ್ಯರಾಣಿ ಸೂಪರ್ ಫಾಸ್ಟ್ ರೈಲಿನಲ್ಲಿ ಟಿಕೆಟ್ ಕಲೆಕ್ಟರ್‌ಗಳು ಪರಿಶೀಲಿಸಿದಾಗ ಟಿಕೆಟ್ ರಹಿತ ಪ್ರಯಾಣ ಮಾಡುತ್ತಿದ್ದ ಕೆಲವು ಪ್ರಯಾಣಿಕರು ಸಿಕ್ಕಿಬಿದ್ದರು. ಅವರಿಗೆ ಅರಿವು ಮೂಡಿಸಿ ನಿಯಮ ಬದ್ಧವಾಗಿ, ಪ್ರಾಮಾಣಿಕವಾಗಿ ಸೇವೆ ಸಲ್ಲಿಸುವುದನ್ನು ಮರೆತ ಕೆಲವು ಟಿಕೆಟ್ ಕಲೆಕ್ಟರ್‌ಗಳು ಟಿಕೆಟ್ ರಹಿತ ಪ್ರಯಾಣಿಕರನ್ನು ರೈಲಿನ ಬಾಗಿಲಿನ ಕಡೆಗೆ ನಿಲ್ಲಿಸಿ ನಿಯಮದಡಿ ಬರುವ ದಂಡವನ್ನು ಕಟ್ಟಿಸಿಕೊಂಡು ರಶೀತಿಯನ್ನು ನೀಡದೆ ಭಾರತೀಯ ರೈಲ್ವೆ ಇಲಾಖೆಗೆ ಮೋಸ ಮಾಡುತ್ತಿದ್ದುದು ಕಂಡು ಬಂದಿತು. ಪ್ರಾಮಾಣಿಕವಾಗಿ ಸೇವೆ ಸಲ್ಲಿಸಿರುವ ಮತ್ತು ಸೇವೆ ಸಲ್ಲಿಸುತ್ತಿರುವ ರೈಲ್ವೆ ಟಿಕೆಟ್ ಕಲೆಕ್ಟರ್‌ಗಳ ಗೌರವಕ್ಕೆ ಧಕ್ಕೆ ಉಂಟಾಗುವ ರೀತಿಯಲ್ಲಿ ಕೆಲ ರೈಲ್ವೆ ಟಿಕೆಟ್ ಕಲೆಕ್ಟರ್‌ಗಳು ಭಾರತೀಯ ರೈಲ್ವೆ ಇಲಾಖೆಗೆ ಸೇರಿ ಭ್ರಷ್ಟಾಚಾರದಲ್ಲಿ ತೊಡಗಿರುವುದರಿಂದ ಸಾರ್ವಜನಿಕರು ಇಲಾಖೆಯ ಮೇಲಿಟ್ಟಿರುವ ಗೌರವವೂ ಸಹ ಕಡಿಮೆಯಾಗುತ್ತಿದೆ.

ಕೂಡಲೇ ಇಂತಹ ಸಿಬ್ಬಂದಿಗಳ ಮೇಲೆ ರೈಲ್ವೆ ಇಲಾಖೆಗೆ ಸಂಬಂಧಿಸಿದ ಸಚಿವರು, ಉನ್ನತಾಧಿಕಾರಿಗಳು ಸಭೆ ಕರೆದು ಶಿಸ್ತಿನಿಂದ ಕರ್ತವ್ಯ ನಿರ್ವಹಿಸುವಂತೆ ಕ್ರಮ ಕೈಗೊಳ್ಳಬೇಕು.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು

ನಿಫಾ ವೈರಸ್ ಎಚ್ಚರಿಕೆ ಅಗತ್ಯ

ಮಾನ್ಯರೆ,

ಕೇರಳ ರಾಜ್ಯದಲ್ಲಿ ನಿಫಾ ವೈರಸ್‌ನ ಆರ್ಭಟ ಹೆಚ್ಚಾಗಿದ್ದು, ಇಬ್ಬರು ವ್ಯಕ್ತಿಗಳು ಮರಣ ಹೊಂದಿರುವುದು ಆತಂಕಕಾರಿಯಾಗಿದೆ ಹಾಗೂ ಕೆಲವರಿಗೆ ಸೋಂಕು ದೃಢಪಟ್ಟಿರುವುದರಿಂದ ಕರ್ನಾಟಕ ಎಚ್ಚರಿಕೆ ವಹಿಸಬೇಕಾಗಿದೆ.

ನಿಫಾ ವೈರಸ್‌ನ ಇತಿಹಾಸ ಗಮನಿಸುವುದಾದರೆ ನಿಫಾ ವೈರಸ್ ಅನ್ನೋ ಹೆಸರು ಮೊದಲು ಕೇಳಿ ಬಂದಿದ್ದು 1998ರಲ್ಲಿ. ಮಲೇಷ್ಯಾ ಹಾಗೂ ಸಿಂಗಾಪುರ ದೇಶಗಳಲ್ಲಿ ಈ ವೈರಸ್ ಮೊದಲು ಕಂಡುಬಂತು. ಅದರಲ್ಲೂ ಹಂದಿ ಸಾಕಣೆ ಕೇಂದ್ರಗಳಲ್ಲಿ ಈ ವೈರಸ್ ಹರಡಿತ್ತು. ಹಂದಿ ಸಾಕುವ ಕಾರ್ಮಿಕರು ಹಾಗೂ ಈ ಸಾಕಣೆ ಕೇಂದ್ರದ ಮಾಲೀಕರಿಗೆ ಜ್ವರ ಕಾಣಿಸಿಕೊಂಡಿತ್ತು. ಈ ಜ್ವರ ನಂತರದ ದಿನಗಳಲ್ಲಿ ಮಾರಣಾಂತಿಕವಾಗಿ ಪರಿಣಮಿಸಿತ್ತು. ಅಂದಿನಿಂದಲೇ ಈ ನಿಫಾ ವೈರಸ್ ಜಗತ್ತಿಗೆ ಪರಿಚಯವಾಯ್ತು. ಕೇವಲ ಹಂದಿ ಮಾತ್ರವಲ್ಲ ಬಾವಲಿಗಳಿಂದಲೂ ಈ ನಿಫಾ ವೈರಸ್ ಹರಡುತ್ತದೆ. ಬಾವಲಿ ಹಾಗೂ ಹಂದಿಗಳ ದೇಹದ ದ್ರವದಿಂದ ಈ ವೈರಸ್ ಮನುಷ್ಯರಿಗೆ ಹರಡುತ್ತೆ.

ಕೆಲವೊಮ್ಮೆ ಮನುಷ್ಯರಿಂದ ಮನುಷ್ಯರಿಗೆ ಹರಡಿದ ಉದಾಹರಣೆಗಳೂ ಇವೆ. ಹಾಗೆ ನೋಡಿದರೆ, ನಿಫಾ ವೈರಾಣು ಬಾವಲಿಗಳ ದೇಹದಲ್ಲಿ ಶತಮಾನಗಳಿಂದಲೂ ಉಳಿದುಕೊಂಡಿತ್ತು ಎಂಬುದು ವಿಜ್ಞಾನಿಗಳ ಅಭಿಪ್ರಾಯ, ಆದರೆ, ಈ ವೈರಸ್‌ಗಳು ಇತ್ತೀಚಿನ ದಿನಗಳಲ್ಲಿ ರೂಪಾಂತರ ಹೊಂದಿದ ಕಾರಣ, ಮನುಷ್ಯರಿಗೂ ಹರಡುತ್ತಿದೆ.

ನಿಫಾ ವೈರಸ್ ತುಂಬಾ ಅಪಾಯಕಾರಿಯಾಗಿದ್ದು ,ಪಕ್ಷಿಗಳು ಮತ್ತು ಪ್ರಾಣಿಗಳು ತಿಂದು ಬಿಟ್ಟ ಹಣ್ಣು ಅಥವಾ ಯಾವುದೇ ರೀತಿಯ ಪದಾರ್ಥಗಳು ಮನುಷ್ಯನ ದೇಹಕ್ಕೆ ಸೇರಿದರೆ ನಿಫಾ ವೈರಸ್ ಹರಡಿ ಸಾವು ಸಂಭವಿಸಬಹುದಾಗಿದೆ.ನಿಫಾ ವೈರಸ್‌ಗೆ "ಮೊನೋಕ್ಲೋನಲ್" ಎಂಬ ಪ್ರತಿಕಾಯ ಮಾತ್ರವಿದ್ದು, ನಿಫಾ ವೈರಸ್‌ನ ಚಿಕಿತ್ಸೆಗೆ ಇರುವ ಏಕೈಕ ಔಷಧಿ ಇದಾಗಿದ್ದು, ಎಚ್ಚರಿಕೆ ವಹಿಸುವುದು ಅನಿವಾರ್ಯವಾಗಿದೆ.

ನಿಫಾ ವೈರಸ್ ತಗುಲಿದರೆ ಸೋಂಕಿತರ ಮರಣ ಪ್ರಮಾಣ ಶೇ.40–70ರಷ್ಟಿರುತ್ತದೆ ಮತ್ತು ನಿಫಾ ರೋಗ ತಗುಲಿದ ಹತ್ತು ಮಂದಿಯಲ್ಲಿ ಇಬ್ಬರ ಸಾವು ಸಂಭವಿಸುತ್ತದೆ ಎಂದು ಸಂಶೋಧನೆಗಳು ತಿಳಿಸುತ್ತವೆ. ಪ್ರತಿಯೊಬ್ಬರು ಮನೆಯಿಂದ ಹೊರಗೆ ಹೋಗಿ ಬಂದ ನಂತರ ಕೈ ತೊಳೆದುಕೊಳ್ಳಬೇಕು, ಮಾಸ್ಕ್ ಧರಿಸುವುದು, ಶುದ್ಧವಾದ ಆಹಾರ ಸೇವನೆ ಮತ್ತು ಹಣ್ಣುಗಳನ್ನು ತೊಳೆದು ತಿನ್ನುವುದನ್ನು ಪಾಲಿಸಿದರೆ ನಿಫಾ ವೈರಸ್ ಹರಡುವುದನ್ನು ತಡೆಯಬಹುದಾಗಿದೆ. ನಿಫಾ ವೈರಸ್ ಕೊರೊನಾಕ್ಕಿಂತಲು ಅಪಾಯಕಾರಿಯಾಗಿದ್ದು ಸರ್ಕಾರ ಮುನ್ನೆಚ್ಚರಿಕೆ ವಹಿಸುವುದು ಅನಿವಾರ್ಯ.

–ರಾಸುಮ ಭಟ್, ಚಿಕ್ಕಮಗಳೂರು.



ಜಿ.ಎಲ್. ತ್ರಿಪುರಾಂತಕ
ಮೊಬೈಲ್ ನಂ.: 96866–77284

ಬೆರಗು

ಮಕ್ಕಳಲ್ಲಿ ಮುಗ್ಧತೆ.... ಇನ್ನು ಮುಗಿದ ಕಥೆ...!

ಸಾರ್ವಜನಿಕವಾಗಿ ಪ್ರದರ್ಶನವಾಗುವ ಸಿನೆಮಾ ಪ್ರದರ್ಶನ ಪೂರ್ವದಲ್ಲಿ ಸೆನ್ಸಾರ್ ಮಂಡಳಿಯು ವೀಕ್ಷಿಸಿ, ಅದು ಪ್ರದರ್ಶನ ಯೋಗ್ಯವಾದಂತಹ ಬದಲಾವಣೆಗಳನ್ನು ಸೂಚಿಸುತ್ತದೆ. ಸೆಕ್ಸ್, ಹಿಂಸಾಚಾರವಿದ್ದರೆ ಅದಕ್ಕೆ ಕತ್ತರಿ ಹಾಕುತ್ತದೆ. ಅದನ್ನು ಆಧರಿಸಿ 'ಯು' ಅಥವಾ 'ಎ' ಸರ್ಟಿಫಿಕೇಟ್ ನೀಡುತ್ತದೆ. ಆದರೆ ಮೊಬೈಲ್‌ನಲ್ಲಿ ಸಾಮಾಜಿಕ ಜಾಲತಾಣಗಳಿಂದ ಬರುವ ರೀಲ್ಸ್‌ಗಳಿಗೆ ಯಾವ ಸೆನ್ಸಾರ್ ಮಂಡಳಿ ಇದೆ. ವಯೋಸಹಜ ಕುತೂಹಲಗಳನ್ನು ತಣಿಸಲು ಇಲ್ಲಸಲ್ಲದ ವಿಡೀಯೋ ದೃಶ್ಯಗಳನ್ನು ಕಂಡು ಚಿತ್ತಚಾಂಚಲ್ಯ ಹೊಂದುತ್ತಾರೆ. ಕೆಲವು ದಿನಗಳ ಹಿಂದೆ ಶಾಲೆ ಮುಗಿಸಿ ಮನೆಗೆ ಹೋಗುತ್ತಿದ್ದ 10-12 ವಯಸ್ಸಿನ ಮಕ್ಕಳಲ್ಲಿ ಒಬ್ಬ ಮತ್ತೊಬ್ಬನಿಗೆ 'ಆಂಟಿ ಲವರ್ ಎಂದು ಚುಡಾಯಿಸಿದ್ದನ್ನು ಕೇಳಿ ನಿಜಕ್ಕೂ ಗಾಬರಿಯಾಯಿತು. ಮಕ್ಕಳಿಗೆ ವಯಸ್ಸಿಗೂ ಮೊದಲೇ ಸೆಕ್ಸ್ ಬಗ್ಗೆ ಬೇರೆಯದೇ ಕಲ್ಪನೆಗಳು ಮೂಡಿಸಿರುವುದು ಆತಂಕ ಮೂಡಿಸಿತು. ಮಕ್ಕಳಲ್ಲಿ ವಯೋಸಹಜ ನಡೆ-ನುಡಿ ಇದ್ದರೆ ಸಹ್ಯ, ವಯಸ್ಸಿಗೂ ಮೀರಿದ ನಡೆ-ನುಡಿ ಇದ್ದರೆ ಅಸಹ್ಯ.

ಶಿವಪಾರ್ವತಿ ತಮ್ಮ ಮಕ್ಕಳಾದ ಗಣೇಶ ಹಾಗೂ ಕಾರ್ತಿಕೇಯರಿಗೆ ಇಡೀ ಪ್ರಪಂಚವನ್ನು ಮೂರು ಬಾರಿ ಸುತ್ತಿ ಬರುವಂತೆ ಹೇಳುತ್ತಾರೆ. ಮರುಮಾತನಾಡದೆ ಕಾರ್ತಿಕೇಯ ತನ್ನ ವಾಹನವಾದ ನವಿಲಿನ ಮೇಲೇರಿ ಪ್ರಪಂಚ ಸುತ್ತಲು ಹೊರಡುತ್ತಾನೆ. ಗಣೇಶ ಮಾತ್ರ ತನ್ನ ಮಾತಾಪಿತರ ಸುತ್ತ ಮೂರು ಸುತ್ತು ಬರುತ್ತಾನೆ. ಶಿವಪಾರ್ವತಿ ಏಕೆ ಪ್ರಪಂಚ ಸುತ್ತಲು ಹೋಗಲಿಲ್ಲ ಎಂದು ಕೇಳಿದಾಗ, 'ಹೆತ್ತವರಾದ ನೀವೇ ನನ್ನ ಪ್ರಪಂಚ, ಹಾಗಾಗಿ ನಿಮ್ಮ ಸುತ್ತ ಸುತ್ತಿದಲ್ಲಿ ಇಡೀ ಪ್ರಪಂಚವನ್ನೇ ಸುತ್ತಿದ ಹಾಗೆ' ಎಂದು ಮುಗ್ಧತೆಯಿಂದ ಹೇಳುತ್ತಾನೆ. ಆಗ ಶಿವಪಾರ್ವತಿ ಗಣೇಶನ ಬುದ್ಧಿವಂತಿಕೆಗೆ ಮೆಚ್ಚಿ ಸಂತೋಷ ಪಡುತ್ತಾರೆ. ಇಂದಿನ ಪೋಷಕರಿಗೆ ಗಣೇಶನಂತಹ ಬುದ್ಧಿವಂತ ಮಗ ಬೇಕು ಎಂಬ ಹಂಬಲ ಹೆಚ್ಚು. ಆದರೆ ಇಂದಿನ ಮಕ್ಕಳು ಗಣೇಶನಿಗಿಂತ ಬುದ್ಧಿಯಲ್ಲೇನು ಕಮ್ಮಿ ಇಲ್ಲ, ಆದರೆ ಸದ್ಬುದ್ಧಿ ಇದೆಯೇ ಎಂಬ ಖಾತ್ರಿ ಮಾತ್ರ ಇಲ್ಲ ಅಷ್ಟೆ.

ಮಕ್ಕಳ ಮನಸ್ಸನ್ನು ಮೊಗ್ಗಿನ ಮನಸ್ಸು ಎಂದು ಹೇಳಲಾಗುತ್ತದೆ. ಆದರೆ ಇಂದಿನ ಪೋಷಕರು ಮೊಗ್ಗಾಗುತ್ತಿದ್ದಂತೆ ಸ್ಪರ್ಧೆಗೆ ಬಿದ್ದು ಆ ಮೊಗ್ಗು ಸಹಜವಾಗಿ ಅರಳಲು ಬಿಡದೆ ಆತುರಾತುರವಾಗಿ ಮೊಗ್ಗನ್ನು ಬಲವಂತವಾಗಿ ಹೂವಾಗಿ ಅರಳಿಸಿ ನೋಡಲು ಬಯಸುತ್ತಾರೆ. ಈ ಭರದಲ್ಲಿ ಮೊಗ್ಗಿನ ಸೊಬಗನ್ನು ಸವಿಯದೆ ಮಿಸ್ ಮಾಡಿಕೊಳ್ಳುತ್ತಿದ್ದಾರೆ. ಮಕ್ಕಳು ಮಕ್ಕಳಂತೆ ಇದ್ದರೆ ಚೆಂದ, ದೊಡ್ಡವರಂತೆ ಆಡಿದರೆ ಏನ್ ಚೆಂದ? ಎಳೆಯ ವಯಸ್ಸಿನಲ್ಲಿ ಮಕ್ಕಳು ಪ್ರಬುದ್ಧರಂತೆ ವರ್ತಿಸುವುದನ್ನು ಕಂಡಾಗ ಆಶ್ಚರ್ಯವಾಗಿ ಶಹಬ್ಬಾಸ್ ಅನ್ನುವ ಹಾಗೆ ಆಗಬಹುದು. ಅದು ಪ್ರಶಂಸಿಸುವ ಸಂಗತಿಯಲ್ಲ, ಬದಲಿಗೆ ಪರಿತಪಿಸುವ ಸಂಗತಿ. ಅವರು ಹಾಗೆ ವರ್ತಿಸಲು ಅವರ ಎಳೆಯ ಮನಸ್ಸಿನ ಮೇಲೆ ಆಗಿರುವ ಅಮಾನವೀಯ ಆಕ್ರಮಣಗಳು ಮಾತ್ರ ಅಪರಾಧಗಳೇ ಸರಿ !

'ಮಕ್ಕಳಾಟವು ಚೆಂದ, ಮತ್ತೆ ಯೌವನ ಚೆಂದ, ಮುಪ್ಪಿನಲಿ ಚೆಂದ ನರೆಗಡ್ಡ, ಜಗದೊಳಗೆ ಎತ್ತ ನೋಡಿದರೂ ನಗು ಚೆಂದ' ಎಂಬ ಜನಪದ ಗೀತೆಯು ಮಕ್ಕಳು ಮುಗ್ಧತೆಯಿಂದ ಆಡುವ ಆಟಗಳ ಕುರಿತು, ನಗುವಿನ ಕುರಿತು ಸಾರಿ ಹೇಳುತ್ತದೆ. ಆದರೆ ಮಕ್ಕಳು ಇಂದು ಮುಗ್ಧತೆಯಿಂದ ವರ್ತಿಸುವುದು ಹಾಗೂ ಅವರ ಮುಖದಲ್ಲಿ ನಗುವು ಸಹ ವಿರಳವಾಗುತ್ತಿದೆ. ಇಂದಿನ ಸ್ಪರ್ಧಾ ಪ್ರಪಂಚದಲ್ಲಿ ಹೃದಯವಂತಿಕೆಗಿಂತ ಬುದ್ಧಿವಂತಿಕೆಗೆ ಹೆಚ್ಚು ಮಾನ್ಯತೆ ಹಾಗೂ ಆದ್ಯತೆ. ಆ ಕಾರಣಕ್ಕೆ ಮಕ್ಕಳಿಗೆ ಹೃದಯ ಪೂರ್ವಕವಾಗಿ ವರ್ತಿಸುವುದಕ್ಕಿಂತ ಮಿದುಳು ಪೂರ್ವಕವಾಗಿ ವರ್ತಿಸಲು ತರಬೇತಿ ನೀಡಲು ಹೆತ್ತವರು ಪೂರ್ವ ನಿರ್ಧಾರ ಮಾಡಿರುತ್ತಾರೆ. ಆದ್ದರಿಂದ ಮಕ್ಕಳು ಮುಗ್ಧರಾಗಿ ವರ್ತಿಸುವ ಬದಲು ವಯಸ್ಸಿಗೂ ಮೀರಿದ ಬುದ್ಧಿವಂತರಂತೆ ವರ್ತಿಸಬೇಕು ಎಂಬುದು ಹೆತ್ತವರ ನಿರೀಕ್ಷೆ. ಪ್ರಕೃತಿ ಸಹಜವಾಗಿ ಪೀಳಿಗೆಯಿಂದ ಪೀಳಿಗೆಗೆ ಮಕ್ಕಳು ತುಸು ಬೇಗನೆ ಬುದ್ಧಿವಂತರಾಗುತ್ತಾರೆ. ಆದರೆ 5ಜಿ ಯುಗದಲ್ಲಿ ಬದುಕುತ್ತಿರುವ ಹೆತ್ತವರಿಗೆ ಅದು ಸಾಲದೆ ಎಲ್ಲವೂ ವೇಗವಾಗಿ ಆಗಬೇಕು. ಅದರಂತೆ ತಮ್ಮ ಮಕ್ಕಳು ಅವಧಿ ಪೂರ್ವವಾಗಿ ಅತಿಬುದ್ಧಿವಂತಿಕೆಯಿಂದ ವರ್ತಿಸಬೇಕು ಎಂಬ ಅಭೀಪ್ಸೆ. ಇಂದು ಮಗು



ವೊಂದು ವಯೋಸಹಜವಾದ ಮುಗ್ಧತೆಯನ್ನು ಹೊಂದಿದ್ದರೆ, ಹೆಚ್ಚು ಚುರುಕಾಗಿ ಇರದಿದ್ದರೆ ಅದನ್ನು ಪೆದ್ದ, ಮೊದ್ದ ಮಗು ಎಂದು ಆಡಿಕೊಂಡು ಹೀಯಾಳಿಸುವ ಜನ ಇಲ್ಲದಿಲ್ಲ.

ಈ ದಿನದ ಜೀವನ ಶೈಲಿ, ಅಸಹಜ ಆಹಾರ ಶೈಲಿ, ಮಾಧ್ಯಮಗಳ ಪ್ರಭಾವ, ಸಾಮಾಜಿಕವಾಗಿ ಆಗುತ್ತಿರುವ ಕ್ಷಿಪ್ರ ಬದಲಾವಣೆಯಿಂದ ಆಟವಾಡಿಕೊಂಡು ಇರಬೇಕಾದ ವಯಸ್ಸಿನ ಮಕ್ಕಳು ಅವಧಿಪೂರ್ವವಾಗಿ ಪ್ರೌಢಾವಸ್ಥೆ ತಲುಪುತ್ತಿದ್ದಾರೆ. 10–12 ವಯಸ್ಸಿಗೆ ಹೆಣ್ಣು ಮಕ್ಕಳು ದೊಡ್ಡವರಾಗುತ್ತಿದ್ದಾರೆ. ಕೆಲವು ಶಾಲೆಗಳಲ್ಲಿ 8–9ನೇ ತರಗತಿ ಮಕ್ಕಳು ಮಗುವಿಗೆ ಜನ್ಮಕೊಟ್ಟ ಸುದ್ದಿಗಳು ಆತಂಕ ಮೂಡಿಸುತ್ತವೆ. ಮಕ್ಕಳಾಟವಾಡಬೇಕಾಗಿದ್ದ ಮಕ್ಕಳು ಮಕ್ಕಳನ್ನು ಹೊಂದುತ್ತಾರೆ ಎಂದರೆ ಎಂತಹ ಕಾಲ ಬಂತಪ್ಪ ಎನಿಸದೆ ಇರದು.

ಹೆತ್ತವರು ತಮ್ಮ ಮಕ್ಕಳನ್ನು ಮಾತನಾಡುವ ಗೊಂಬೆಯಂತೆ, ಕೀ ಕೊಟ್ಟರೆ ನೃತ್ಯ ಮಾಡುವ ಗೊಂಬೆಯಂತೆ, ಕೀಲಿಕೈ ಒತ್ತಿದರೆ ಕ್ಷಣ ಮಾತ್ರದಲ್ಲಿ ಉತ್ತರಿಸುವ ಕಂಪ್ಯೂಟರ್‌ನಂತೆ ಇರಬೇಕೆಂದು ವಿಚಿತ್ರ ಹಾಗೂ ವಿಲಕ್ಷಣ ಬಯಕೆ ಹೊಂದಿರುತ್ತಾರೆ. ಮಕ್ಕಳು ನೆರೆಹೊರೆಯವರ ಮುಂದೆ, ನೆಂಟರಿಷ್ಟರ ಮುಂದೆ ಶೋ ಪೀಸ್ ರೀತಿ ತನ್ನ ಪ್ರತಿಭೆ ಪ್ರದರ್ಶನ ಮಾಡಬೇಕಾದ ಅನಿವಾರ್ಯತೆ ಹಾಗೂ ಒತ್ತಡವನ್ನು ಅನುಭವಿಸುತ್ತಿರುತ್ತದೆ. ಮಕ್ಕಳನ್ನು ಅನಾರೋಗ್ಯಕರ ಸ್ಪರ್ಧೆಗೆ ಮಕ್ಕಳನ್ನು ದೂಡುತ್ತಿರುವ ಕಾರಣ ಇಂದು ಮಕ್ಕಳು ಯಮಯಾತನೆ ಅನುಭವಿಸುತ್ತಿದ್ದಾರೆ. ಹಿಂದೆ ಈ ಯಾತನೆಯನ್ನು ಹಂಚಿಕೊಳ್ಳಲು, ಸಮಾಧಾನ ಪಡೆಯಲು ಅಜ್ಜಿತಾತ ಅವರುಗಳಾದರೂ ಮನೆಗಳಲ್ಲಿ ಇರುತ್ತಿದ್ದರು. ಆದರೆ ಇಂದು ಅಣುಕುಟುಂಬದ ಕಾರಣ ಹೆತ್ತವರ ಆಣತಿಯಂತೆ ನಡೆಯಲೇ ಬೇಕಾದ ಮಕ್ಕಳ ನೋವು ಮಾತ್ರ ಅರಣ್ಯ ರೋದನವಾಗಿದೆ. ಅನೇಕ ದುರ್ಬಲ ಮನಸ್ಸಿನ 12–13 ವಯೋಮಾನದ ಮಕ್ಕಳು ತಮಗಾಗುತ್ತಿರುವ ಯಾತನೆಯನ್ನು ಸಹಿಸಲಾಗದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು ಅವರ ವಯಸ್ಸಿನ ಮಕ್ಕಳ ಮನಸ್ಸಿನ ಮೇಲೆ ಆಗುತ್ತಿರುವ ಒತ್ತಡಕ್ಕೆ ಕೈಗನ್ನಡಿಯಾಗಿದೆ.

ಹಿಂದೆ ಮಕ್ಕಳಿಗೆ ಶಾಲೆ ಎಂಬುದು 6 ವರ್ಷಗಳು ತುಂಬಿದ ನಂತರ ಪ್ರಾರಂಭವಾಗುತ್ತಿತ್ತು. ಇಂದು ಮೂರೇ ವರ್ಷಕ್ಕೆ ಶಾಲಾ ಮಾದರಿಯ ವ್ಯವಸ್ಥೆಯಲ್ಲಿ ಓದಲೇಬೇಕಾದ ಅನಿವಾರ್ಯತೆ ನಗರ ಪ್ರದೇಶದ ಅನೇಕ ಮಕ್ಕಳಿಗೆ ಇದೆ. ಅಮ್ಮ ಎನ್ನುವ ಮೊದಲೇ ಎಬಿಸಿಡಿ ಹೇಳಿಬಿಟ್ಟರೆ ಅಮ್ಮನಿಗೆ ಎಲ್ಲಿಲ್ಲದ ಆನಂದ. ಒಂದೆರಡು ವರ್ಷಗಳಲ್ಲಿ ಒಂದು–ಎರಡು ಮಗ್ಗಿ ಹೇಳಿಬಿಟ್ಟರೆ ಮಹದಾನಂದ. ಮಕ್ಕಳಿಗೆ ಚಂದಮಾಮನನ್ನು ತೋರಿಸಿ ಊಟ ತಿಂಡಿ ಮಾಡಿಸುತ್ತಿದ್ದ ಅಮ್ಮಂದಿರು ಇಂದು ಇಲ್ಲ, ಅವರು ಪ್ರಕೃತಿ ಕುರಿತಾಗಿ ಕೌತುಕ ಹೊಂದಲು ಸಾಧ್ಯವಿಲ್ಲ. ಮಕ್ಕಳಿಗೆ ಮೊಬೈಲ್ ತೋರಿಸಿ ಊಟ ತಿಂಡಿ ಮಾಡಿಸುತ್ತಿರುವ ಕಾರಣ, ಅವರಿಗೆ ಮೊಬೈಲ್ ಗೀಳನ್ನು ಅವರಿಗೆ ತಿಳುವಳಿಕೆ ಬರುವ ಮೊದಲೇ ಹಚ್ಚಿಸಿರುತ್ತಾರೆ ಹೆತ್ತವರು. ತಮ್ಮ ಕೆಲಸಕ್ಕೆ ಅಡ್ಡವಾಗುತ್ತದೆ ಎಂದು ಮೊಬೈಲ್ ಕೊಟ್ಟು ಕೂರಿಸುವುದರಿಂದ ಮಗು ಅನೇಕ ಸಂಗತಿಗಳನ್ನು ತಿಳಿದುಕೊಳ್ಳುತ್ತದೆ. ಅದನ್ನು ಹೆತ್ತವರಿಗೆ ಹೇಳಿದಾಗ ಅವರು ಅತೀವ ಖುಷಿ ಪಡುತ್ತಾರೆ. ಇದರಿಂದ ಆಗುವ ದುಷ್ಪರಿಣಾಮಗಳ ಅರಿವಿಲ್ಲದೆ ಮಗು ಒಂದೇ ಕಡೆ ಕುಳಿತು ಜಗತ್ತನ್ನು ತಿಳಿದುಕೊಳ್ಳುತ್ತಿದೆ ಎಂದು ಹೆಮ್ಮೆ ಪಡುತ್ತಾರೆ. ಆದರೆ ದೇಶ ಸುತ್ತದೇ, ಕೋಶ ಓದದೇ ಜ್ಞಾನ ವೃದ್ಧಿ ಆಗಲು ಸಾಧ್ಯವಿಲ್ಲ. ಮಕ್ಕಳು ಮೊಬೈಲ್‌ನಿಂದ ಮಾಹಿತಿ ಕಣಜ ಹೊಂದಬಹುದೇ ಹೊರತು ಸಹಜ ಜ್ಞಾನ, ಸುಜ್ಞಾನ ಹೊಂದಲು ಸಾಧ್ಯವಿಲ್ಲ. ಕೊರೊನಾ ಕಾಲದಲ್ಲಿ ಆನ್‌ಲೈನ್ ಕ್ಲಾಸ್ ಅನಿವಾರ್ಯವಾದ ಕಾರಣ ಅನೇಕ ಮಕ್ಕಳು ಮೊಬೈಲ್ ಫೋನ್‌ಗೆ ಅಡಿಕ್ಟ್ ಆಗಿದ್ದಾರೆ. ಮೊಬೈಲ್‌ನಲ್ಲಿ ಬರುವ ವಿಡೀಯೋ ಗೇಮ್‌ಗಳು ಮಕ್ಕಳಲ್ಲಿ ವೈರತ್ವ, ಆಕ್ರೋಶ ಮನೋಭಾವ ಹೆಚ್ಚಿಸುತ್ತಿದ್ದು, ಅವರ ವರ್ತನೆಯನ್ನೇ ಬದಲಿಸಿಬಿಟ್ಟಿವೆ. ಇದು ಎಲ್ಲಿಗೆ ಹೋಗಿ ಮುಟ್ಟುತ್ತದೋ ತಿಳಿಯದು !

ಸಾರ್ವಜನಿಕವಾಗಿ ಪ್ರದರ್ಶನವಾಗುವ ಸಿನೆಮಾ ಪ್ರದರ್ಶನ ಪೂರ್ವದಲ್ಲಿ ಸೆನ್ಸಾರ್ ಮಂಡಳಿಯು ವೀಕ್ಷಿಸಿ, ಅದು ಪ್ರದರ್ಶನ ಯೋಗ್ಯವಾಗುವಂತ ಬದಲಾವಣೆಗಳನ್ನು ಸೂಚಿಸುತ್ತದೆ. ಸೆಕ್ಸ್, ಹಿಂಸಾಚಾರವಿದ್ದರೆ ಅದಕ್ಕೆ ಕತ್ತರಿ ಹಾಕುತ್ತದೆ. ಅದನ್ನು ಆಧರಿಸಿ 'ಯು' ಅಥವಾ 'ಎ' ಸರ್ಟಿಫಿಕೇಟ್ ನೀಡುತ್ತದೆ. ಆದರೆ ಮೊಬೈಲ್‌ನಲ್ಲಿ ಸಾಮಾಜಿಕ ಜಾಲತಾಣಗಳಿಂದ ಬರುವ ರೀಲ್ಸ್‌ಗಳಿಗೆ ಯಾವ ಸೆನ್ಸಾರ್ ಮಂಡಳಿ ಇದೆ. ಮಕ್ಕಳು ಮೊಬೈಲ್‌ನ್ನು ಒಳ್ಳೆಯದಕ್ಕೆ ಬಳಸು ವುದಕ್ಕಿಂತ ಹೆಚ್ಚಾಗಿ ಕೆಟ್ಟದ್ದನ್ನು ನೋಡಲು ಬಳಸುತ್ತಿದ್ದಾರೆ ಎನ್ನಬಹುದು. ವಯೋಸಹಜ ಕುತೂಹಲಗಳನ್ನು ತಣಿಸಲು ಇಲ್ಲಸಲ್ಲದ ವಿಡೀಯೋ ದೃಶ್ಯಗಳನ್ನು ಕಂಡು ಚಿತ್ತಚಾಂಚಲ್ಯ ಹೊಂದುತ್ತಾರೆ. ಕೆಲವು ದಿನಗಳ ಹಿಂದೆ ಶಾಲೆ ಮುಗಿಸಿ ಮನೆಗೆ ಹೋಗುತ್ತಿದ್ದ 10–12 ವಯಸ್ಸಿನ ಮಕ್ಕಳಲ್ಲಿ ಒಬ್ಬ ಮತ್ತೊಬ್ಬನಿಗೆ 'ಆಂಟಿ ಲವರ್' ಎಂದು ಚುಡಾಯಿಸಿದ್ದನ್ನು ಕೇಳಿ ನಿಜಕ್ಕೂ ಗಾಬರಿಯಾಯಿತು. ಮಕ್ಕಳಿಗೆ ವಯಸ್ಸಿಗೂ ಮೊದಲೇ ಸೆಕ್ಸ್ ಬಗ್ಗೆ ಬೇರೆಯದೇ ಕಲ್ಪನೆಗಳು ಮೂಡಿಸಿರುವುದು ಆತಂಕ ಮೂಡಿಸಿತು. ಮಕ್ಕಳಲ್ಲಿ ವಯೋಸಹಜ ನಡೆ–ನುಡಿ ಇದ್ದರೆ ಸಹ್ಯ, ವಯಸ್ಸಿಗೂ ಮೀರಿದ ನಡೆ–ನುಡಿ ಇದ್ದರೆ ಅಸಹ್ಯ.

ಇಂದಿನ ಮಕ್ಕಳು ಹೆತ್ತವರ ಹಾಗೂ ಶಿಕ್ಷಕರ ನಡೆ–ನುಡಿಗಳಿಂದ ಎಷ್ಟೋ ಪ್ರಭಾವಿತರಾಗುತ್ತಾರೋ ತಿಳಿಯದು, ಆದರೆ ಸಮಾಜದ ಪ್ರಸ್ತುತ ಪೀಳಿಗೆಯಿಂದ ಬಹುವಾಗಿ ಪ್ರಭಾವಿತರಾಗುವುದು ಸುಳ್ಳಲ್ಲ. ಮಕ್ಕಳಿಗೆ ಇರುವ ಕುತೂಹಲವನ್ನು ಹೊರ ಪ್ರಪಂಚ ಸರಿಯಾಗಿ ತಣಿಸುತ್ತದೆ ಎಂದು ಹೇಳಲಾಗುವುದಿಲ್ಲ. ಸಮಾಜದ ಸ್ವಾಸ್ಥ್ಯ ಮಕ್ಕಳ ಮನಸ್ಸಿನ ಸ್ವಾಸ್ಥ್ಯವನ್ನು ನಿರ್ಣಯಿಸುತ್ತದೆ. ಟಿ.ವಿ.ಯಲ್ಲಿ ಪ್ರಸಾರವಾಗುವ ರಿಯಾಲಿಟಿ ಶೋಗಳಲ್ಲಿ ಹಾಸ್ಯದ ಹೆಸರಿನಲ್ಲಿ ಎಲ್ಲೆ ಮೀರಿದ ಸಂಗತಿಗಳನ್ನು ಮಕ್ಕಳ ಬಾಯಿಯಿಂದಲೇ ಆಡಿಸುತ್ತಾರೆ. ಇವುಗಳನ್ನು ಗ್ರಹಿಸುವ ಮಕ್ಕಳು ಇವೆಲ್ಲಾ ಸಾಮಾನ್ಯ ಎಂದು ಭಾವಿಸುತ್ತಾರೆ. ಟಿ.ವಿ ಶೋಗಳಲ್ಲಿ ಬರುವ ಕಾರ್ಯಕ್ರಮಗಳಿಗೆ ಬದುಕಿಗೂ ಅಜಗಜಾಂತರ ವ್ಯತ್ಯಾಸವಿದೆ ಎಂದು ಮನವರಿಕೆ ಮಾಡಿಕೊಡುವವರಾರು? ಕಾರ್ಯಕ್ರಮ ವೀಕ್ಷಿಸುವ ಪೋಷಕರು ತಮ್ಮ ಮಕ್ಕಳನ್ನು ಟಿ.ವಿ.ಯಲ್ಲಿ ಬರುವ ಪ್ರತಿಭಾನ್ವಿತ ಮಕ್ಕಳೊಂದಿಗೆ ಹೋಲಿಸಿ ಹೀಯಾಳಿಸುವುದು ಮಕ್ಕಳ ಮನಸ್ಸಿನ ಮೇಲೆ ಆಘಾತ ಉಂಟು ಮಾಡುತ್ತಿರುತ್ತದೆ. ಹೆತ್ತವರು ತಮ್ಮ ಆಸೆಗಳನ್ನೆಲ್ಲಾ ಮಕ್ಕಳು ಕಿರಿಯ ವಯಸ್ಸಿನಲ್ಲಿಯೇ ಈಡೇರಿಸಬೇಕು ಎಂದು ಬಯಸುತ್ತಿರುವುದು ಅನಗತ್ಯ ಒತ್ತಡವನ್ನು ನಿರ್ಮಾಣ ಮಾಡುತ್ತಿದೆ. ಮಕ್ಕಳು ಮುಂದೆ ದೊಡ್ಡವರಾಗುವುದು ಇದ್ದೇ ಇದೆ, ಅವರ ಬಾಲ್ಯದಲ್ಲಿ ಮುಗ್ಧತೆಯನ್ನು ಕಾಪಾಡುವುದು ನಮ್ಮ ಜವಾಬ್ದಾರಿ ಎಂದು ಅರಿಯುವ ಪೋಷಕರು ಬಹಳ ವಿರಳ.

ಇಂದಿನ ಕಾಲದಲ್ಲಿ ಪೋಷಕರು ಒಂದು ಅಥವಾ ಎರಡು ಮಕ್ಕಳನ್ನು ಹೊಂದಿರುತ್ತಾರೆ. ಅವರಲ್ಲಿಯೇ ಎಲ್ಲಾ ಸಾಧನೆಗಳನ್ನು ಕಾಣ ಬಯಸುತ್ತಾರೆ. ಆ ಕಾರಣಕ್ಕೆ ಮಕ್ಕಳಿಗೆ ಹೊರೆಯಾಗುತ್ತಿದೆ. ತಮ್ಮ ಮಕ್ಕಳನ್ನು ಇತರೆ ಮಕ್ಕಳೊಂದಿಗೆ ಹೋಲಿಸುವುದನ್ನು ಬಿಡಬೇಕು. ಮಕ್ಕಳಿಗೆ ಹೊರಾಂಗಣ ಆಟ, ಪ್ರಕೃತಿ ಪಾಠಕ್ಕೆ ಹೆಚ್ಚು ಆದ್ಯತೆ ನೀಡಬೇಕು. ಅವರಲ್ಲಿನ ಮುಗ್ಧತೆಯನ್ನು ಕಾಪಾಡಬೇಕು. ಆದರೆ ಹೊರ ಪ್ರಪಂಚದಲ್ಲಿನ ಆಗುವ ಶೋಷಣೆಗೆ ಬುದ್ಧಿಮಾತನ್ನು ಹೇಳಿಕೊಡಬೇಕು. ಮಕ್ಕಳು ಮುಂದೆ ತಮ್ಮ ಬಾಲ್ಯವನ್ನು ನೆನೆದು ಖುಷಿ ಪಡಬೇಕಾಗಿರುವಂತೆ ಅವರ ಬಾಲ್ಯವನ್ನು ಕಾಪಾಡಬೇಕು. ಅವರ ಬಾಲ್ಯ ಅವರಿಗೆ ಕಹಿ ನೆನಪಾಗಿ ಕಾಡಬಾರದು. ಆ ಜವಾಬ್ದಾರಿ ಪ್ರತಿಯೊಬ್ಬ ಪೋಷಕರದ್ದು ಆಗಬೇಕು. ಏನಂತೀರಿ.?

ಪದ ತಾಂಬೂಲ :

ಹೆತ್ತವರು ಮಕ್ಕಳೊಂದಿಗೆ ಮಕ್ಕಳಾದರೆ ಮಾತ್ರ ಅವರಲ್ಲಿ ಮುಗ್ಧತೆ ಉಳಿಯಲು ಸಾಧ್ಯ

ಸುದೀರ್ಘ ದಾಂಪತ್ಯಕ್ಕೆ ಸನಾತನ ಧರ್ಮವೇ ತಳಹದಿ

ಹಿರಿಯ ರಂಗಕರ್ಮಿ ಎಸ್.ಎಸ್.ಸೇತುರಾಮ್ ಅಭಿಮತ



ಮೈಸೂರು, ಸೆ.17(ಎಸ್‌ಪಿಎನ್)– ಸುದೀರ್ಘ ದಾಂಪತ್ಯದ ಸುಖಕರ ಜೀವನ ಹಾಗೂ ಗಂಡ–ಹೆಂಡತಿ ಅನ್ಯೋನ್ಯ ಸಂಬಂಧ ಉಳಿವು ಇರುವುದೇ ಸನಾತನ ಧರ್ಮದ ತಳಹದಿಯಲ್ಲಿ ಎಂದು ಹಿರಿಯ ರಂಗಕರ್ಮಿ ಎಸ್.ಎಸ್.ಸೇತುರಾಮ್ ಅಭಿಪ್ರಾಯಪಟ್ಟರು.

ಮೈಸೂರಿನ ಸಾಹುಕಾರ್ ಚೆನ್ನಯ್ಯ ರಸ್ತೆಯ ಟಿ.ಕೆ.ಬಡಾವಣೆ ಶ್ರೀಕೃಷ್ಣಧಾಮದಲ್ಲಿ ಚಾತುರ್ಮಾಸ್ಯ ಸಮಿತಿಯಿಂದ ಉಡುಪಿಯ ಪೇಜಾವರ ಮಠದ ಪೀಠಾಧ್ಯಕ್ಷರಾದ ಶ್ರೀವಿಶ್ವಪ್ರಸನ್ನ ತೀರ್ಥ ಶ್ರೀಪಾದಂಗಳವರ 36ನೇ ಚಾತುರ್ಮಾಸ್ಯ ವ್ರತ ಸಂಕಲ್ಪ ಅಂಗವಾಗಿ ನಡೆದ ವಿಶೇಷ ಪ್ರವಚನ ಮಾಲೆಯಲ್ಲಿ ಅವರು ಮಾತನಾಡಿದರು. ತನ್ನ ಗಂಡ ಹೊರಗೆ ಹೋಗಿ ದುಡಿದು ಬರುವವರೆಗೂ ಯಾವುದೇ ಅಧರ್ಮದಲ್ಲಿ ತೊಡಗದೇ ಬರುತ್ತಾನೆಂಬ ಅಚಲ ನಂಬಿಕೆ ಹೆಂಡತಿಗೆ. ಅದೇ ರೀತಿ ತನ್ನ ಹೆಂಡತಿ ನಾನು ಹೊರಗೆ ಕೆಲಸ ಮುಗಿಸಿ ಮನೆಗೆ ಬರುವವರೆಗೂ ಯಾವುದೇ ಅಧರ್ಮದಲ್ಲಿ ತೊಡಗದೇ ನನಗಾಗಿ ಕಾಯುತ್ತಿರುತ್ತಾಳೆ ಎಂಬ ಅಚಲ ನಂಬಿಕೆ ಗಂಡನಿಗೆ. ಇದು ಗಂಡ–ಹೆಂಡತಿಯಲ್ಲಿರುವ ಅಚಲ ನಂಬಿಕೆಗೆ ತಳಹದಿ ಹಾಕಿರುವುದು ಸನಾತನ ಧರ್ಮದ ವಿಚಾರಧಾರೆಗಳು ಎಂದು ಸನಾತನ ಧರ್ಮ ವಿರೋಧಿ ಹೇಳಿಕೆಗೆ ತಿರುಗೇಟು ನೀಡಿದರು.

ನಾನು ಯುವಕನಾಗಿದ್ದಾಗ, ನನ್ನಲ್ಲಿಯೂ ಸನಾತನ ಧರ್ಮ ಆಚರಣೆ ಕುರಿತು ಅಪನಂಬಿಕೆ ಇತ್ತು. ದಿನ ಕಳೆದಂತೆ ನನ್ನ ಧರ್ಮ ವೈಜ್ಞಾನಿಕ ತಳಹದಿಯಲ್ಲಿ ನಿರ್ಮಾಣವಾಗಿದೆ. ನಾವೆಲ್ಲರೂ ಅದರ ತಳಹದಿಯಲ್ಲಿಯೇ ಆಚರಣೆ ಮಾಡುತ್ತಿದ್ದೇವೆ ಎಂಬ ಅರಿವು ನನ್ನ ಮನಸ್ಸಿಗೆ ಬಂದ ತಕ್ಷಣ ನನ್ನಲ್ಲಿರುವ ಆತ್ಮಾಭಿಮಾನ ಇಮ್ಮಡಿಗೊಂಡಿತು ಎಂದು ಪ್ರತಿಪಾದಿಸಿದರು.

ನನ್ನ ಧರ್ಮ ಸಮಾಜದಿಂದ ಬರುವ ಎಲ್ಲಾ ತೆಗಳಿಕೆಯನ್ನು ಮೆಟ್ಟಿ, ಜನಸಾಮಾನ್ಯರ ನಡುವೆ ಇರುವಿಕೆಯನ್ನು ಬೇರೆ ರೂಪದಲ್ಲಿ ತೋರಿಸಿಕೊಟ್ಟಿದೆ. ಎಂದಿಗೂ ಯಾರೊಂದಿಗೂ ಜಗಳಕ್ಕೆ ಆಸ್ಪದ ನೀಡದಿರುವುದೇ ಸನಾತನ ಧರ್ಮದ ಒಳಗುಟ್ಟು ಎಂದು ಬಣ್ಣಿಸಿದರು. ಬೇರೆ ಧರ್ಮದಲ್ಲೂ ದೇವರು ಇರುವಿಕೆ ಬಗ್ಗೆ ಪ್ರಸ್ತಾವನೆ ಇದೆ. ಆ ಧರ್ಮದಲ್ಲಿ ದೇವರು ಇದ್ದಾನೆ ಎಂದ ಮೇಲೆ ನನ್ನ ಧರ್ಮದಲ್ಲಿ ದೇವರ ಪರಿಕಲ್ಪನೆ ಇರಬಾರದೆ ಎಂಬ ಪ್ರಶ್ನೆ ಅನೇಕ ಬಾರಿ ನನ್ನ ಮನಸ್ಸಿನೊಳಗೆ ಬಂದು ಹೋಗಿದೆ. ಹಾಗಾಗಿ ವಿಷಯ ತಿಳಿಯದೇ ಸನಾತನ ಧರ್ಮದ ಬಗ್ಗೆ ಸಾರ್ವಜನಿಕವಾಗಿ ಚರ್ಚಿಸುವುದು ಎಷ್ಟು ಹಾಸ್ಯಸ್ಪದ ಎಂಬುದಕ್ಕೆ ಸನಾತನ ಧರ್ಮದ ಕುರಿತು ಈಗಿನ ಚರ್ಚೆಗಳೇ ಉದಾಹರಣೆ ಎಂದರು.

ಸಮಾಜದಲ್ಲಿ ನನ್ನ ಧರ್ಮ ಇರುವಿಕೆಯನ್ನು ಸದಾ ತೋರಿಸಿಕೊಡುವ ಅಗತ್ಯವಿಲ್ಲ. ಈ ಸಮಾಜ ಹುಟ್ಟಿದ ದಿನದಿಂದಲೂ ನನ್ನ ಧರ್ಮ ಹುಟ್ಟಿಕೊಂಡಿದೆ. ಈ ಭೂಮಿ ಮೇಲೆ ಎಲ್ಲರೂ ಒಂದೇ ಎನ್ನುವ ಭಾವನೆ ಆವರಿಸಿಕೊಂಡಿದ್ದಾಗ ನನ್ನ ಧರ್ಮವನ್ನು 'ಹಿಂದೂ', 'ಸನಾತನ ಧರ್ಮ' ಎಂಬ ಹೆಸರಿನಿಂದ ಕರೆಯುವ ಅಗತ್ಯವಿರಲಿಲ್ಲ. ಈಗ ಅದರ ಅಗತ್ಯವಿದೆ. ಅವರವರ ಜೀವನ ಪದ್ಧತಿಯನ್ನು ಗೌರವಿಸುವುದೇ ಸನಾತನ ಧರ್ಮದ ತಿರುಳು ಎಂದರು.

ಈ ವೇಳೆ ಉಡುಪಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದಂಗಳವರು ಶ್ರೀಮದ್ರಾಮಾಯಣ ಪ್ರವಚನ ನೀಡಿದರು. ನಂತರ ವಿದ್ವಾನ್ ವಿದ್ಯಾಭೂಷಣ ಅವರು ಭಕ್ತಿಗೀತೆ ಹಾಡಿ, ಪ್ರೇಕ್ಷಕರನ್ನು ರಂಜಿಸಿದರು.

ಮೋದಿ ಹುಟ್ಟುಹಬ್ಬ ಅಂಗವಾಗಿ ಆರೋಗ್ಯ ತಪಾಸಣಾ ಶಿಬಿರ



ಪ್ರಧಾನಿ ನರೇಂದ್ರ ಮೋದಿ ಹುಟ್ಟುಹಬ್ಬದ ಅಂಗವಾಗಿ ನರಸಿಂಹರಾಜ ಕ್ಷೇತ್ರದ ಬಿಜೆಪಿ ವತಿಯಿಂದ ಗಾಯತ್ರಿಪುರಂನ ಜ್ಯೋತಿ ಯುವಕರ ಸಂಘದ ಬಡಾವಣೆಯಲ್ಲಿ ಆರೋಗ್ಯ ತಪಾಸಣೆ ಶಿಬಿರ ನಡೆಯಿತು.

ಮೈಸೂರು, ಸೆ.17–ಭಾರತದ ಪ್ರಧಾನಿ ನರೇಂದ್ರ ಮೋದಿ ಹುಟ್ಟುಹಬ್ಬದ ಅಂಗವಾಗಿ ನರಸಿಂಹರಾಜ ಕ್ಷೇತ್ರದ ಬಿಜೆಪಿ ವತಿಯಿಂದ ಪೌರಕಾರ್ಮಿಕರು ಹೆಚ್ಚಾಗಿ ವಾಸಿಸುವ ಗಾಯತ್ರಿಪುರಂನ ಜ್ಯೋತಿ ಯುವಕರ ಸಂಘದ ಬಡಾವಣೆಯಲ್ಲಿ ಆರೋಗ್ಯ ತಪಾಸಣೆ ಮತ್ತು ಕಣ್ಣಿನ ತಪಾಸಣೆ ಶಿಬಿರವನ್ನು ಆಯೋಜಿಸಲಾಗಿತ್ತು.

ಇದೇ ಸಂದರ್ಭದಲ್ಲಿ ಮಾಜಿ ಮೇಯರ್ ಸಂದೇಶ್‌ಸ್ವಾಮಿ ಮಾತನಾಡಿ, ದೇಶದ ಪ್ರಧಾನಿಯಾಗಿ ಸಮಾಜದ ಕಟ್ಟಕಡೆಯ ವ್ಯಕ್ತಿಯ ರಕ್ಷಣೆಯ ಚಿಂತನೆಯುಳ್ಳವರು, ಸ್ವಚ್ಛತಾ ಸೇನಾನಿ ಪೌರಕಾರ್ಮಿಕರ ಪಾದಪೂಜೆಯನ್ನ ಮಾಡಿ ಅವರಂತೆ ಪ್ರತಿಯೊಬ್ಬ ನಾಗರಿಕನೂ ಸಹ ಸ್ವಚ್ಛಭಾರತ ನಿರ್ಮಾಣಕ್ಕೆ ಕೈಜೋಡಿಸಬೇಕೆಂದು ಕರೆಕೊಟ್ಟವರು ನರೇಂದ್ರ ಮೋದಿ ಜೀ. ಇಂದು ನಮ್ಮ ಭಾರತವನ್ನು ಇಡೀ ವಿಶ್ವವೇ ಗೌರವಿಸುವಂತೆ ಮಾಡಿರುವುದು. ಪ್ರತಿಯೊಬ್ಬ ಭಾರತೀಯನೂ ಹೆಮ್ಮೆಪಡುವ ವಿಚಾರ. ಭಾರತದ ಪ್ರಧಾನಿಯಾಗಿ ನರೇಂದ್ರ ಮೋದಿ ಮತ್ತೆ ಆಯ್ಕೆಯಾಗಿ ಬರಲಿ ಎಂದರು.

ಕ್ಷೇತ್ರದ ಬಿಜೆಪಿ ಅಧ್ಯಕ್ಷ ಡಾ.ಭಾನು ಪ್ರಕಾಶ್, ಕರ್ನಾಟಕ ವಸ್ತುಪ್ರದರ್ಶನದ ಮಾಜಿ ಅಧ್ಯಕ್ಷ ಬಿ.ಪಿ.ಮಂಜುನಾಥ್, ಕಾರ್ಪೊರೇಟರ್ ಸಾತ್ವಿಕ್ ಸಂದೇಶ್, ವೇಲು, ಸು.ಮುರಳಿ, ರಮೇಶ್, ಮಣಿ, ಸುಬ್ರಮಣಿ ಇನ್ನಿತರರು ಇದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಭಾರತ ಮಟ್ಟದ ಎನ್‌ಸಿಸಿ ಸೈನಿಕ ಶಿಬಿರಕ್ಕೆ ಆಯ್ಕೆ



ಮಡಿಕೇರಿ, ಸೆ.17– ಭಾರತ ಮಟ್ಟದ ಎನ್.ಸಿ.ಸಿ ಸೈನಿಕ ಶಿಬಿರಕ್ಕೆ ನಗರದ ಕೊಡಗು ವಿದ್ಯಾಲಯ ಶಾಲೆಯ 9ನೇ ತರಗತಿ ವಿದ್ಯಾರ್ಥಿ ಸಾರ್ಜೆಂಟ್ ಸುಹಿತ್ ಜಿ.ಎಸ್. ಆಯ್ಕೆಯಾಗಿದ್ದಾರೆ. ಈತ ಸತತವಾಗಿ 7 ಬಾರಿ ರಾಜ್ಯದ 19 ಬ್ಯಾಚ್‌ನ ಎನ್‌ಸಿಸಿ ಶಿಬಿರಗಳಲ್ಲಿ ಭಾಗವಹಿಸಿ ಕರ್ನಾಟಕ ಮತ್ತು ಗೋವಾ ಡೈರೆಕ್ಟರೇಟ್‌ನ 8 ಮಕ್ಕಳ ತಂಡದಲ್ಲಿ ಮೊದಲಿಗನಾಗಿದ್ದು, ಇದೀಗ ಭಾರತ ಮಟ್ಟದ ಎನ್.ಸಿ.ಸಿ ಸೈನಿಕ ಶಿಬಿರಕ್ಕೆ ಆಯ್ಕೆಯಾಗಿದ್ದಾನೆ. ಸೆ.18ರಿಂದ ದೆಹಲಿಯಲ್ಲಿ ನಡೆಯಲಿರುವ ಭಾರತ ಮಟ್ಟದ ಸೈನಿಕ ಶಿಬಿರದಲ್ಲಿ ಸಾರ್ಜೆಂಟ್ ಸುಹಿತ್ ಪಾಲ್ಗೊಳ್ಳಲಿದ್ದಾನೆ ಎಂದು ಕೊಡಗು ವಿದ್ಯಾಲಯದ ಪ್ರಾಂಶುಪಾಲರು ತಿಳಿಸಿದ್ದಾರೆ. ಸುಹಿತ್ ಅವರು ಭಾಗಮಂಡಲದ ಕಾವೇರಿ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಸುರೇಂದ್ರ ಕುಮಾರ್ ಮತ್ತು ಗೀತಾ ದಂಪತಿ ಪುತ್ರರಾಗಿದ್ದಾರೆ.

ಸೆ.22, ನಗರಸಭೆ ಸಾಮಾನ್ಯ ಸಭೆ

ಚಾಮರಾಜನಗರ, ಸೆ.17– ಚಾಮರಾಜನಗರ ನಗರಸಭೆ ಸಾಮಾನ್ಯ ಸಭೆ ಸೆ.22 ರಂದು ಬೆಳಗ್ಗೆ 11 ಗಂಟೆಗೆ ನಗರಸಭೆ ಕಚೇರಿ ಸಭಾಂಗಣದಲ್ಲಿ ನಡೆಯಲಿದೆ ಎಂದು ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿರಾಜಪೇಟೆಯಲ್ಲಿ ಸಂಭ್ರಮದ ಓಣಂ ಆಚರಣೆ

ಓಣಂ ವೇಳೆ ಶಾಲಾ–ಕಾಲೇಜುಗಳಿಗೆ ರಜೆ ನೀಡುವ ಬಗ್ಗೆ ಸರ್ಕಾರದೊಂದಿಗೆ ಚರ್ಚೆ





ವಿರಾಜಪೇಟೆ, ಸೆ.17– ಮಲಯಾಳಿ ಬಾಂಧವರು ತಮ್ಮ ಸಂಸ್ಕೃತಿ ಮತ್ತು ಆಚಾರ ವಿಚಾರಗಳನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಓಣಂ ಹಬ್ಬವನ್ನು ಒಗ್ಗಟ್ಟಿನಿಂದ ಹಲವು ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಆಚರಣೆ ಮಾಡುತ್ತಿರುವುದು ಉತ್ತಮ ಕಾರ್ಯ ಎಂದು ವಿರಾಜಪೇಟೆ ಶಾಸಕರು, ಮುಖ್ಯಮಂತ್ರಿ ಅವರ ಕಾನೂನು ಸಲಹೆಗಾರರೂ ಆದ ಎ.ಎಸ್. ಪೊನ್ನಣ್ಣ ಶ್ಲಾಘಿಸಿದ್ದಾರೆ.

ಪಟ್ಟಣದ ಮೀನುಪೇಟೆಯಲ್ಲಿರುವ ಶ್ರೀ ಚೈತನ್ಯ ಮಠಪುರ ಮುತ್ತಪ್ಪ ದೇವಾಲಯದ ಕಲಾಮಂಟಪದಲ್ಲಿ 15ನೇ ವರ್ಷದ ಶ್ರೀ ಮುತ್ತಪ್ಪನ್ ಓಣಂ ಆಚರಣಾ ಸಮಿತಿ ವತಿಯಿಂದ ಆಯೋಜಿಸಲಾಗಿದ್ದ ಮಲಯಾಳಂ ಸಂಸ್ಕೃತಿಯನ್ನು ಬಿಂಬಿಸುವ ಓಣಂ ಹಬ್ಬ ಆಚರಣೆಯ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿ, ಗಡಿ ಭಾಗವಾದ ವಿರಾಜಪೇಟೆಯಲ್ಲಿ ವಿಜೃಂಭಣೆಯ ಓಣಂ ಆಚರಣೆ ಮುಂದೆಯು ನಡೆಯುವಂತಾಗಲಿ ಎಂದು ಶುಭ ಕೋರಿದರಲ್ಲದೆ ಓಣಂ ವೇಳೆ ಶಾಲಾ–ಕಾಲೇಜುಗಳಿಗೆ ರಜೆ ಕೊಡುವ ಬಗ್ಗೆ ಸರ್ಕಾರದ ಮಟ್ಟದಲ್ಲಿ ಚರ್ಚಿಸಲಾಗುವುದು ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಓಣಂ ಆಚರಣೆ ಸಮಿತಿ ಅಧ್ಯಕ್ಷ ಪಿ.ಜಿ. ಸುಮೇಶ್ ಮಾತನಾಡಿ, ಮಲಯಾಳಿ ಬಾಂಧವರು ಕೊಡಗಿನ ಅನೇಕ ಕಡೆಗಳಲ್ಲಿ ಓಣಂ ಹಬ್ಬವನ್ನು ಆಚರಣೆ ಮಾಡುತ್ತಿದ್ದು, ಆ ದಿನಗಳಲ್ಲಿ ಪರೀಕ್ಷೆ ಹಾಗೂ ಶಾಲಾ–ಕಾಲೇಜು ಇರುವುದರಿಂದ ವಿದ್ಯಾರ್ಥಿಗಳಿಗೆ ಭಾಗವಹಿಸಲು ಸಾಧ್ಯವಾಗುತ್ತಿಲ್ಲ. ಓಣಂ ಆಚರಣೆ ದಿನ ಸ್ಥಳೀಯ ಶಾಲೆಗಳಿಗೆ ರಜೆ ಘೋಷಿಸುವಂತೆ ಶಾಸಕರಿಗೆ ಮನವಿ ಮಾಡಿದರು.

ಕೊಡಗು ಮಲಯಾಳಿ ಸಮಾಜದ ಸೋಮವಾರಪೇಟೆ ಅಧ್ಯಕ್ಷ ವಿ.ಎಂ. ವಿಜಯನ್ ಮಾತನಾಡಿ, ಮಲಯಾಳಿ ಬಾಂಧವರು ಒಗ್ಗಟ್ಟಿನಿಂದ ಸೌಲಭ್ಯಗಳನ್ನು ಪಡೆದುಕೊಂಡು ಜೀವನದಲ್ಲಿ ಮುಂದೆ ಬರಬೇಕು ಹಾಗೂ ತಮ್ಮ ಮಕ್ಕಳಿಗೆ ಉನ್ನತ ಶಿಕ್ಷಣ ನೀಡುವಂತಾಗಬೇಕು ಎಂದರು. ಎಸ್ಎನ್‌ಡಿಪಿ ಜಿಲ್ಲಾ ಅಧ್ಯಕ್ಷ ವಿ.ಕೆ.ಲೋಕೇಶ್, ಜಿಲ್ಲಾ ಮಲಯಾಳಿ ಸಮಾಜ ಸ್ಥಾಪಕ ಅಧ್ಯಕ್ಷ ನಗರಸಭಾ ಸದಸ್ಯ ಕೆ.ಎಸ್.ರಮೇಶ್ ಮಾತನಾಡಿದರು.

ಮೊದಲಿಗೆ ಶ್ರೀ ಮುತ್ತಪ್ಪ ದೇವಾಲಯದಲ್ಲಿ ಜ್ಯೋತಿ ಬೆಳಗುವುದರೊಂದಿಗೆ ಓಣಂ ಹಬ್ಬದ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಬಳಿಕ ಸಿಂಗಾರಿ ಮೇಳಂ, ಕೇರಳದ ಚೆಂಡೆ ಮದ್ದಳೆ, ಕಥಕ್ಕಳಿ ನೃತ್ಯದೊಂದಿಗೆ ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆಯೊಂದಿಗೆ ಸಾಗಿ ಹಿಂದಿರುಗಿ ದೇವಾಲಯಕ್ಕೆ ಬಂದ ನಂತರ ಮಧ್ಯಾಹ್ನ ಕೇರಳದ ಖಾದ್ಯಗಳಿಂದ ತಯಾರಿಸಲಾದ ವಿಶೇಷ ಭೋಜನ (ಓಣಂ ಸದ್ಯ) ನಡೆಯಿತು. ಹೂವಿನ ರಂಗೋಲಿ (ಪೂಕಳಂ) ಸ್ಪರ್ಧೆ ಏರ್ಪಡಿಸಲಾಗಿತ್ತು. ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಮುಂದಿನ ವರ್ಷಕ್ಕೆ ಶ್ರೀ ಮುತ್ತಪ್ಪನ್ ಮಲಯಾಳಿ ಸಮಾಜ ವಿರಾಜಪೇಟೆ ಎಂದು ಲೋಗೋ ಬಿಡುಗಡೆಗೊಳಿಸಲಾಯಿತು. ವೇದಿಕೆಯಲ್ಲಿ ಕ್ರೀಡಾಪಟು ಸಿ.ಕೆ. ಭಾಗ್ಯಲಕ್ಷ್ಮಿ, ಹೆಚ್ಚು ಅಂಕ ಪಡೆದ ಸದಸ್ಯರ ಮಕ್ಕಳಿಗೆ ಸನ್ಮಾನಿಸಿ ಗೌರವಿಸಲಾಯಿತು. ಮಡಿಕೇರಿಯ ಟಿ.ಕೆ. ಸುಧೀರ್, ಚಟ್ಟಳ್ಳಿಯ ಕೆ.ಕೆ.ಸುರೇಶ್ ಬಾಬು, ಗೋಣಿಕೊಪ್ಪ ವಿ.ವಿ. ಅರುಣ್‌ಕುಮಾರ್, ಮೂರ್ನಾಡು ಕೆ.ಬಾಬು ಉಪಸ್ಥಿತರಿದ್ದರು. ಎಂ.ಎಂ.ಶಶಿಧರನ್ ಸ್ವಾಗತಿಸಿದರು. ಕಾರ್ಯದರ್ಶಿ ಸಿ.ಆರ್.ಬಾಬು ವರದಿ ಓದಿದರು. ರಾಜೇಶ್ ವಂದಿಸಿದರು. ಸಮಾರಂಭದಲ್ಲಿ ಕೊಡಗಿನ ಇತರೆಡೆ ಗಳಿಂದಲೂ ಭಾಗವಹಿಸಿದ್ದರು.

ವ್ಯಕ್ತಿ ಮೇಲೆ ಹಲ್ಲೆ, ಕೊಲೆ ಬೆದರಿಕೆ, ಹಣಕ್ಕೆ ಬೇಡಿಕೆ

ಮಡಿಕೇರಿಯಲ್ಲಿ 14 ಮಂದಿ ಬಂಧನ

ಮಡಿಕೇರಿ, ಸೆ.17– ಕ್ಷುಲ್ಲಕ ವಿಚಾರಕ್ಕೆ ವ್ಯಕ್ತಿಯೊಬ್ಬರ ಮೇಲೆ ಹಲ್ಲೆ ನಡೆಸಿ, ಕೊಲೆ ಬೆದರಿಕೆ ಒಡ್ಡಿ, ಹಣಕ್ಕೆ ಬೇಡಿಕೆ ಇಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಮಡಿಕೇರಿ ನಗರ ಪೊಲೀಸರು ಒಟ್ಟು 14 ಮಂದಿಯನ್ನು ಬಂಧಿಸಿದ್ದಾರೆ.

ನಗರದ ಕಾನ್ವೆಂಟ್ ಜಂಕ್ಷನ್ ನಿವಾಸಿ ಎಂ.ರೆುಡ್ ಮಹಮದ್ ರಶೀದ್(41), ಗೌಳಿಬೀದಿ ನಿವಾಸಿ ಪ್ರಮೋದ್(31), ಚಾಮುಂಡೇಶ್ವರಿ ನಗರದ ಎಂ.ಬಿ. ಡಾಲು (48), ಗೌಳಿಬೀದಿಯ ದರ್ಶನ್ ಟಿ.ಆರ್. (48), ಮಕ್ಕಂದೂರು ಜೀವನ್‌ಕುಮಾರ್ (25), ಮಹದೇವಪೇಟೆಯ ಮದನ್‌ರಾಜ್ ಟಿ.ಪಿ.(34), ಕಡಗದಾಳು ದರ್ಶನ್ ಎಸ್. (24), ಮದೆನಾಡು ನಿವಾಸಿ ಪುರುಷೋತ್ತಮ್ ಎಂ.ಜೆ.(22), ಕಡಗದಾಳು ಮಣಿಕಂಠ ಎಂ.ಆರ್.(24), ಮಂಗಳಾದೇವಿ ನಗರದ ಕಿರಣ್ ರೈ ಎನ್.ಎಸ್.(32), ಗಾಳಿಬೀಡು ಪಿ.ಎಸ್.ಮಂಜು(23), ಇಬ್ನಿಳವಾಡಿ ಕೀರ್ತಿ ಟಿ.ಎಸ್.(31), ವಿದ್ಯಾನಗರದ ಎಸ್.ಸಂದೀಪ್(37), ಕಾನ್ವೆಂಟ್ ಜಂಕ್ಷನ್‌ನ ತಬಸ್ಯಾ(36) ಎಂಬುವರೇ ಬಂಧಿತ ಆರೋಪಿಗಳಾಗಿದ್ದಾರೆ.

ಘಟನೆ ಹಿನ್ನೆಲೆ: ನಗರದ ಗೌಳಿಬೀದಿ ನಿವಾಸಿ ನಿಜಾಮುದ್ದೀನ್ ಎಂಬವರು ಬಾವಿ ಕೆಲಸ ಮಾಡುವ ವೃತ್ತಿಯಲ್ಲಿದ್ದು, ವಿದ್ಯಾನಗರದಲ್ಲಿ ರಶೀದ್ ಅವರ ಮನೆಯಲ್ಲಿ ಸ್ಯಾನಿಟರಿ ಗುಂಡಿ ತೆಗೆಯಲು ಹೋಗಿದ್ದರು. ಈ ವೇಳೆ ನಿಜಾಮುದೀನ್ ಅವರ ಕೈ ರಶೀದ್ ಅವರ ಪತ್ನಿ ತಬಸ್ಯಾ ಅವರಿಗೆ ತಗುಲಿದೆ. ಇದೇ ವಿಚಾರಕ್ಕೆ ರಶೀದ್ ಇತರೊಂದಿಗೆ ಸೇರಿಕೊಂಡು ನಿಜಾಮುದ್ದೀನ್ ಅವರ ಮೇಲೆ ತೀವ್ರ ಹಲ್ಲೆ ನಡೆಸಿದ್ದಾರೆ. ಬಳಿಕ ನಿಜಾಮುದ್ದೀನ್ ಮನೆಗೆ ಬಂದಿದ್ದಾರೆ. ಬಳಿಕ ಗೌಳಿಬೀದಿಗೆ ಆಗಮಿಸಿದ ತಂಡ ನಿಜಾಮುದ್ದೀನ್ ಅವರನ್ನು ಅಪಹರಿಸಿ ನಿಜಾಮುದ್ದೀನ್ ಅವರ ಪತ್ನಿಗೆ ವಾಟ್ಸ್‌ಅಪ್ ಕರೆ ಮಾಡಿ ಫೋನ್ ಪೇ ಮೂಲಕ 5 ಲಕ್ಷ ರೂ. ನೀಡುವಂತೆ ಬೇಡಿಕೆ ಇಟ್ಟಿದ್ದಾರೆ. ಹಣ ನೀಡದೇ ಹೋದಲ್ಲಿ ಪತಿಯನ್ನು ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದಾರೆ. ಕೆಲ ಸಮಯದ ಬಳಿಕ ವೀಡಿಯೋ ಕರೆ ಮಾಡಿ ನಿಜಾಮುದ್ದೀನ್ ಅವರ ಮೇಲೆ ಹಲ್ಲೆ ಮಾಡುತ್ತಿರುವ ದೃಶ್ಯವನ್ನು ಸೆರೆ ಹಿಡಿದು ಆದಷ್ಟು ಬೇಗನೆ ಹಣ ನೀಡುವಂತೆ ಒತ್ತಡ ಹೇರಿದ್ದಾರೆ. ಈ ಕುರಿತು ಮಡಿಕೇರಿ ನಗರ ಪೊಲೀಸರಿಗೆ ನಿಜಾಮುದ್ದೀನ್ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡ ಪೊಲೀಸರು ಪ್ರಕರಣದಲ್ಲಿ ಭಾಗಿಯಾದ ಎಲ್ಲಾ 14 ಮಂದಿ ಆರೋಪಿಗಳನ್ನು ಸೆರೆ ಹಿಡಿದು ಕಾನೂನು ಕ್ರಮ ಕೈಗೊಂಡು ನ್ಯಾಯಾಂಗ ವಶಕ್ಕೆ ಒಪ್ಪಿಸಿದ್ದಾರೆ. ಸೋಮವಾರಪೇಟೆ ಡಿವೈಎಸ್‌ಪಿ ಆರ್.ವಿ. ಗಂಗಾಧರಪ್ಪ ಮಾರ್ಗದರ್ಶನದಲ್ಲಿ ಮಡಿಕೇರಿ ನಗರ ವೃತ್ತ ನಿರೀಕ್ಷಕ ಅನೂಪ್ ಮಾದಪ್ಪ ಠಾಣಾಧಿಕಾರಿ ಶ್ರೀನಿವಾಸ್, ಸಿಬ್ಬಂದಿಗಳು ಕಾರ್ಯಾಚರಣೆ ನಡೆಸಿದ್ದಾರೆ.

ನಾಳೆ ಕೋಟೆ ಗಣಪತಿ ದೇವಾಲಯದಲ್ಲಿ ಗಣೇಶ ಚತುರ್ಥಿ

ಮಡಿಕೇರಿ, ಸೆ.17– ನಗರದ ಕೋಟೆ ಶ್ರೀ ಗಣಪತಿ ದೇವಾಲಯದಲ್ಲಿ ಶ್ರೀ ಗಣೇಶ ಚತುರ್ಥಿ ಹಬ್ಬದ ಪ್ರಯುಕ್ತ ಸೆ.19 ರಂದು ಬೆಳಗ್ಗೆ 9.30 ಗಂಟೆಗೆ ಗಣಪತಿ ಹೋಮ, ಮಧ್ಯಾಹ್ನ 1 ಗಂಟೆಗೆ ಮಹಾಪೂಜೆ ಮತ್ತು ಪ್ರಸಾದ ವಿತರಣೆ, ರಾತ್ರಿ 8 ಗಂಟೆಗೆ ಮಹಾಪೂಜೆ ನಡೆಯಲಿದೆ. ಆದ್ದರಿಂದ ಸಾರ್ವಜನಿಕ ಭಕ್ತಾದಿಗಳು ದೇವಾಲಯದಲ್ಲಿ ನಡೆಯಲಿರುವ ಪೂಜೆಯಲ್ಲಿ ಪಾಲ್ಗೊಳ್ಳುವಂತೆ ಶ್ರೀ ಓಂಕಾರೇಶ್ವರ ದೇವಾಲಯದ ಪ್ರಕಟಣೆ ತಿಳಿಸಿದೆ.

ಸಾಂಸ್ಕೃತಿಕವಾಗಿ ದೇಶ ಕಟ್ಟಿದವರು ವಿಶ್ವಕರ್ಮರು

ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್.ನಾಗರಾಜು



ಮಂಡ್ಯ, ಸೆ.17– ಶಿಲೆಗಳನ್ನು ಆಧರಿಸಿ ನೈಪುಣ್ಯತೆಯಿಂದ ಆಭರಣ, ಆಯುಧ, ಸೌಧ ಹಾಗೂ ದೇವಾಲಯಗಳನ್ನು ನಿರ್ಮಿಸುತ್ತಾ ಸಾಂಸ್ಕೃತಿಕವಾಗಿ ದೇಶ ಕಟ್ಟಿದವರು ವಿಶ್ವಕರ್ಮರು ಎಂದು ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್. ನಾಗರಾಜು ತಿಳಿಸಿದರು.

ಜಿಲ್ಲಾಡಳಿತ, ಜಿಪಂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ನಗರಸಭೆ ಹಾಗೂ ವಿಶ್ವಕರ್ಮ ಸಮಾಜದ ವಿವಿಧ ಸಂಘಟನೆಗಳ ಸಹಯೋಗದೊಂದಿಗೆ ನಗರದ ಕಲಾಮಂದಿರದಲ್ಲಿ ಭಾನುವಾರ ನಡೆದ ವಿಶ್ವಕರ್ಮ ಜಯಂತಿಯಲ್ಲಿ ಮಾತನಾಡಿದ ಅವರು, ವಿಶ್ವಕರ್ಮರು ನಾಗರಿಕತೆಗಿಂತ ಮೊದಲೇ ಕಬ್ಬಿಣ, ಕಟ್ಟಿಗೆ, ಕಂಚು, ತಾಮ್ರ, ಬೆಳ್ಳಿ ಹಾಗೂ ಬಂಗಾರಗಳಲ್ಲಿ ವಿವಿಧ ಶಿಲೋಪಕರಣ ಹಾಗೂ ಆಯುಧಗಳನ್ನು ಮಾಡುತ್ತಾ ದೇಶಕ್ಕೆ ಸುಂದರ ಕೊಡುಗೆ ನೀಡುತ್ತಾ ಬಂದಿದ್ದಾರೆ ಎಂದರು.

ವಿಶ್ವಕರ್ಮ ಜನಾಂಗದವರು ಕಲೆಯಲ್ಲಿ ನೈಪುಣ್ಯತೆ ಪಡೆದಿದ್ದಾರೆ. ವಿಶ್ವಕರ್ಮ ಕೆತ್ತಿದ ನೇಗಿಲುಗಳಿಂದಲೇ ರೈತಾಪಿ ವರ್ಗ ದೇಶಕ್ಕೆ ಅನ್ನ ನೀಡುತ್ತಿದೆ. ಪ್ರಾಚೀನ ಕಾಲದ ಸಾಮ್ರಾಜ್ಯಗಳ ಇತಿಹಾಸವನ್ನು ಕಲ್ಲಿನಲ್ಲಿ ಕೆತ್ತಿದವರು ಕೂಡ ವಿಶ್ವಕರ್ಮರೇ. ಬೃಹತ್ ಕಲ್ಲು ಬಂಡೆಗಳಲ್ಲಿ ದೇವಾಲಯ, ಏಕಶಿಲಾ ಮೂರ್ತಿ ಹಾಗೂ ದೇವಾಲಯ ಕಂಬಗಳ ಶಿಲ್ಪಕಲೆಗಳು ಹೀಗೆ ದೇಶಕ್ಕೆ ತಮ್ಮದೇ ಆದ ವಾಸ್ತುಶಿಲ್ಪದ ಕೊಡುಗೆ ನೀಡಿದ್ದಾರೆ ಎಂದರು. ದೇಶದ ಸಣ್ಣ ಸಣ್ಣ ಸಮುದಾಯಗಳು ಸಂಶೋಧನೆಗಳ ಮೂಲಕ ತಮ್ಮ ಇತಿಹಾಸ ಕಂಡುಕೊಳ್ಳುತ್ತಿವೆ. ಇಂತಹ ಸಂಶೋಧನೆಗಳು ಹೆಚ್ಚಲಿ. ದೇಶದಲ್ಲಿ ಹಿಂದುಳಿದ ವರ್ಗದವರ ಪರ್ವಕಾಲ ಪ್ರಾರಂಭವಾಗಿದೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ವಿಶೇಷ ಸ್ಥಾನಮಾನ ನೀಡಿ ಹಿಂದುಳಿದ ವರ್ಗದವರನ್ನು ಸಮಾಜದ ಮುಖ್ಯವಾಹಿನಿಗೆ ಕರೆತರಲು ಶ್ರಮಿಸುತ್ತಿವೆ ಎಂದರು.

ವಿಶ್ವಕರ್ಮ ಏಕದಂಡಗಿ ಮಠದ ಶ್ರೀಮದಾನಾಗುಂದಿ ಸಂಸ್ಥಾನ ಸರಸ್ವತಿ ಪೀಠದ ಕಾಳಹಸ್ತೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ವಕೀಲರು ಹಾಗೂ ವಿಶ್ವಕರ್ಮ ಕುಲಶಾಸ್ತ್ರೀಯ ಅಧ್ಯಯನ ಪೀಠದ ಸದಸ್ಯರಾದ ಬಿ.ರಾಮಾಚಾರ್ ಅವರು ವಿಶ್ವಕರ್ಮದವರ ಬಗ್ಗೆ ವಿಶೇಷ ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ತಿಮ್ಮಯ್ಯ, ನಗರಸಭಾ ಸದಸ್ಯ ಕುಮಾರ್, ವಿಶ್ವಕರ್ಮ ಸಮಾಜದ ಗೌರವಾಧ್ಯಕ್ಷ ಶ್ರೀನಿವಾಸಮೂರ್ತಿ, ಶಂಕರಪ್ರಸಾದ್, ಕಾರ್ಯದರ್ಶಿ ನಾಗರಾಜು ಸೇರಿದಂತೆ ಇನ್ನಿತರರಿದ್ದರು.

ಜಾಥಾ, ಮೆರವಣಿಗೆಗೆ ಚಾಲನೆ: ಕಾರ್ಯಕ್ರಮಕ್ಕೂ ಮುನ್ನಾ ಶಾಸಕ ಗಣಿಗ ರವಿಕುಮಾರ್ ನಗರದ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ವಿಶ್ವಕರ್ಮ ಜಯಂತಿ ಅಂಗವಾಗಿ ಹಮ್ಮಿಕೊಂಡಿದ್ದ ಜಾಥಾ ಮೆರವಣಿಗೆಗೆ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಪಂಚಕರ್ಮ ಕೆಲಸ ಮಾಡುವ ವಿಶ್ವಕರ್ಮ ಜನಾಂಗ ರೈತಸ್ನೇಹಿಯಾಗಿದ್ದಾರೆ. ರೈತರಿಗೆ ಬೇಕಾದ ಸಲಕರಣೆಗಳು ಹಾಗೂ ಎಲ್ಲಾ ರೀತಿಯ ಕೆತ್ತನೆ ಕೆಲಸ ಮಾಡಿ ರೈತ ಬಾಂಧವರಿಗೆ ನೆರವಾಗಿದ್ದಾರೆ. ವಿಶ್ವಕರ್ಮ ಜನಾಂಗ ಇರಲಿಲ್ಲ ಎಂದರೆ ವಿಗ್ರಹಗಳು, ಉಳುಮೆ ಮಾಡುವ ಸಲಕರಣೆ ಜನಸಾಮಾನ್ಯರಿಗೆ ಸಿಗುತ್ತಿರಲಿಲ್ಲ. ವಿಶ್ವಕರ್ಮ ಸಮುದಾಯ ಭವನ ನಿರ್ಮಾಣಕ್ಕೆ ಸರ್ಕಾರದಿಂದ ನೆರವು ನೀಡಲಾಗುವುದು. ನಿಮ್ಮ ಜೊತೆ ಸರ್ಕಾರ ಇದೆ ಎಂದರು.

ಜಾಥಾ ಜಿಲ್ಲಾಧಿಕಾರಿ ಕಚೇರಿಯಿಂದ ಹೊರಟು ಕಾರ್ಮೆಲಾ ಕಾನ್ವೆಂಟ್ ರಸ್ತೆ ಮೂಲಕ ಆರ್‌ಪಿ ರಸ್ತೆ ನೂರಡಿ ರಸ್ತೆ, ಹೊಸಹಳ್ಳಿ ಸರ್ಕಲ್, ವಿವಿ ರಸ್ತೆಯ ಮೂಲಕ ಕಲಾಮಂದಿರ ತಲುಪಿತು. ಜಾಥಕ್ಕೆ ವಿವಿಧ ಕಲಾತಂಡಗಳು ಮೆರುಗು ನೀಡಿದವು.

ಶೀಘ್ರ ನ್ಯಾಯದಾನಕ್ಕೆ ನ್ಯಾಯಾಧೀಶರು, ವಕೀಲರು ಮುಂದಾಗಿ

ಹೈಕೋರ್ಟ್ ನ್ಯಾಯಮೂರ್ತಿ ಡಾ.ಹೆಚ್.ಬಿ.ಪ್ರಭಾಕರಶಾಸ್ತ್ರಿ



ಕೆ.ಆರ್.ಪೇಟೆ, ಸೆ.17– ಸಂವಿಧಾನದ ಆಶಯದಂತೆ ಶೀಘ್ರ ನ್ಯಾಯದಾನಕ್ಕೆ ನ್ಯಾಯಾಧೀಶರು ಮತ್ತು ವಕೀಲರು ಮುಂದಾಗಬೇಕು. ಇದಕ್ಕಾಗಿ ಕೆ.ಆರ್. ಪೇಟೆಗೆ ಜಿಲ್ಲಾ ನ್ಯಾಯಾಲಯ ಮಂಜೂರು ಮಾಡಲಾಗಿದ್ದು, ಶೀಘ್ರ ಆರಂಭಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ರಾಜ್ಯ ಹೈಕೋರ್ಟ್ ನ್ಯಾಯಮೂರ್ತಿ ಹಾಗೂ ಮಂಡ್ಯ ಜಿಲ್ಲಾ ಆಡಳಿತ ನ್ಯಾಯಾಧೀಶ ಡಾ.ಹೆಚ್.ಬಿ.ಪ್ರಭಾಕರಶಾಸ್ತ್ರಿ ತಿಳಿಸಿದರು.

ಪಟ್ಟಣದಲ್ಲಿ ಎರಡೂವರೆ ಕೋಟಿ ರೂ. ವೆಚ್ಚದಲ್ಲಿ ನೂತನವಾಗಿ ನಿರ್ಮಿಸಿರುವ ವಕೀಲರ ಭವನ ಲೋಕಾರ್ಪಣೆಗೊಳಿಸಿ ಮಾತನಾಡಿದ ಅವರು, ಕೆ.ಆರ್.ಪೇಟೆಯಲ್ಲಿ ಪ್ರಸ್ತುತ 4 ನ್ಯಾಯಾಲಯಗಳು ಕಾರ್ಯನಿರ್ವಹಿಸುತ್ತಿದ್ದರೂ, 12 ಸಾವಿರಕ್ಕೂ ಹೆಚ್ಚು ಪ್ರಕರಣ ಇತ್ಯರ್ಥವಾಗದಿರುವುದು ಸಂವಿಧಾನದ ಶೀಘ್ರ ನ್ಯಾಯದಾನದ ಪ್ರಕಾರ ಒಳ್ಳೆಯ ಬೆಳವಣಿಗೆಯಲ್ಲ. ವಕೀಲರು ಬದ್ಧತೆಯಿಂದ ಕೆಲಸ ಮಾಡುವ ಮೂಲಕ ಶೀಘ್ರ ಪ್ರಕರಣಗಳ ಇತ್ಯರ್ಥಕ್ಕೆ ಮುಂದಾಗಬೇಕು. ನ್ಯಾಯ ಅರಸಿ ನ್ಯಾಯಾಲಯಕ್ಕೆ ಬರುವ ಬಡವರು ಹಾಗೂ ಮಧ್ಯಮ ವರ್ಗದವರಿಗೆ ಶೀಘ್ರ ನ್ಯಾಯ ಸಿಗುವಂತಾಗಬೇಕು ಎಂದರು.

ಹೈಕೋರ್ಟ್ ನ್ಯಾಯಮೂರ್ತಿ ಟಿ.ಜಿ.ಶಿವಶಂಕರೇಗೌಡ ಮಾತನಾಡಿ, ಯುವ ವಕೀಲರು ಕಾನೂನು ಪುಸ್ತಕಗಳನ್ನು ಚೆನ್ನಾಗಿ ಅಭ್ಯಾಸ ಮಾಡಿ. ವ್ಯಾಜ್ಯಗಳ ಆಳಕ್ಕೆ ಇಳಿದು ಸಮಸ್ಯೆ ಅರ್ಥ ಮಾಡಿಕೊಂಡು ವಾದ ಮಂಡಿಸಿ. ನಿಮ್ಮನ್ನೇ ನಂಬಿ ಬಂದ ಕಕ್ಷಿದಾರನಿಗೆ ನ್ಯಾಯ ದೊರಕಿಸಿಕೊಡಲು ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದರು.

ರಾಜ್ಯ ವಕೀಲರ ಪರಿಷತ್ ಅಧ್ಯಕ್ಷ ವಿಶಾಲ್ ರಘು ಮಾತನಾಡಿ, ನ್ಯಾಯಾಲಯಗಳ ಆಶ್ರಯದಲ್ಲಿ ನಡೆಯುವ ಕಾರ್ಯಕ್ರಮಗಳಲ್ಲಿ ಶಿಷ್ಟಾಚಾರ ಪ್ರಕಾರ ಸ್ಥಳೀಯ ಶಾಸಕರು ಹಾಗೂ ಜಿಲ್ಲಾ ಮಂತ್ರಿಗಳು ಭಾಗವಹಿಸಲು ಅವಕಾಶ ಮಾಡಿಕೊಡಬೇಕು. ವಕೀಲರ ಭವನದ ಕಟ್ಟಡಕ್ಕೆ ಸರ್ಕಾರದಿಂದ ಸಹಾಯ ಪಡೆಯಲಾಗಿದೆ. ಆದರೆ ಸರ್ಕಾರವನ್ನು ಪ್ರತಿನಿಧಿಸುವ ಸಚಿವರನ್ನೇ ಕಾರ್ಯಕ್ರಮಕ್ಕೆ ಆಹ್ವಾನಿಸದಿದ್ದರೆ ಸಮಾಜಕ್ಕೆ ತಪ್ಪು ಸಂದೇಶ ರವಾನಿಸಿದಂತಾಗುತ್ತದೆ. ಆದ್ದರಿಂದ ಇನ್ನು ಮುಂದೆ ನ್ಯಾಯಾಲಯದ ಕಾರ್ಯಕ್ರಮಗಳಲ್ಲಿ ಕಡ್ಡಾಯವಾಗಿ ಶಿಷ್ಟಾಚಾರ ಪಾಲಿಸಿ ನ್ಯಾಯಾಲಯಗಳಲ್ಲಿ ಯಾವುದೇ ಪ್ರಕರಣಗಳನ್ನು ಹೊಂದಿಲ್ಲದ ಜನಪ್ರತಿನಿಧಿಗಳನ್ನು ಕಡ್ಡಾಯವಾಗಿ ಆಹ್ವಾನಿಸಬೇಕು ಎಂದರು.

ಹೈಕೋರ್ಟ್ ವಿಶ್ರಾಂತ ನ್ಯಾಯಮೂರ್ತಿ ಬಿ.ಶ್ರೀನಿವಾಸಗೌಡ ಮಾತನಾಡಿದರು. ಈ ವೇಳೆ ಮಂಡ್ಯ ಜಿಲ್ಲಾ ಸತ್ರ ನ್ಯಾಯಾಲಯದ ಪ್ರಧಾನ ನ್ಯಾಯಾಧೀಶೆ ರಮಾ, ತಾಲೂಕು ಜೆಎಂಎಫ್‌ಸಿ ಸಿವಿಲ್ ನ್ಯಾಯಾಲಯದ ಹಿರಿಯಶ್ರೇಣಿ ನ್ಯಾಯಾಧೀಶ ಸಮೀರ್ ಪಿ.ನಂದ್ಯಾಲ್, ಅಪರ ಸಿವಿಲ್ ನ್ಯಾಯಾಧೀಶರಾದ ಶಕುಂತಲಾ, ಅರ್ಪಿತಾ, ಹೆಚ್.ಓಂಕಾರಮೂರ್ತಿ, ತಾಲೂಕು ವಕೀಲರ ಸಂಘದ ಅಧ್ಯಕ್ಷ ಎನ್.ಆರ್.ರವಿಶಂಕರ್, ಉಪಾಧ್ಯಕ್ಷ ಬಿ.ಸಿ.ದಿನೇಶ್, ಕಾರ್ಯದರ್ಶಿ ಆರ್.ಕೆ. ರಾಜೇಗೌಡ, ಜಂಟಿ ಕಾರ್ಯದರ್ಶಿ ಸಿ.ನಿರಂಜನ್, ಖಜಾಂಚಿ ಜಗದೀಶ್, ನಿರ್ದೇಶಕರಾದ ಎಂ.ರಾಣಿ, ಸುಜಾತ, ಪ್ರಭಾಕರ್, ಸುಂದ್ರೇಶ್, ಯೋಗೇಂದ್ರ, ಎ.ಎನ್.ವಿಜಯಕುಮಾರ್, ರಾಜ್ಯ ಆರ್‌ಟಿಓ ಅಧಿಕಾರಿಗಳ ಸಂಘದ ಅಧ್ಯಕ್ಷ ಆರ್‌ಟಿಓ ಮಲ್ಲಿಕಾರ್ಜುನ್, ಹಿರಿಯ ವಕೀಲರಾದ ಬಿ.ಎಲ್.ದೇವರಾಜು, ಎಸ್.ಸಿ. ವಿಜಯ್ ಕುಮಾರ್, ಜಿ.ಆರ್.ಅನಂತ ರಾಮಯ್ಯ, ಬಿ.ಗಣೇಶ್, ಕೆ.ಎನ್. ನಾಗರಾಜು, ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಇಂಜಿನಿಯರ್ ಹರ್ಷ, ಎಇಇ ರಾಜಶೇಖರ್, ತಾಲೂಕು ವಕೀಲರ ಸಂಘದ ನೂರಾರು ವಕೀಲರು, ಕಕ್ಷಿದಾರರು ಹಾಗೂ ನ್ಯಾಯಾಲಯದ ಸಿಬ್ಬಂದಿ ಇನ್ನಿತರರಿದ್ದರು.

ಬಣ್ಣರಹಿತ ಮಣ್ಣಿನ ಮೂರ್ತಿಗಳೊಂದಿಗೆ ಗಣೇಶ ಹಬ್ಬ ಆಚರಿಸಿ

ಮಂಡ್ಯ, ಸೆ.17– ಸ್ವರ್ಣಗೌರಿ ಹಾಗೂ ವರಸಿದ್ಧಿ ವಿನಾಯಕ ಚತುರ್ಥಿ ಪ್ರಯುಕ್ತ ಗೌರಿ ಹಾಗೂ ಗಣೇಶನ ಪ್ರತಿಮೆಗಳನ್ನು ಪ್ರತಿಷ್ಠಾಪಿಸಿ, ಪೂಜಿಸಿ ಕೆರೆ/ಬಾವಿ ಹಾಗೂ ಇನ್ನಿತರೆ ನೈಸರ್ಗಿಕ ಜಲಮೂಲಗಳಿಗೆ ವಿಸರ್ಜಿಸುವುದು ಸಂಪ್ರದಾಯವಾಗಿದ್ದು, ಈ ಪ್ರತಿಮೆಗಳ ವಿಸರ್ಜನೆಯಿಂದ ನೈಸರ್ಗಿಕ ಜಲಮೂಲಗಳಲ್ಲಿ ಜಲಮಾಲಿನ್ಯ ಉಂಟಾಗಲಿದೆ. ಹೀಗಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಕೆಲವು ಮಾರ್ಗಸೂಚಿಗಳನ್ನು ಹೊರತಂದಿದ್ದು, ಈ ಕೆಳಕಂಡಂತಿದೆ.

▶ ಗೌರಿ–ಗಣೇಶ ಹಬ್ಬದ ಸಂದರ್ಭ ಸಾರ್ವಜನಿಕರು ಬಣ್ಣರಹಿತ ಮಣ್ಣಿನ ಮೂರ್ತಿಗಳೊಂದಿಗೆ ಹಬ್ಬ ಆಚರಿಸಿ ತದನಂತರ ನಗರಸಭೆ/ಪುರಸಭೆಯಿಂದ ನಿಗದಿಪಡಿಸಿದ ಸ್ಥಳಗಳಲ್ಲಿಯೇ ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಸಂಚಾರಿ ವಾಹನದಲ್ಲಿಯೇ ಮೂರ್ತಿಗಳನ್ನು ವಿಸರ್ಜಿಸುವುದು.

▶ ಗಣೇಶ ಮೂರ್ತಿಗಳನ್ನು ವಿಸರ್ಜಿಸುವ ಸಂದರ್ಭ ಹಸಿಕಸ (ಹೂವು, ಹಣ್ಣು ಬಾಳೆಕಂಬ, ಮಾವಿನತೋರಣ, ಇತ್ಯಾದಿ ಅಲಂಕಾರಿ ವಸ್ತುಗಳು) ಪ್ರತ್ಯೇಕಿಸಿ ಮೂರ್ತಿಗಳೊಂದಿಗೆ ನೀರಿಗೆ ವಿಸರ್ಜಿಸದೆ ನಗರಸಭೆ/ ಪುರಸಭೆಯ ಕಸ ಸಂಗ್ರಹಣಾ ವಾಹನಕ್ಕೆ ನೀಡುವುದು.

▶ ಸದರಿ ಹಬ್ಬ ಆಚರಣೆ ಹಿನ್ನೆಲೆಯಲ್ಲಿ ಮಂಡ್ಯ ಪ್ರಾದೇಶಿಕ ಕಚೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಗಣೇಶ ವಿಗ್ರಹಗಳ ಪರಿಸರಸ್ನೇಹಿ ವಿಸರ್ಜನೆಗೆ ಸೆ.18ರಂದು ಸಂಚಾರಿ ವಾಹನಗಳಲ್ಲಿ ನೀರಿನ ಟ್ಯಾಂಕರ್‌ಗಳ ವ್ಯವಸ್ಥೆ ಮಾಡಲಾಗಿದೆ ಎಂದು ಪ್ರಾದೇಶಿಕ ಕಚೇರಿ ಪರಿಸರ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗೆ ದೂ:9008839505, 9742345840, 9945767878 ಅಥವಾ 9110485475 ಅನ್ನು ಸಂಪರ್ಕಿಸಿ.

ಭಾರತವನ್ನು ವಿಶ್ವಗುರುವಾಗಿಸಿದ ಪ್ರಧಾನಿ ನರೇಂದ್ರ ಮೋದಿ

ಎಸ್.ಮಹದೇವಯ್ಯ ಮೆಚ್ಚುಗೆ



ಚಾಮರಾಜನಗರ, ಸೆ.17– ಪ್ರಧಾನಿ ಮೋದಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತವನ್ನು ಉನ್ನತ ಸ್ಥಾನಕ್ಕೇರಿಸಿ, ವಿಶ್ವ ಗುರುವನ್ನಾಗಿಸಿದ್ದಾರೆ ಎಂದು ಕಾಂಪೋಸ್ಟ್ ನಿಗಮದ ಮಾಜಿ ಅಧ್ಯಕ್ಷ ಎಸ್.ಮಹದೇವಯ್ಯ ಮೆಚ್ಚುಗೆ ವ್ಯಕ್ತಪಡಿಸಿದರು.

ನಗರದ ಹಿರಿಯ ನಾಗರಿಕರ ಹಗಲು ಯೋಗಕ್ಷೇಮ ಕೇಂದ್ರದಲ್ಲಿ ಪ್ರಧಾನಿ ಮೋದಿ ಹುಟ್ಟುಹಬ್ಬದ ಅಂಗವಾಗಿ ಆಯೋಜಿಸಿದ್ದ ಸೇವಾ ಪಾಕ್ಷಿಕ ಕಾರ್ಯಕ್ರಮದಲ್ಲಿ 100ಕ್ಕೂ ಹೆಚ್ಚು ಮಂದಿ ಹಿರಿಯ ನಾಗರಿಕರನ್ನು ಸನ್ಮಾನಿಸಿ ಅವರು ಮಾತನಾಡಿದರು. ಪ್ರಧಾನಿ ಮೋದಿ ದಿನದಲ್ಲಿ 4 ಗಂಟೆ ಮಾತ್ರ ನಿದ್ರೆ ಮಾಡಿ ಉಳಿದ ಅವಧಿಯಲ್ಲಿ ದೇಶದ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ. ಹೀಗಾಗಿ ಇಂದು ದೇಶಾದ್ಯಂತ ವಿವಿಧ ಸೇವಾ ಕಾರ್ಯಗಳ ಮೂಲಕ ಅವರ ಹುಟ್ಟುಹಬ್ಬವನ್ನು ಆಚರಿಸಲಾಗುತ್ತಿದೆ. ಅಲ್ಲದೇ ಅ.2ರ ಗಾಂಧಿ ಜಯಂತಿವರೆಗೆ ನಿತ್ಯ ಸೇವಾ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗಿದೆ ಎಂದರು. ಕೋವಿಡ್ ಸಂದರ್ಭ ಅವರು ತೆಗೆದುಕೊಂಡು ದಿಟ್ಟ ನಿರ್ಧಾರಗಳು ವಿಶ್ವವೇ ಮೆಚ್ಚುವಂತಾಗಿತ್ತು. ಕೋವಿಡ್ ಲಸಿಕೆಯನ್ನು ಉಚಿತವಾಗಿ ದೇಶದ ಎಲ್ಲಾ ಜನರಿಗೂ ನೀಡುವ ಮೂಲಕ ಕೋವಿಡ್ ಮುಕ್ತ ಭಾರತ ಮಾಡಲು ಶ್ರಮಿಸಿದರು. ಸ್ವದೇಶಿ ಲಸಿಕೆ ಉತ್ಪಾದಿಸಿ, ದೇಶ ಸೇರಿದಂತೆ ನೆರೆಹೊರೆಯ ರಾಷ್ಟ್ರಗಳಿಗೆ ಲಸಿಕೆ ನೀಡಿ, ವಿಶ್ವ ಮಟ್ಟದಲ್ಲಿ ಭಾರತವನ್ನು ಮೆಚ್ಚುವಂತೆ ಮಾಡಿದರು ಎಂದರು.

ಕಾಡಾ ಮಾಜಿ ಅಧ್ಯಕ್ಷ ಜಿ.ನಿಜಗುಣರಾಜು, ಕೇಂದ್ರ ಬರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ ಮಾತನಾಡಿದರು. ಕಾರ್ಯಕ್ರಮದಲ್ಲಿ ನಗರಸಭಾ ಸದಸ್ಯೆ ಕುಮುದಾ ಕೇಶವಮೂರ್ತಿ, ಎಪಿಎಂಸಿ ಅಧ್ಯಕ್ಷ ಮನೋಜ್ ಪಟೇಲ್, ಮುಖಂಡರಾದ ಪರಮೇಶ್, ಬಾಬು, ಚಿನ್ನಮುತ್ತು, ಕೇಶವಮೂರ್ತಿ, ಗ್ರಾಪಂ ಸದಸ್ಯರಾದ ಪ್ರವೀಣ್, ಮಾದಶೆಟ್ಟಿ, ಮಹದೇವ್, ಗುರುಸಿದ್ದಯ್ಯ ಇತರರಿದ್ದರು.

ಗೌರಿ-ಗಣೇಶ ಹಬ್ಬ ಅದ್ದೂರಿ ಆಚರಣೆಗೆ ಸಿದ್ಧತೆ

● ಗೌರಿ, ಗಣೇಶ ಮೂರ್ತಿಗಳ ಭರ್ಜರಿ ವ್ಯಾಪಾರ ● ನಗರದಾದ್ಯಂತ ಕಳೆಗಟ್ಟಿದ ಹಬ್ಬದ ಸಂಭ್ರಮ

ಚಾಮರಾಜನಗರ, ಸೆ.17– ನಗರ, ಪಟ್ಟಣ ಸೇರಿದಂತೆ ಜಿಲ್ಲಾದ್ಯಂತ ಗೌರಿ–ಗಣೇಶ ಹಬ್ಬ ಅದ್ದೂರಿ ಆಚರಣೆಗೆ ಸಿದ್ಧತೆ ಜೋರಾಗಿದ್ದು, ಪ್ರತಿ ವರ್ಷದಂತೆ ಈ ಬಾರಿಯು ವಿಜೃಂಭಣೆಯಿಂದ ಹಬ್ಬ ನಡೆಯುವುದು ನಿಶ್ಚಳವಾಗಿದೆ.

ನಗರ, ಪಟ್ಟಣ ಪ್ರದೇಶಗಳಲ್ಲಿ ಗೌರಿ–ಗಣೇಶ ಮೂರ್ತಿ ಮಾರಾಟ ಮಳಿಗೆಗಳು ತಲೆ ಎತ್ತಿದ್ದು, ವಿಗ್ರಹ ತಯಾರಕರು, ವ್ಯಾಪಾರಿಗಳು ಲಾಭದ ನಿರೀಕ್ಷೆಯಲ್ಲಿದ್ದಾರೆ. ಮತ್ತೊಂದೆಡೆ ಗಣೇಶೋತ್ಸವ ಸಂಘಟಕರು ನೇರವಾಗಿ ತಯಾರಕರನ್ನು ಭೇಟಿ ಮಾಡಿ ಖರೀದಿಗೆ ಮುಂದಾಗಿದ್ದಾರೆ. ಪ್ರತಿ ಬಾರಿಯಂತೆ ಈ ಬಾರಿಯೂ ಮೂರ್ತಿಗಳಿಗೆ ಬೇಡಿಕೆ ಹೆಚ್ಚಾಗಿದ್ದು, 50 ರೂ.ಗಳಿಂದ 18 ಸಾವಿರದವರೆಗೆ ಮೂರ್ತಿಗಳು ಮಾರುಕಟ್ಟೆಯಲ್ಲಿ ಲಭ್ಯವಿವೆ.



ಅದ್ದೂರಿ ಆಚರಣೆಗೆ ಸಿದ್ಧತೆ: ನಗರ, ಪಟ್ಟಣ ಸೇರಿದಂತೆ ಗ್ರಾಮೀಣ ಭಾಗದಲ್ಲೂ ಗೌರಿ–ಗಣೇಶ ಹಬ್ಬವನ್ನು ಅದ್ದೂರಿಯಾಗಿ ಆಚರಿಸಲು ಸಿದ್ಧತೆ ನಡೆಸಲಾಗಿದೆ. ಗಣೇಶನ ಮೂರ್ತಿ ಪ್ರತಿಷ್ಠಾಪಿಸಲು ಚಪ್ಪರ ಹಾಕಿ, ವಿದ್ಯುತ್ ದೀಪಾಲಂಕಾರ ಮಾಡಲಾಗುತ್ತಿದೆ. ವಿವಿಧ ವಿನ್ಯಾಸದ ಗಣೇಶನ ಮೂರ್ತಿ ಪ್ರತಿಷ್ಠಾಪನೆಗೆ ಜನರು ಮುಂದಾಗಿದ್ದಾರೆ.

ವ್ಯಾಪಾರ ಜೋರು: ಗೌರಿ, ಗಣೇಶ ಮೂರ್ತಿ ತಯಾರಕರು ಹಾಗೂ ಮಾರಾಟಗಾರರು ತಾತ್ಕಾಲಿಕ ಮಳಿಗೆಗಳನ್ನು ನಿರ್ಮಿಸಿ ಮೂರ್ತಿಗಳ ಮಾರಾಟದಲ್ಲಿ ತೊಡಗಿದ್ದಾರೆ. ಮನೆಗಳಲ್ಲಿ ಗೌರಿ–ಗಣೇಶ ಮೂರ್ತಿ ಪ್ರತಿಷ್ಠಾಪಿಸಿ, ಪೂಜಿಸುವವರು, ಸಾರ್ವಜನಿಕ ಗಣೇಶೋತ್ಸವ ಆಯೋಜಿಸುವ ಸಂಘಟಕರು ಮಳಿಗೆಗಳಿಗೆ ತೆರಳಿ ವ್ಯಾಪಾರಕ್ಕೆ ಮುಂದಾಗಿದ್ದಾರೆ. ಉಳಿದಂತೆ ಹಬ್ಬದ ವಿಶೇಷವಾಗಿ ಹೊಸ ಬಟ್ಟೆ ಖರೀದಿಗೆ ಜನರು ಬಟ್ಟೆ ಅಂಗಡಿಗಳಿಗೆ ಲಗ್ಗೆ ಹಾಕಿದ್ದರು. ಅಲ್ಲದೇ, ಹಣ್ಣು ಹೂ, ತರಕಾರಿ ವ್ಯಾಪಾರವೂ ಬಲು ಜೋರಾಗಿಯೇ ನಡೆಯಿತು.

ಒಂದೇ ದಿನ ಆಚರಣೆ: ಈ ಬಾರಿ ಗೌರಿ ಮತ್ತು ಗಣೇಶನ ಹಬ್ಬ ಒಂದೇ ದಿನ ಬಂದಿದೆ. ಸಾಮಾನ್ಯವಾಗಿ ಗಣೇಶನ ಹಬ್ಬದ ಮುನ್ನಾ ದಿನ ಗೌರಿ ಹಬ್ಬ ಇರುತ್ತದೆ. ಹಾಗಾಗಿ, ಗಣೇಶ ಚತುರ್ಥಿಗೆ ಎರಡ್ಮೂರು ದಿನಗಳು ಇರುವಾಗಲೇ ಗಣೇಶ, ಗೌರಿ ಮೂರ್ತಿಗಳ ವ್ಯಾಪಾರ ಜೋರಾಗುತ್ತದೆ. ಈ ಸಲ ಎರಡೂ ಹಬ್ಬ ಸೋಮವಾರವೇ ಬಂದಿರುವುದರಿಂದ ಭಾನುವಾರ ಗಣೇಶನ ಅಂಗಡಿಗಳ ಮುಂದೆ ಹೆಚ್ಚು ಗ್ರಾಹಕರು ಕಂಡು ಬಂದರು. ಮಕ್ಕಳು, ಮಹಿಳೆಯರು ಮತ್ತು ದೊಡ್ಡವರು ಅಂಗಡಿಗಳಿಗೆ ಬಂದು, ಮೂರ್ತಿಗಳನ್ನು ಖರೀದಿಸುತ್ತಿದ್ದದ್ದು ಸಾಮಾನ್ಯವಾಗಿತ್ತು.

ನಗರದಲ್ಲಿ ಚಾಮರಾಜೇಶ್ವರಸ್ವಾಮಿ ದೇವಾಲಯದ ಬಳಿ 8 ಮಾರಾಟ ಮಳಿಗೆಗಳಿವೆ. ಅಗ್ರಹಾರ ಬೀದಿಯಲ್ಲಿರುವ ಪಟ್ಟಾಭಿರಾಮ ಮಂದಿರದಲ್ಲೂ ಗಣೇಶ, ಗೌರಿ ಮೂರ್ತಿಗಳನ್ನು ಮಾರಾಟಕ್ಕೆ ಇಡಲಾಗಿದೆ. ಪಿಓಪಿ ಗಣೇಶ, ಗೌರಿ ಮೂರ್ತಿಗಳಿಗೆ ಜಿಲ್ಲಾಡಳಿತ ನಿರ್ಬಂಧ ವಿಧಿಸಿರುವುದರಿಂದ ಪಿಓಪಿ ಮೂರ್ತಿಗಳು ಎಲ್ಲೂ ಕಾಣಿಸಲಿಲ್ಲ.



ಸುದರ್ಶನ ಚಕ್ರಧಾರಿ ಗಣೇಶ



ಶ್ರೀವಿದ್ಯಾಗಣಪತಿ ಮಂಡಳಿಯಿಂದ ಸುದರ್ಶನ ಚಕ್ರಧಾರಿ ಗಣೇಶ ಮೂರ್ತಿ ಪ್ರತಿಷ್ಠಾಪನೆ ಮಾಡಲಾಗುತ್ತಿದ್ದು, ಸೋಮವಾರ ಮಧ್ಯಾಹ್ನ 12.30 ರಿಂದ 1.30ರೊಳಗೆ ಸಲ್ಲುವ ಅಭಿಜಿತ್ ಮುಹೂರ್ತದಲ್ಲಿ ಪ್ರತಿಷ್ಠಾಪನಾ ಮಹೋತ್ಸವ ನಡೆಯಲಿದೆ. ಶ್ರೀವಿದ್ಯಾ ಗಣಪತಿ ಮಂಡಳಿಯ 61ನೇ ವರ್ಷದ ಗಣಪತಿ ಪ್ರತಿಷ್ಠಾನೆಯನ್ನು ಅದ್ದೂರಿಯಾಗಿ ನಡೆಸಲು ಸಿದ್ಧತೆ ಪೂರ್ಣಗೊಂಡಿದೆ.

ಬರಪೀಡಿತ ಜಿಲ್ಲೆಯಾಗಿ ಘೋಷಿಸಲು ಒತ್ತಾಯ



ಚಾಮರಾಜನಗರ, ಸೆ.17– ಪ್ರಸಕ್ತ ವರ್ಷ ಜಿಲ್ಲೆಯಲ್ಲಿ ಮಳೆ ಕೊರತೆಯಿಂದಾಗಿ ಬೆಳೆಗಳು ಒಣಗುತ್ತಿದ್ದು, ರೈತರು ನಷ್ಟ ಅನುಭವಿಸುತ್ತಿದ್ದಾರೆ. ಹೀಗಾಗಿ, ರಾಜ್ಯ ಸರ್ಕಾರ ಚಾಮರಾಜನಗರ ಜಿಲ್ಲೆಯನ್ನು ಬರಪೀಡಿತ ಪ್ರದೇಶವೆಂದು ಘೋಷಣೆ ಮಾಡಬೇಕು ಎಂದು ರೈತ ಸಂಘದ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಹೊನ್ನೂರು ಬಸವಣ್ಣ ಆಗ್ರಹಿಸಿದರು. ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಕಚೇರಿಯಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚೆಗೆ ರಾಜ್ಯ ಸರ್ಕಾರ ರಾಜ್ಯದ ಬರ ಪೀಡಿತ ತಾಲೂಕುಗಳ ಪಟ್ಟಿ ಬಿಡುಗಡೆ ಮಾಡಿದ್ದು, ಇದರಲ್ಲಿ ಸಾಧಾರಣ ಬರ ಪೀಡಿತ ಪ್ರದೇಶದಲ್ಲಿ ಜಿಲ್ಲೆಯ ಹನೂರು, ಕೊಳ್ಳೇಗಾಲ, ಗುಂಡ್ಲುಪೇಟೆ ತಾಲೂಕುಗಳನ್ನು ಘೋಷಿಸಿದೆ. ಚಾಮರಾಜನಗರ ಮತ್ತು ಯಳಂದೂರು ತಾಲೂಕುಗಳನ್ನು ಕೈ ಬಿಟ್ಟಿದೆ ಎಂದರು.

ಜಿಲ್ಲೆಯಲ್ಲಿ ತೀವ್ರ ಬರ ಪರಿಸ್ಥಿತಿ ಇದೆ. ಹೀಗಾಗಿ ಇಡೀ ಜಿಲ್ಲೆಯನ್ನು ಬರಪೀಡಿತ ಪ್ರದೇಶವಾಗಿ ಘೋಷಿಸಬೇಕೆಂದು ಆಗ್ರಹಿಸಿ ಸೆ.22 ರಂದು ನಗರದಲ್ಲಿ ಸಾಂಕೇತಿಕವಾಗಿ ಪ್ರತಿಭಟನೆ ನಡೆಸಲಾಗುತ್ತದೆ. ಘೋಷಣೆ ಮಾಡದಿದ್ದರೆ ಸೆ.27 ರಂದು ಮುಖ್ಯಮಂತ್ರಿ ಅವರು ನಗರಕ್ಕೆ ಆಗಮಿಸುವಾಗ ಕಪ್ಪು ಬಾವುಟ ಪ್ರದರ್ಶನ ಮಾಡಲಾಗುವುದು ಎಂದು ತಿಳಿಸಿದರು. ಸಂಘದ ಸಂಘಟನಾ ಕಾರ್ಯದರ್ಶಿ ಹೆಗ್ಗೋಠಾರ ವಿಜಯಕುಮಾರ್ ಮಾತನಾಡಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ತಾಲೂಕು ಅಧ್ಯಕ್ಷ ಮಹದೇವಸ್ವಾಮಿ, ಕಾರ್ಯದರ್ಶಿ ಕುಮಾರ್ ಹಾಜರಿದ್ದರು.

ಲಿವರ್ ಕಾಯಿಲೆ ಶಂಕಿತರು ಫೈಬ್ರೋಸ್ಕ್ಯಾನ್ ಪರೀಕ್ಷೆಯ ಪ್ರಯೋಜನ ಪಡೆಯಬೇಕು

ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜಿ ಮಹಾರಾಜ್



ಮೈಸೂರು,ಸೆ.17(ಪಿಎಂ)– ಲಿವರ್ ಕಾಯಿಲೆ ಶಂಕಿತರು ಫೈಬ್ರೋಸ್ಕ್ಯಾನ್ ಎಂಬ ಆಧುನಿಕ ತಂತ್ರಜ್ಞಾನದ ಪರೀಕ್ಷೆಯ ಪ್ರಯೋಜನ ಪಡೆದುಕೊಳ್ಳುವುದು ಅಗತ್ಯ ಎಂದು ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜಿ ಮಹಾರಾಜ್ ಹೇಳಿದರು.

ಮೈಸೂರಿನ ರಾಮಕೃಷ್ಣನಗರದ ಸುಯೋಗ್ ಆಸ್ಪತ್ರೆ ಸಭಾಂಗಣದಲ್ಲಿ ಭಾನುವಾರ ಆಸ್ಪತ್ರೆ ವತಿಯಿಂದ ಹಮ್ಮಿಕೊಂಡಿದ್ದ ಲಿವರ್ ಕಾಯಿಲೆ ಪತ್ತೆ ಹಚ್ಚುವ ಆಧುನಿಕ ತಂತ್ರಜ್ಞಾನದ 'ಫೈಬ್ರೋಸ್ಕ್ಯಾನ್' ತಪಾಸಣಾ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಸಕ್ಕರೆ ಕಾಯಿಲೆ, ಸ್ಥೂಲಕಾಯ ಅಧಿಕವಾಗುತ್ತಿದ್ದು, ಇದರ ಪರಿಣಾಮ ಲಿವರ್ ಕಾಯಿಲೆಯೂ ಹೆಚ್ಚಾಗುತ್ತಿದೆ. ಹಾಗಾಗಿ ಲಿವರ್ ಕಾಯಿಲೆ ಪತ್ತೆಹಚ್ಚಿ ಸೂಕ್ತ ಚಿಕಿತ್ಸೆ ಪಡೆಯುವುದು ಅಗತ್ಯ. ಈ ನಿಟ್ಟಿನಲ್ಲಿ ಫೈಬ್ರೋಸ್ಕ್ಯಾನ್ ಎಂಬ ಆಧುನಿಕ ತಂತ್ರಜ್ಞಾನದ ಪರೀಕ್ಷೆ ಪ್ರಯೋಜನಕಾರಿಯಾಗಲಿದೆ ಎಂದರು.

ಆರಂಭಿಕ ಹಂತದಲ್ಲಿಯೇ ಲಿವರ್ ಕಾಯಿಲೆ ಗುರುತಿಸುವುದು ಬಹುಮುಖ್ಯ. ಫೈಬ್ರೋಸ್ಕ್ಯಾನ್ ತಂತ್ರಜ್ಞಾನದ ಪರೀಕ್ಷೆಯು ದುಬಾರಿ ಬೆಲೆಯ ಅತ್ಯಾಧುನಿಕ ತಂತ್ರಜ್ಞಾನವಾಗಿದ್ದು, ಸುಯೋಗ ಆಸ್ಪತ್ರೆಯಲ್ಲಿ ಮೈಸೂರು ನಗರದ ಜನತೆಗೆ ಈ ಸೌಲಭ್ಯ ಸುಲಭವಾಗಿ ದೊರೆಯುತ್ತಿರುವುದು ಸಂತಸದ ವಿಷಯ ಎಂದು ತಿಳಿಸಿದರು.

ಸುಯೋಗ ಆಸ್ಪತ್ರೆ ಗ್ಯಾಸ್ಟ್ರಿಕ್ ಸರ್ಜನ್ ಡಾ.ಶರತ್ ಕುಮಾರ್ ಮಾತನಾಡಿ, ಫೈಬ್ರೋಸ್ಕ್ಯಾನ್ ಪರೀಕ್ಷೆ ಮತ್ತು ಅದರ ಯಂತ್ರದ ಬಗ್ಗೆ ಸವಿವರವಾದ ಮಾಹಿತಿ ನೀಡಿದರಲ್ಲದೆ, ಮೈಸೂರು ನಗರದಲ್ಲಿ ಪ್ರಪ್ರಥಮ ಬಾರಿಗೆ ಈ ಸಲಕರಣೆ ಪ್ರಯೋಜನವನ್ನು ಆಸ್ಪತ್ರೆಯಿಂದ ನೀಡಲಾಗುತ್ತಿದೆ. ಮನುಷ್ಯನ ದೇಹದಲ್ಲಿ ಲಿವರ್ ಬಹುಮುಖ್ಯ ಅಂಗಾಂಗ. ಇದು ಸುಮಾರು ಐನೂರು ಕಾರ್ಯಗಳನ್ನು ಪ್ರತಿನಿತ್ಯ ಮಾಡುತ್ತದೆ ಎಂದರು.

ಸುಯೋಗ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ ಅಧ್ಯಕ್ಷತೆ ವಹಿಸಿದ್ದರು. ಆಸ್ಪತ್ರೆ ವ್ಯವಸ್ಥಾಪಕ ನಿರ್ದೇಶಕ ಡಾ.ಸುಯೋಗ ಯೋಗಣ್ಣ, ನಿರ್ದೇಶಕಿ ಡಾ.ಸೀಮಾ ಯೋಗಣ್ಣ, ಸುಯೋಗ್ ಡಯಾಬಿಟಿಕ್ ಹೆಲ್ತ್ ಕ್ಲಬ್‌ನ ಕಾರ್ಯಾಧ್ಯಕ್ಷ ರಮೇಶ್ ಚಂದ್ರ ಮತ್ತಿತರರು ಹಾಜರಿದ್ದರು.

ವಾಹನ ದಟ್ಟಣೆ ಇರುವ ರಸ್ತೆಯ ಫುಟ್‌ಪಾತ್‌ನಲ್ಲಿ ವಸ್ತುಗಳ ಮಾರಾಟ

● ಓಡಾಡಲು ಸಾಧ್ಯವಾಗದೆ ರಸ್ತೆಗಿಳಿಯುತ್ತಿರುವ ಪಾದಚಾರಿಗಳು ● ವಸ್ತು ಖರೀದಿಸಲು ರಸ್ತೆಯಲ್ಲೇ ಗ್ರಾಹಕರು ವಾಹನ ನಿಲ್ಲಿಸುತ್ತಿರುವುದು ಅಪಘಾತಕ್ಕೆ ಆಹ್ವಾನ ● ಸಾರ್ವಜನಿಕರಿಂದ ಆಕ್ರೋಶ



ಮೈಸೂರು, ಸೆ.17(ಎಂಟಿವೈ)– ಸಾಂಸ್ಕೃತಿಕ ನಗರಿ ಮೈಸೂರಿನ ಪ್ರಮುಖ ರಸ್ತೆಗಳಲ್ಲಿ ಫುಟ್‌ಪಾತ್‌ಗಳನ್ನು ಆಕ್ರಮಿಸಿಕೊಂಡು ವಿವಿಧ ವಸ್ತುಗಳನ್ನು ಮಾರಾಟ ಮಾಡುವವರ ಸಂಖ್ಯೆ ಹೆಚ್ಚಾಗಿದ್ದು, ಇದರಿಂದ ಪಾದಚಾರಿಗಳಿಗೆ ಓಡಾಡಲು ಹಾಗೂ ವಾಹನಗಳ ಸುಗಮ ಸಂಚಾರಕ್ಕೆ ಅಡ್ಡಿಯಾಗುತ್ತಿದೆ ಎಂದು ಸಾರ್ವಜನಿಕರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಸದಾ ವಾಹನ ದಟ್ಟಣೆ ಹೆಚ್ಚಾಗಿರುವ ಲಲಿತ ಮಹಲ್ ರಸ್ತೆ, ಕುಕ್ಕರಹಳ್ಳಿ ಕೆರೆ ರಸ್ತೆ, ನೆಲ್ಸನ್ ಮಂಡೇಲಾ ರಸ್ತೆ ಸೇರಿದಂತೆ ಹಲವು ರಸ್ತೆಗಳ ಫುಟ್‌ಪಾತ್‌ಗಳನ್ನು ಹೊರ ಊರು ಹಾಗೂ ಹೊರ ರಾಜ್ಯದಿಂದ ಬಂದಿರುವ ವ್ಯಾಪಾರಿಗಳು ಆಕ್ರಮಿಸಿಕೊಂಡು ವ್ಯಾಪಾರ ಮಾಡಲು ತೊಡಗಿದ್ದಾರೆ. ಇದರಿಂದಾಗಿ ಪಾದಚಾರಿಗಳು ಫುಟ್‌ಪಾತ್ ಮೇಲೆ ಓಡಾಡಲು ಸಾಧ್ಯವಾಗದೇ ರಸ್ತೆಯಲ್ಲಿ ಓಡಾಡಬೇಕಾದಂತಹ ಅನಿವಾರ್ಯತೆ ಒದಗಿದೆ. ಇದರಿಂದಾಗಿ ಪಾದಚಾರಿಗಳು ವಾಹನಗಳಿಗೆ ಸಿಲುಕಿ ಗಾಯಗೊಳ್ಳುವ ಅಥವಾ ಪ್ರಾಣ ಕಳೆದುಕೊಳ್ಳುವ ಅಪಾಯವಿದೆ ಎಂಬುದು ಸಾರ್ವಜನಿಕರ ಆರೋಪ.

ವಾಹನ ದಟ್ಟಣೆ ಹೆಚ್ಚಾಗಿರುವ ರಸ್ತೆಗಳ ಫುಟ್‌ಪಾತ್ ಮೇಲೆ ವಸ್ತುಗಳನ್ನು ಮಾರಾಟ ಮಾಡುವುದರಿಂದ ಅವುಗಳನ್ನು ಖರೀದಿಸಲು ಬರುವ ಗ್ರಾಹಕರು ರಸ್ತೆ ಬದಿಯಲ್ಲೇ ತಮ್ಮ ವಾಹನಗಳನ್ನು ನಿಲ್ಲಿಸಿ ಖರೀದಿಯಲ್ಲಿ ತೊಡಗುವುದರಿಂದ ಇತರ ವಾಹನಗಳ ಸಂಚಾರಕ್ಕೆ ಅಡ್ಡಿಯುಂಟಾಗುತ್ತಿದೆ.

ಭಾನುವಾರ ಬೆಳಗ್ಗೆ ಲಲಿತ ಮಹಲ್ ರಸ್ತೆಯ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ (ಕುರುಬಾರಹಳ್ಳಿ ವೃತ್ತ) ವ್ಯಾಪಾರಿಯೋರ್ವ ಫುಟ್‌ಪಾತ್‌ನಲ್ಲಿ ವಿದ್ಯುತ್ ಕಂಬಕ್ಕೆ ಹಗ್ಗ ಕಟ್ಟಿ ಲೆದರ್ ಬ್ಯಾಗ್‌ಗಳನ್ನು ನೇತು ಹಾಕಿ ಗ್ರಾಹಕರನ್ನು ಸೆಳೆಯುತ್ತಿದ್ದ. ಫುಟ್‌ಪಾತ್‌ಗೆ ಅಡ್ಡಲಾಗಿ ಹಗ್ಗ ಕಟ್ಟಿ ಬ್ಯಾಗ್ ನೇತು ಹಾಕಿದ್ದರಿಂದ ಅಲ್ಲಿ ಪಾದಚಾರಿಗಳು ಓಡಾಡಲು ಸಾಧ್ಯವಾಗದೇ ಅವರು ರಸ್ತೆಯಲ್ಲಿ ಓಡಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿತ್ತು. ಮೈಸೂರಿನ ಪ್ರವಾಸಿ ತಾಣಗಳಾದ ಚಾಮುಂಡಿಬೆಟ್ಟ ಹಾಗೂ ಮೃಗಾಲಯಕ್ಕೆ ಬರುವ ಪ್ರವಾಸಿಗರ ವಾಹನಗಳು ಹಾಗೂ ಕೊಳ್ಳೇಗಾಲ, ಚಾಮರಾಜನಗರ, ತಿ.ನರಸೀಪುರ ಮುಂತಾದ ಕಡೆಯಿಂದ ಬರುವ ವಾಹನಗಳು ಹೆಚ್ಚಾಗಿ ಸಂಚರಿಸುವ ವಾಹನ ದಟ್ಟಣೆಯುಳ್ಳ ಈ ರಸ್ತೆಯ ಫುಟ್‌ಪಾತ್‌ನಲ್ಲಿ ಲೆದರ್ ಬ್ಯಾಗ್‌ಗಳನ್ನು ಮಾರಾಟ ಮಾಡುತ್ತಿರುವುದನ್ನು ಕಂಡು ಖರೀದಿದಾರರು ಏಕಾಏಕಿ ವಾಹನ ನಿಲ್ಲಿಸುವುದರಿಂದ ಅಪಘಾತಗಳು ಸಂಭವಿಸುವ ಅಪಾಯವಿದೆ ಎಂಬುದು ಸಾರ್ವಜನಿಕರ ಆತಂಕವಾಗಿದೆ. ವಿಚಿತ್ರವೆಂದರೆ ಸಿದ್ದಾರ್ಥನಗರ ಸಂಚಾರ ಠಾಣೆಯ ಸಮೀಪದಲ್ಲೇ ಫುಟ್‌ಪಾತ್ ಆಕ್ರಮಿಸಿಕೊಂಡು ಲೆದರ್ ಬ್ಯಾಗ್ ಮಾರಾಟ ಮಾಡುತ್ತಿರುವುದರಿಂದ ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿದ್ದರೂ ಕೂಡ ಸಂಚಾರ ಪೊಲೀಸರು ಇತ್ತ ಗಮನ ಹರಿಸಿಲ್ಲ ಎಂಬುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

ಮೈಸೂರು ಮಹಾನಗರ ಪಾಲಿಕೆಯು ಬೀದಿ ಬದಿ ವ್ಯಾಪಾರಿಗಳಿಗಾಗಿ ಪ್ರತ್ಯೇಕವಾದ ಸ್ಥಳ ನಿಗದಿಪಡಿಸಬೇಕು ಎಂಬುದು ನಾಗರಿಕರ ಸಲಹೆಯಾಗಿದ್ದು, ವಾಹನ ದಟ್ಟಣೆ ಹೆಚ್ಚಿರುವ ರಸ್ತೆ ಬದಿ ಮಾರಾಟಕ್ಕೆ ಅವಕಾಶ ನೀಡಬಾರದು ಎಂಬುದು ಅವರ ಆಗ್ರಹವಾಗಿದೆ



ದಸರಾ ಗಜಪಡೆಯ ಸದಸ್ಯ ಮಹೇಂದ್ರನಿಗೆ ಭಾನುವಾರ 575 ಕೆಜಿ ತೂಕದ ಭಾರ ಹೊರಿಸಿ ತಾಲೀಮು ನಡೆಸಲಾಯಿತು. ಅರಮನೆ ಆವರಣದಿಂದ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದವರೆಗೆ 1 ಗಂಟೆ 8 ನಿಮಿಷದಲ್ಲಿ ಮಹೇಂದ್ರ (ಮಧ್ಯ ಭಾಗದಲ್ಲಿರುವ ಆನೆ) ನಿಗದಿತ ಗುರಿಯನ್ನು ಯಶಸ್ವಿಯಾಗಿ ತಲುಪಿತು. ಅಂಬಾರಿ ಆನೆ ಅಭಿಮನ್ಯುವಿನೊಂದಿಗೆ ಮಹೇಂದ್ರ ಗೋಪಿ ಮತ್ತು ಭೀಮ ಆನೆಗಳಿಗೂ ಭಾರ ಹೊರಿಸುವ ತಾಲೀಮು ನಡೆಸಲು ನಿರ್ಧಾರಿಸಲಾಗಿರುವ ಹಿನ್ನೆಲೆಯಲ್ಲಿ ಇಂದು ಮಹೇಂದ್ರನಿಗೆ ಭಾರ ಹೊರುವ ತಾಲೀಮು ನಡೆಸಲಾಯಿತು. ಈ ಸಂದರ್ಭದಲ್ಲಿ ಡಿಸಿಎಫ್ ಸೌರಭ್ ಕುಮಾರ್, ಆರ್‌ಎಫ್‌ಓ ಸಂತೋಷ್ ಹೂಗಾರ್, ಪಶುವೈದ್ಯ ಡಾ.ಮುಜಿಬ್ ರೆಹಮಾನ್ ಹಾಜರಿದ್ದರು.

ಚೈತ್ರಾ ಕುಂದಾಪುರ ಖರೀದಿಸಿದ್ದ ಕಾರು, ಮನೆ, ಸೈಟು, 2 ಕೋಟಿ ರೂ. ಎಫ್‌ಡಿ ಜಪ್ತಿ

ಬೆಂಗಳೂರು, ಸೆ.17– ಉದ್ಯಮಿಯೊಬ್ಬರಿಗೆ ಬಿಜೆಪಿ ಟಿಕೆಟ್ ಕೊಡಿಸುವುದಾಗಿ ಭರವಸೆ ನೀಡಿ ಅವರಿಂದ ಕೋಟಿ ಕೋಟಿ ಹಣ ಪಡೆದು ವಂಚಿಸಿದ ಆರೋಪದ ಮೇಲೆ ಬಂಧನಕ್ಕೊಳಗಾಗಿರುವ ಚೈತ್ರಾ ಕುಂದಾಪುರ ಅವರು ಇತ್ತೀಚೆಗೆ ಖರೀದಿಸಿದ್ದ ಕಿಯಾ ಕೇರೆನ್ಸ್ ಕಾರು, ಮನೆ, ಸೈಟು ಹಾಗೂ ಎರಡು ಕೋಟಿ ರೂಪಾಯಿ ಎಫ್‌ಡಿ ಹಣವನ್ನು ಸಿಸಿಬಿ ಪೊಲೀಸರು ಜಪ್ತಿ ಮಾಡಿದ್ದಾರೆ.

ವಂಚನೆ ಹಣದಲ್ಲಿ ಖರೀದಿ ಮಾಡಿದ್ದ ಕಿಯಾ ಕಾರನ್ನು ಸಿಸಿಬಿ ಪೊಲೀಸರು ಬಾಗಲಕೋಟೆ ಜಿಲ್ಲೆಯ ಮುಧೋಳದಲ್ಲಿ ವಶಕ್ಕೆ ಪಡೆದುಕೊಂಡಿದ್ದಾರೆ. ಇನ್ನು ಚೈತ್ರಾ ಬ್ಯಾಂಕ್‌ನಲ್ಲಿಟ್ಟಿದ್ದ ಹಣ, ಖರೀದಿ ಮಾಡಿದ್ದ ಚಿನ್ನಾಭರಣವನ್ನೂ ಸಹ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಸೊಲ್ಲಾಪುರದ ಒಂದು ಬಾರ್ ಅಂಡ್ ರೆಸ್ಟೋರೆಂಟ್ ಮುಂದೆ ನಿಲ್ಲಿಸಿದ್ದ ಚೈತ್ರಾ ಅವರ ಕಾರನ್ನು ಅವರ ಸ್ನೇಹಿತ ಎಂದು ಹೇಳಲಾಗುವ ಕಿರಣ್ ಎನ್ನುವವರು ಸೆಪ್ಟೆಂಬರ್ 9ರಂದು ಮುಧೋಳಕ್ಕೆ ತಂದಿದ್ದರು. ಕಿರಣ್ ಸೊಲ್ಲಾಪುರಕ್ಕೆ ಹೋಗಿ ಕಿಯಾ ಕಾರು ತಂದು ತನ್ನ ಡ್ರೈವಿಂಗ್ ಸ್ಕೂಲ್‌ನಲ್ಲಿಟ್ಟುಕೊಂಡಿದ್ದು. ಚೈತ್ರಾ ಕುಂದಾಪುರ, ಪಿ.ಎ.ಶ್ರೀಕಾಂತ್ ಮತ್ತು ಕಿರಣ್ ಕರೆಯನ್ನು ಸಿಸಿಬಿ ಪೊಲೀಸರು ಟ್ರೇಸೌಟ್ ಮಾಡಿದ್ದಾರೆ. ಈ ಆಧಾರದ ಮೇಲೆ ಕಿರಣ್‌ನನ್ನು ವಶಕ್ಕೆ ಪಡೆದು ಕಾರು ಜಪ್ತಿ ಮಾಡಿ ವಿಚಾರಣೆಗೆ ಒಳಪಡಿಸಿದ್ದಾರೆ.

ಚೈತ್ರಾ ಕುಂದಾಪುರ ಅವರಿಗೆ ಸೇರಿದ್ದ 3 ಕೋಟಿ ರೂ. ಮೌಲ್ಯದ ಸ್ವತ್ತನ್ನು ಸಹ ಪೊಲೀಸರು ಜಪ್ತಿ ಮಾಡಿದ್ದಾರೆ. ಚೈತ್ರಾ ಮತ್ತು ಶ್ರೀಕಾಂತ್ ಹೆಸರಲ್ಲಿ ಫಿಕ್ಸೆಡ್ ಡೆಪಾಸಿಟ್ ಇಟ್ಟಿದ್ದ 1.8 ಕೋಟಿ ರೂ. ಹಣವನ್ನು ಜಪ್ತಿ ಮಾಡಿಕೊಳ್ಳಲಾಗಿದೆ. ಸ್ಥಳೀಯ ಸೊಸೈಟಿಯಲ್ಲಿದ್ದ 40ಲಕ್ಷ ರೂ. ಹಣವನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಜೊತೆಗೆ, ವಂಚನೆಯ ಹಣದಲ್ಲಿ ಖರೀದಿ ಮಾಡಿದ್ದ 65 ಲಕ್ಷ ರೂ. ಮೊತ್ತದ ಚಿನ್ನಾಭರಣ ವಶಕ್ಕೆ ಪಡೆಯಲಾಗಿದೆ.

ತಿ.ನರಸೀಪುರ ಕಸಬಾ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ನಾಗಮ್ಮ ಉಪಾಧ್ಯಕ್ಷೆ



ತಿ.ನರಸೀಪುರ, ಸೆ.17 –ಕಸಬಾ ಕೃಷಿ ಪತ್ತಿನ ಸಹಕಾರ ಸಂಘದ ಉಪಾಧ್ಯಕ್ಷರಾಗಿ ಮಾಜಿ ಅಧ್ಯಕ್ಷ ದಿವಂಗತ ಮಾಧು ಅವರ ಪತ್ನಿ ನಾಗಮ್ಮ ಭಾನುವಾರ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾದರು.

ಈ ಹಿಂದೆ ಉಪಾಧ್ಯಕ್ಷರಾಗಿದ್ದ ನಂಜುಂಡಸ್ವಾಮಿಯವರ ಅಧಿಕಾರಾವಧಿ ಮುಗಿದ ಹಿನ್ನೆಲೆಯಲ್ಲಿ ತೆರವಾದ ಸ್ಥಾನ ನಡೆದ ಚುನಾವಣೆಯಲ್ಲಿ ನಾಗಮ್ಮ ಒಬ್ಬರೇ ಉಮೇದುವಾರಿಕೆ ಸಲ್ಲಿಸಿದ್ದರಿಂದ ಚುನಾವಣಾಧಿಕಾರಿ ರಾಜಣ್ಣ ಅವರ ಅವಿರೋಧ ಆಯ್ಕೆಯನ್ನು ಪ್ರಕಟಿಸಿದರು.

ಈ ವೇಳೆ ನಿರ್ದೇಶಕರಾದ ಸಂಘದ ಅಧ್ಯಕ್ಷ ಡಣಾಯಕನಪುರ ಮಲ್ಲಣ್ಣ, ಎಂ.ನಾಗರತ್ನ, ಎನ್.ಶೇಖರ್, ಟಿ.ಸಿ.ಫಣೀಶ್ ಕುಮಾರ್, ಮಹಾಲಿಂಗಪ್ಪ, ಬಿ.ಚಂದ್ರಮ್ಮ, ದೊಡ್ಡ ಬಸವಯ್ಯ, ಸಾವಿತ್ರಮ್ಮ, ಮನ್ನೇಹುಂಡಿ ಪರಶಿವ, ಟಿ.ಜಿ.ಗುರು ಪ್ರಸಾದ್, ಹಾಜರಿದ್ದು ಉಪಾಧ್ಯಕ್ಷರ ಆಯ್ಕೆಗೆ ಅನುಮೋದನೆ ನೀಡಿದರು. ತಮ್ಮ ಅವಿರೋಧ ಆಯ್ಕೆಗೆ ಸಹಕರಿ ಸಿದ ನಿರ್ದೇಶಕರಿಗೆ ಕೃತಜ್ಞತೆ ಸಲ್ಲಿಸಿ ಮಾತನಾಡಿದ ನೂತನ ಅಧ್ಯಕ್ಷೆ ನಾಗಮ್ಮ ಸಂಘದ ಅಭಿವೃದ್ಧಿಗೆ ಅಧ್ಯಕ್ಷರಿಗೆ ಸಂಪೂರ್ಣ ಸಹಕಾರ ನೀಡುವುದಾಗಿ ತಿಳಿಸಿದರು.

ಸಂಘದ ಮೇಲ್ವಿಚಾರಕ ರಮೇಶ್, ಮುಖಂಡರಾದ ಸ್ವಾಮಿನಾಥ್ ಗೌಡ, ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ, ಮಹದೇವ, ಸುರೇಶ್, ವಾಸು, ಮಂಟೇಲಿಂಗಪ್ಪ, ಯಜಮಾನ್ ಚಂದ್ರೇಗೌಡ, ಪುಟ್ಟು, ಏಜೆಂಟ್ ರಾಜಣ್ಣ, ಅಂಗಡಿ ನಾಗೇಶ್, ಕಾವೇರಿಪುರ ಸತೀಶ್, ಟಿಎಪಿಸಿಎಂಎಸ್ ನಿರ್ದೇಶಕ ಮೋಹನ್, ರಘುನಂದನ್, ಮೆಲ್ಲಹಳ್ಳಿ ಕಾಮಾಕ್ಷಿ ರಾಮಕೃಷ್ಣ, ತಿರುಮಕೂಡಲು ಲಕ್ಷ್ಮಣ, ಗುಂಡ, ಸೋಮಣ್ಣ, ರಮೇಶ್, ನಾಗರಾಜ್, ಆನಂದ್, ಮಹದೇವಪ್ಪ, ಕರಿಯಪ್ಪ, ಎಲ್.ಕುಮಾರ್, ಅಕ್ರಂ ಪಾಷ, ರಾಮು, ನೂತನ್, ಅಗಸ್ತ್ಯೇಗೌಡ, ಡ್ಯಾನಿರಾಜ್, ಎಂ.ಸುರೇಶ್ ಫೈನಾನ್ಸ್ ಸುರೇಶ್, ದಿವ್ಯಶ್ರೀ, ವರದರಾಜ್, ಡಿ.ಕೃಷ್ಣ, ಛತ್ರ ಸೀನಾ, ಯೋಗೇಶ್, ಪುನೀತ್, ಹರೀಶ್ ಹಾಗು ತಿರುಮಕೂಡಲು ಗ್ರಾಮಸ್ಥರು ಹಾಜರಿದ್ದರು.



ಇತ್ತೀಚೆಗೆ ಚಾಮರಾಜನಗರದಲ್ಲಿ ನಡೆದ ರಾಜ್ಯಮಟ್ಟದ ನೃತ್ಯ ಸ್ಪರ್ಧೆ ಮತ್ತು ಮೈಸೂರಿನಲ್ಲಿ ನಡೆದ ಫ್ಯಾಶನ್ ಶೋ ಸ್ಪರ್ಧೆಯಲ್ಲಿ ಬಹುಮಾನಗಳಿಸಿದ ಪೂರ್ಣಪ್ರಜ್ಞಾ ವಿದ್ಯಾ ಕೇಂದ್ರ ಶಾಲೆಯ 6 ನೇ ತರಗತಿ ವಿದ್ಯಾರ್ಥಿ ನೂತನ್ ದೀಪಕ್ ಅವರನ್ನು ವಿಶ್ವಮಾನವ ಜೋಡಿ ರಸ್ತೆಯಲ್ಲಿರುವ ನಾಗರಿಕ ವೇದಿಕೆಯ ವತಿಯಿಂದ ಅಭಿನಂದಿಸಲಾಯಿತು. ಈ ವೇಳೆ ವೇದಿಕೆ ಅಧ್ಯಕ್ಷ ಶ್ರೀರಂಗಯ್ಯ, ಉಪಾಧ್ಯಕ್ಷ ಎಚ್.ಅರವಿಂದ್, ಕಾರ್ಯದರ್ಶಿ ಕುಳ್ಳೇಗೌಡ, ಖಜಾಂಚಿ ಎಸ್.ಪಿ.ತ್ಯಾಗರಾಜು, ಶಾಲಾ ಸಮಿತಿ ಅಧ್ಯಕ್ಷ ಜೆ.ಲೋಕೇಶ್, ಸದಸ್ಯರಾದ ಎಸ್ ಕೃಷ್ಣ ಶೈಲೇಂದ್ರ ರಮೇಶ್, ಬಿ.ಶಿವಣ್ಣ ರೇವಣ್ಣರಾಜ್, ಪಿ ರಮೇಶ್ ಹಾಗೂ ಲಕ್ಷ್ಮಿಗೌಡ ಮತ್ತಿತರರು ಉಪಸ್ಥಿತರಿದ್ದರು.

ತಮಿಳುನಾಡಿಗೆ ಕಾವೇರಿ ನೀರು; ಶೀಘ್ರ ಮೈಸೂರಲ್ಲಿ ಬೃಹತ್ ಚಳವಳಿ

ಕಾವೇರಿ ಕ್ರಿಯಾ ಸಮಿತಿ ಪ್ರಧಾನ ಸಂಚಾಲಕ ಮೂಗೂರು ನಂಜುಂಡಸ್ವಾಮಿ



ಮೈಸೂರು,ಸೆ.17(ಪಿಎಂ)- ಪ್ರತಿವರ್ಷ ಕಾವೇರಿ ನೀರು ಹಂಚಿಕೆ ವಿಚಾರದಲ್ಲಿ ರಾಜ್ಯಕ್ಕೆ ಅನ್ಯಾಯವಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ ಕನ್ನಡ ಚಳವಳಿ ಕೇಂದ್ರ ಸಮಿತಿ ಅಧ್ಯಕ್ಷ ಹಾಗೂ ಕಾವೇರಿ ಕ್ರಿಯಾ ಸಮಿತಿ ಪ್ರಧಾನ ಸಂಚಾಲಕ ಮೂಗೂರು ನಂಜುಂಡಸ್ವಾಮಿ, ಇದರ ವಿರುದ್ಧ ಮೈಸೂರು ನಗರದಲ್ಲಿ ಬೃಹತ್ ಚಳವಳಿ ನಡೆಸಲಾಗುವುದು ಎಂದು ತಿಳಿಸಿದರು.

ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಭಾನುವಾರ ಕಾವೇರಿ ಕ್ರಿಯಾ ಸಮಿತಿ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕಾವೇರಿ ನೀರು ಹಂಚಿಕೆ ವಿಚಾರದಲ್ಲಿ ರಾಜ್ಯಕ್ಕೆ ಘೋರ ಅನ್ಯಾಯವಾಗಿದೆ. 90ರ ದಶಕದಲ್ಲಿ 108 ದಿನಗಳ ಕಾಲ ಮೈಸೂರಿನ ಕೆಆರ್ ವೃತ್ತದಲ್ಲಿ ಧರಣಿ ಸತ್ಯಾಗ್ರಹ ಮಾಡಿದ್ದೆವು. ಎಲ್ಲಾ ವರ್ತಕರು, ಸಂಘ-ಸಂಸ್ಥೆಗಳು ಬೆಂಬಲ ನೀಡಿದ್ದವು. ಅದೇ ಮಾದರಿಯ ಹೋರಾಟ ಮತ್ತೆ ಮರುಕಳಿಸಬೇಕಿದೆ ಎಂದರು.

ಕಾವೇರಿ ನೀರು ನಿರಂತರವಾಗಿ ತಮಿಳುನಾಡಿಗೆ ಹರಿಯುತ್ತಿದೆ. ಇದು ತೀವ್ರ ಖಂಡನೀಯ. ಮುಂದಿನ ದಿನಗಳಲ್ಲಿ ಕಾವೇರಿ ಕ್ರಿಯಾ ಸಮಿತಿಯ ಹೋರಾಟ ತೀವ್ರಗೊಳಿಸಿ ರಾಜ್ಯಕ್ಕೆ ನ್ಯಾಯ ದೊರಕಿಸಿ ಕೊಡಬೇಕಿದೆ. ಈ ನಿಟ್ಟಿನಲ್ಲಿ ಇಂದು ಪ್ರಥಮ ಪೂರ್ವಭಾವಿ ಸಭೆ ನಡೆಸುತ್ತಿದ್ದೇವೆ. ಪೊಲೀಸರ ಅನುಮತಿ ಪಡೆದು ಮೈಸೂರಿನ ಕೆಆರ್ ವೃತ್ತದಲ್ಲಿ ನಿರಂತರವಾಗಿ ಚಳುವಳಿ ನಡೆಸಬೇಕಿದೆ ಎಂದು ತಿಳಿಸಿದರು.

ಮುಂದಿನ ಶನಿವಾರ ಇದೇ ಜಲದರ್ಶಿನಿ ಅತಿಥಿಗೃಹದಲ್ಲಿ ಸಂಜೆ 4.30ಕ್ಕೆ ಮತ್ತೊಂದು ಪೂರ್ವಭಾವಿ ಸಭೆ ನಡೆಸಲಾಗುವುದು. ಈ ಸಭೆಯನ್ನು ಅತ್ಯಂತ ವ್ಯವಸ್ಥಿತವಾಗಿ ನಡೆಸಿ ಹೋರಾಟದ ರೂಪುರೇಷೆ ಸಿದ್ಧಪಡಿಸಬೇಕಿದೆ ಎಂದರು.

ಮುಖಂಡ ಸಿದ್ದಲಿಂಗಪ್ಪ ಮಾತನಾಡಿ, ಬೃಹತ್ ಹೋರಾಟದ ಮೂಲಕ ರಾಜ್ಯಕ್ಕೆ ನ್ಯಾಯ ದೊರೆಯುವಂತೆ ಮಾಡಬೇಕಿದೆ ಎಲ್ಲಾ ಸಂಘ-ಸಂಸ್ಥೆಗಳನ್ನು ಸಂಪರ್ಕಿಸಿ ಹೋರಾಟಕ್ಕೆ ಬೆಂಬಲ ಕೋರಬೇಕೆಂದು ಸಲಹೆ ನೀಡಿದರು.

ಮುಖಂಡ ಪಿ.ಸಿ.ನಾಗರಾಜ್ ಮಾತನಾಡಿ, ಹೋರಾಟದ ಅಗತ್ಯತೆ ಬಗ್ಗೆ ಜನಜಾಗೃತಿ ಮೂಡಿಸಿ ಅವರ ಬೆಂಬಲ ಪಡೆಯಬೇಕು. ಈ ಹೋರಾಟ ಯಾವುದೇ ಪಕ್ಷಕ್ಕೆ ಸೀಮಿತವಲ್ಲ. ವ್ಯವಸ್ಥಿತ ಹೋರಾಟದ ಮೂಲಕ ಯಶಸ್ಸುಗಳಿಸಬೇಕು ಎಂದರು.

ಮುಖಂಡ ಎಂ.ಜೆ.ಸುರೇಶ್‌ಗೌಡ ಮಾತನಾಡಿ, ಮೈಸೂರು-ಮಂಡ್ಯ ಭಾಗದಲ್ಲಿ ಮಾತ್ರ ಹೆಚ್ಚು ಕಾವೇರಿ ಹೋರಾಟ ನಡೆಯುತ್ತಿದೆ. ಬೆಂಗಳೂರಿಗೆ ಕುಡಿಯುವ ನೀರಿಗಾಗಿ ಕಾವೇರಿ ಹೆಚ್ಚು ಅಗತ್ಯವಿದೆ. ಆದರೆ ಬೆಂಗಳೂರು ಭಾಗದಲ್ಲಿ ಹೋರಾಟ ಕಾವೇರಿ ಹೋರಾಟಗಳು ನಡೆಯುತ್ತಿಲ್ಲ ಜೊತೆಗೆ ರಾಮನಗರ ಹಾಗೂ ಕನಕಪುರದಲ್ಲೂ ವ್ಯಾಪಕ ಹೋರಾಟ ನಡೆಯುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ನಾವೆಲ್ಲ ವಿದ್ಯಾರ್ಥಿಗಳಾಗಿದ್ದ ಸಂದರ್ಭದಲ್ಲಿ ಕಾವೇರಿ ಚಳುವಳಿಯಲ್ಲಿ ಪಾಲ್ಗೊಳ್ಳುತ್ತಿದ್ದ. ಅಂತೆಯೇ ಈಗಲೂ ವಿದ್ಯಾರ್ಥಿಗಳ ಸಹಕಾರ ಪಡೆದು ದೊಡ್ಡಮಟ್ಟದ ಹೋರಾಟ ರೂಪಿಸಬೇಕಿದೆ. ಅಲ್ಲದೆ, ರಾಜ್ಯ ಮಟ್ಟದ ಸಮಿತಿ ರಚಿಸಿ, ನ್ಯಾಯಾಲಯದಲ್ಲೂ ಸಮಿತಿಯ ಮೂಲಕ ಪ್ರಬಲವಾಗಿ ಕಾನೂನು ಹೋರಾಟ ನಡೆಸಬೇಕಿದೆ ಎಂದರು. ವಿವಿಧ ಸಂಘಟನೆಗಳ ಮುಖಂಡರಾದ ಮೋಹನ್ ಕುಮಾರ್‌ಗೌಡ, ಎಂ.ಮಂಜುನಾಥ್, ಎಸ್.ಡಿ. ರಾಜೇಶ್, ಎನ್.ಬಸಪ್ಪ, ಜಯಪ್ರಕಾಶ್ ಮತ್ತಿತರರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಮಣಿಪುರದಲ್ಲಿ ಸೇನಾ ಯೋಧನನ್ನು ಅಪಹರಿಸಿ ಹತ್ಯೆ



ಇಂಫಾಲ್,ಸೆ.17-ಮಣಿಪುರದ ಇಂಫಾಲ್ ಪೂರ್ವ ಜಿಲ್ಲೆಯ ಖುನಿಂಗ್‌ಥೆಕ್ ಗ್ರಾಮದಲ್ಲಿ ಭಾರತೀಯ ಸೇನೆಯ ಯೋಧನ ಶವ ಭಾನುವಾರ ಪತ್ತೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹುತಾತ್ಮ ಯೋಧನನ್ನು ಕಾಂಗ್‌ಪೋಕ್ಪಿ ಜಿಲ್ಲೆಯ ಲೀಮಾಖೋಂಗ್‌ನಲ್ಲಿ ಸೇನೆಯ ಡಿಫೆನ್ಸ್ ಸೆಕ್ಯುರಿಟಿ ಕಾರ್ಪ್ಸ್(ಡಿಎಸ್‌ಸಿ) ಸಿಪಾಯಿ ಸೆರ್ಟೊ ತಂಗ್‌ಥಾಂಗ್ ಕೋಮ್ ಎಂದು ಗುರುತಿಸಲಾಗಿದ್ದು, ಅವರು ಇಂಫಾಲ್ ಪಶ್ಚಿಮದ ತರುಂಗ್‌ನವರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಧಿಕಾರಿಗಳ ಪ್ರಕಾರ, ಶನಿವಾರ ಬೆಳಿಗ್ಗೆ 10 ಗಂಟೆ ಸುಮಾರಿಗೆ ಅಪರಿಚಿತ ಶಸ್ತ್ರಸಜ್ಜಿತ ವ್ಯಕ್ತಿಗಳು, ರಜೆಯಲ್ಲಿದ್ದ ಸಿಪಾಯಿ ಕೋಮ್ ಅವರನ್ನು ಅವರ ಮನೆಯಿಂದ ಅಪಹರಿಸಿದ್ದಾರೆ. ಏಕೈಕ ಪ್ರತ್ಯಕ್ಷದರ್ಶಿಯಾಗಿರುವ ಯೋಧನ 10 ವರ್ಷದ ಮಗನ ಪ್ರಕಾರ, ನಾನು ಮತ್ತು ನನ್ನ ತಂದೆ ಮನೆಯಲ್ಲಿ ಕೆಲಸ ಮಾಡುತ್ತಿದ್ದಾಗ ಮೂವರು ಪುರುಷರು ಮನೆಗೆ ಪ್ರವೇಶಿಸಿದರು. ಶಸ್ತ್ರಸಜ್ಜಿತ ವ್ಯಕ್ತಿಗಳು ನನ್ನ ತಂದೆ ತಲೆಗೆ ಪಿಸ್ತೂಲ್ ಇರಿಸಿ, ಬಳಿಯ ವಾಹನದಲ್ಲಿ ಬಲವಂತವಾಗಿ ಕರೆದೊಯ್ದರು ಎಂದು ಅವರ ಮಗ ಹೇಳಿರುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

ಭಾನುವಾರ ಬೆಳಗ್ಗೆ ತನಕ ಸಿಪಾಯಿ ಕೋಮ್ ಬಗ್ಗೆ ಯಾವುದೇ ಮಾಹಿತಿ ಇರಲಿಲ್ಲ. ಬೆಳಗ್ಗೆ 9.30ರ ಸುಮಾರಿಗೆ, ಇಂಫಾಲ್ ಪೂರ್ವದ ಖುನಿಂಗ್‌ಥೆಕ್ ಗ್ರಾಮದಲ್ಲಿ ಅವರ ಶವ ಪತ್ತೆಯಾಗಿದೆ. ಅವರ ಗುರುತನ್ನು ಅವರ ಸಹೋದರ ಮತ್ತು ಸೋದರ ಮಾವ ಖಚಿತ ಪಡಿಸಿದ್ದಾರೆ. ಸೈನಿಕನ ತಲೆಗೆ ಒಂದು ಗುಂಡಿನ ಗಾಯವಾಗಿರುವುದು ಎಂದು ಅಧಿಕಾರಿಗಳು ಹೇಳಿದ್ದಾರೆ.



ಲಯನ್ಸ್ ಕ್ಲಬ್ ಆಫ್ ನಾರ್ಥ್ ಮೈಸೂರು ವತಿಯಿಂದ ಕುಂಬಾರಕೊಪ್ಪಲಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಉಚಿತ ವಾಕ್ ಮತ್ತು ಶ್ರವಣ ದೋಷವಿರುವವರಿಗೆ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಶಾಸಕ ಕೆ.ಹರೀಶ್‌ಗೌಡ ನೆರವೇರಿಸಿದರು. ಇದೇ ಸಂದರ್ಭದಲ್ಲಿ ಕಾರ್ಪೊರೇಟರ್ ಉಷಾ ಕುಮಾರ್, ಸಂಸ್ಥೆಯ ಅಧ್ಯಕ್ಷ ಡಾ. ಅಂಥೋಣಿ ಪಾಲ್ ರಾಜ್, ಕಾರ್ಯಾಧ್ಯಕ್ಷ ಲಯನ್ ರವಿ, ಹಿರಿಯ ಮಾಜಿ ರಾಜ್ಯಪಾಲ ಲಯನ್ ದೇವಿ ಪ್ರಸಾದ್, ಲಯನ್ ಬಸವೇಗೌಡ, ವೈದ್ಯಕೀಯ ಸಿಬ್ಬಂದಿ ಉಪಸ್ಥಿತರಿದ್ದರು.

ಮೂರನೇ ಪುಟದಿಂದ

ಪಿಎಂ ವಿಶ್ವಕರ್ಮ ಯೋಜನೆಗೆ ಚಾಲನೆ

ಕ್ಷೌರಿಕರು ಸೇರಿದಂತೆ ಸಾಂಪ್ರದಾಯಿಕ ಕುಶಲಕರ್ಮಿಗಳು ಮತ್ತು ಕರಕುಶಲತೆಯಲ್ಲಿ ತೊಡಗಿರುವ ಸುಮಾರು 30 ಲಕ್ಷ ಕುಟುಂಬಗಳಿಗೆ ಶೇ.5ರಷ್ಟು ರಿಯಾಯಿತಿ ಬಡ್ಡಿದರದಲ್ಲಿ ಸಾಲ ನೀಡಲಾಗುತ್ತದೆ. ಸಾಂಪ್ರದಾಯಿಕ ಕುಶಲಕರ್ಮಿಗಳು ಮತ್ತು ಕರಕುಶಲಕರ್ಮಿಗಳು ನೀಡುವ ಉತ್ಪನ್ನಗಳು ಹಾಗೂ ಸೇವೆಗಳ ಲಭ್ಯತೆ ಮತ್ತು ಗುಣಮಟ್ಟವನ್ನು ಹೆಚ್ಚಿಸುವುದು ಯೋಜನೆಯ ಗುರಿಯಾಗಿದೆ. ಈ ಯೋಜನೆ ಅನ್ವಯ ಕುಶಲಕರ್ಮಿಗಳಿಗೆ ಶೇ.5ರಷ್ಟು ಬಡ್ಡಿದರದಲ್ಲಿ 3 ಲಕ್ಷ ರೂ.ವರೆಗೆ ಸಾಲ

ನೋಂದಣಿ ಹೇಗೆ?: ಫಲಾನುಭವಿಯು ಸಾಮಾನ್ಯ ಸೇವಾ ಕೇಂದ್ರಗಳಿಗೆ ತೆರಳಿ ಬಯೊಮೆಟ್ರಿಕ್ ಆಧಾರಿತ 'ಪಿಎಂ ವಿಶ್ವಕರ್ಮ' ಪೋರ್ಟಲ್‌ನಲ್ಲಿ ಹೆಸರು ನೋಂದಣಿ ಮಾಡಿಕೊಳ್ಳಬಹುದು. ನೋಂದಣಿಯಾದವರಿಗೆ ಪಿಎಂ ವಿಶ್ವಕರ್ಮ ಪ್ರಮಾಣ ಪತ್ರ ಮತ್ತು ಗುರುತಿನ ಚೀಟಿ ಲಭಿಸಲಿದೆ. ನೋಂದಣಿ ದಿನದ ವೇಳೆಗೆ ಫಲಾನುಭವಿಯ ವಯಸ್ಸು 18 ವರ್ಷ ಪೂರ್ಣಗೊಂಡಿರಬೇಕು. ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಸ್ವಉದ್ಯೋಗ ಅಥವಾ ವ್ಯಾಪಾರ ಅಭಿವೃದ್ಧಿಗೆ ಸಾಲ ಸೌಲಭ್ಯ ಪಡೆದವರಿಗೆ ಈ ಯೋಜನೆಯಡಿ ಮತ್ತೆ ಸಾಲ ಸಿಗುವುದಿಲ್ಲ. ಕಳೆದ ಐದು ವರ್ಷಗಳಲ್ಲಿ ಪ್ರಧಾನ ಮಂತ್ರಿ ಉದ್ಯೋಗ ಖಾತರಿ ಯೋಜನೆ ಪಿಎಂ ಸ್ವನಿಧಿ (ಬೀದಿ ವ್ಯಾಪಾರಿಗಳ ಆತ್ಮನಿರ್ಭರ ನಿಧಿ) ಮುದ್ರಾ ಯೋಜನೆಯಡಿ ಸೌಲಭ್ಯ ಪಡೆದವರಿಗೆ ಮತ್ತೆ ಸಾಲ ನೀಡುವುದಿಲ್ಲ. ಈ ಕುರಿತು ಪೋರ್ಟಲ್‌ನಲ್ಲಿ ಮಾಹಿತಿ ನೀಡಲಾಗಿದೆ. ಒಂದು ಕುಟುಂಬದಲ್ಲಿ ಒಬ್ಬ ಸದಸ್ಯರಷ್ಟೇ ಯೋಜನೆಯ ಸೌಲಭ್ಯ ಪಡೆಯಲು ಅರ್ಹರು. ಸರ್ಕಾರಿ ನೌಕರ ಹಾಗೂ ಅವರ ಕುಟುಂಬದ ಸದಸ್ಯರಿಗೆ ಸೌಲಭ್ಯ ಸಿಗುವುದಿಲ್ಲ.

ಭಾರತ ಏಷ್ಯಾ ಕಪ್ ಚಾಂಪಿಯನ್

ಆ ಮೂಲಕ ಒಂದೇ ಓವರ್‌ನಲ್ಲಿ ನಾಲ್ಕು ವಿಕೆಟ್ ಪಡೆದ ಮೊದಲ ಭಾರತೀಯ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ನಂತರ ಬಂದ ನಾಯಕ ದಸೂನ್ ಶಾನಕ ಕೂಡ ಶೂನ್ಯಕ್ಕೆ ಸಿರಾಜ್‌ಗೆ ವಿಕೆಟ್ ಒಪ್ಪಿಸಿದರು. ಇನ್ನು 3 ಬೌಂಡರಿ ಒಳಗೊಂಡ (17) ರನ್ ಗಳಿಸಿದ್ದ ಕುಶಾಲ್ ಮೆಂಡೀಸ್ ಕೂಡ ಸಿರಾಜ್‌ಗೆ ಬಲಿಯಾದರು. ನಂತರ ಬಂದ ದುನಿತ್ ವೆಲ್ಲಾಳಗೆ 8 ರನ್ ಗಳಿಸಿ ಹಾರ್ದಿಕ್ ಪಾಂಡ್ಯಗೆ ವಿಕೆಟ್ ಒಪ್ಪಿಸಿದರೇ, ಮತೀಶ ಪತಿರಣ (0) ಮತ್ತು ಪ್ರಮೋದ್ ಮಧುಶನ್ 1 ರನ್ ಗಳಿಸಿ ಪಾಂಡ್ಯಗೆ ವಿಕೆಟ್ ಒಪ್ಪಿಸಿದರು. ಉಳಿದಂತೆ ದುಶಾನ್ ಹೇಮಂತ 13 ರನ್ ಗಳಿಸಿದರು. ಲಂಕಾ ಪರ ಕುಶಾಲ್ ಮೆಂಡೀಸ್ ಹಾಗೂ ದುಶಾನ್ ಹೇಮಂತ ಎರಡಂಕಿ ಮೊತ್ತ ದಾಖಲಿಸಿದ್ದು ಬಿಟ್ಟರೇ ಉಳಿದವರು ಪೆವಿಲಿಯನ್ ಪರೇಡ್ ನಡೆಸಿದರು. ಅಂತಿಮವಾಗಿ ಶ್ರೀಲಂಕಾ 15.2 ಓವರ್‌ಗಳಲ್ಲಿ 50 ರನ್‌ಗಳಿಗೆ ಆಲೌಟ್ ಆಯಿತು.

ಪಂದ್ಯದಲ್ಲಿ ಬಿಗಿ ದಾಳಿ ಸಂಘಟಿಸಿದ ಮೊಹಮ್ಮದ್ ಸಿರಾಜ್ 7 ಓವರ್‌ಗಳಲ್ಲಿ 21 ರನ್ ನೀಡಿ 6 ವಿಕೆಟ್ ಪಡೆದು ಯಶಸ್ವಿ ಬೌಲರ್ ಎನಿಸಿದರು. ಮತ್ತೊಂದೆಡೆ ಉತ್ತಮ ದಾಳಿ ಸಂಘಟಿಸಿದ ಹಾರ್ದಿಕ್ ಪಾಂಡ್ಯ ಕೂಡ 2.2 ಓವರ್‌ಗಳಲ್ಲಿ 3 ರನ್ ನೀಡಿ 3 ವಿಕೆಟ್ ಉರುಳಿಸಿದರು. ಬೂಮ್ರಾ 1 ವಿಕೆಟ್ ಪಡೆದರು.


ಶ್ರೀಲಂಕಾ ನೀಡಿದ 51ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಟೀಮ್ ಇಂಡಿಯಾ 6.1 ಓವರ್‌ಗಳಲ್ಲಿ ಇನ್ನೂ 263 ಎಸೆತಗಳು ಬಾಕಿ ಇರುವಂತೆಯೇ 10 ವಿಕೆಟ್‌ಗಳ ಭರ್ಜರಿ ಜಯ ದಾಖಲಿಸಿತು. ಇದು ಭಾರತಕ್ಕೆ ಸಿಕ್ಕ ಬೃಹತ್ ಗೆಲುವಾಗಿದೆ. ಗುರಿ ಬೆನ್ನತ್ತಿದ ಭಾರತದ ಪರ ಇನಿಂಗ್ಸ್ ಆರಂಭಿಸಿದ ಶುಭಮನ್ ಗಿಲ್ (27) ಮತ್ತು ಇಶಾನ್ ಕಿಶನ್ (23) ರನ್ ಗಳಿಸಿ ಅಜೇಯರಾಗಿ ಉಳಿದರು.

ಭಾರತದ ಪರ ಪಂದ್ಯದಲ್ಲಿ ಉತ್ತಮ ಬೌಲಿಂಗ್ ಪ್ರದರ್ಶನ ನೀಡಿದ ಮೊಹಮ್ಮದ್ ಸಿರಾಜ್ ಪಂದ್ಯಶ್ರೇಷ್ಠ ಹಾಗೂ ಸರಣಿಯಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ ಕುಲದೀಪ್ ಯಾದವ್ ಸರಣಿ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಅಪರಿಚಿತ ವಾಹನಕ್ಕೆ ಕಾರು ಡಿಕ್ಕಿ

ಬೆಂಕಿ ನಂದಿಸಿದ್ದಾರೆ. ಶ್ರೀರಂಗಪಟ್ಟಣ ಗ್ರಾಮಾಂತರ ಠಾಣೆ ಇನ್ಸ್‌ಪೆಕ್ಟರ್ ಬಿ.ಜಿ. ಕುಮಾರ್ ಪ್ರಕರಣ ದಾಖಲಿಸಿ ಕೊಂಡು ತನಿಖೆ ನಡೆಸುತ್ತಿದ್ದಾರೆ.

ಸರ್ವೀಸ್ ರಸ್ತೆ: ಬೊಲೆರೋ ವಾಹನವೊಂದು ಟಿಲ್ಲರ್‌ಗೆ ಡಿಕ್ಕಿ ಹೊಡೆದ ಪರಿಣಾಮ ಯುವಕನೊಬ್ಬ ಮೃತಪಟ್ಟ ಘಟನೆ ತಾಲೂಕಿನ ಚಿಕ್ಕಮಂಡ್ಯ ಬೈಪಾಸ್ ರಸ್ತೆಯ ಸರ್ವೀಸ್ ರಸ್ತೆಯಲ್ಲಿ ಭಾನುವಾರ ಸಂಜೆ ನಡೆದಿದೆ. ಚಿಕ್ಕ ಮಂಡ್ಯ ಗ್ರಾಮದ



ಅನುಸೂಯ ಹಾಗೂ ಸಿದ್ದರಾಜು(ಮಾದರಹಳ್ಳಿ) ದಂಪತಿ ಪುತ್ರ ಸುದರ್ಶನ್(19) ಅಪಘಾತದಲ್ಲಿ ಮೃತಪಟ್ಟವ ನಾಗಿದ್ದು, ಈತ ಗದ್ದೆಯಲ್ಲಿ ನಾಟಿ ಕೆಲಸ ಮುಗಿಸಿ ಟಿಲ್ಲರ್‌ನಲ್ಲಿ ಬರುವಾಗ ಹಿಂದಿನಿಂದ ಬಂದ ಬೊಲೆರೋ ವಾಹನ ಡಿಕ್ಕಿ ಹೊಡೆದು ಪರಾರಿಯಾಗಿದೆ. ಡಿಕ್ಕಿಯ ರಭಸಕ್ಕೆ ಟಿಲ್ಲರ್‌ನ ಹ್ಯಾಂಡಲ್ ದೇಹಕ್ಕೆ ಚುಚ್ಚಿಕೊಂಡ ಪರಿಣಾಮ ಸುದರ್ಶನ್ ತೀವ್ರ ಗಾಯಗೊಂಡಿದ್ದಾನೆ. ಕೂಡಲೇ ಸ್ಥಳೀಯರು ಮಂಡ್ಯದ ಮಿಮ್ಸ್‌ಗೆ ದಾಖಲಿಸಿದರಾದರೂ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾನೆ. ಈ ಸಂಬಂಧ ನಗರದ ಸೆಂಟ್ರಲ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಾಳೆ ಅಧಿವೇಶನ ಆರಂಭ

ಒತ್ತಾಯಿಸಿವೆ. ಈ ಬಾರಿಯ ಸಂಸತ್ ಅಧಿವೇಶನದಲ್ಲಿ ಮಹಿಳಾ ಮೀಸಲಾತಿ ಮಸೂದೆ ಅಂಗೀಕರಿಸಲು ಎಲ್ಲಾ ವಿರೋಧ ಪಕ್ಷಗಳು ಒತ್ತಾಯಿಸಿವೆ ಎಂದು ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ಹೇಳಿದ್ದಾರೆ. ಭಾರತೀಯ ಜನತಾ ಪಕ್ಷದ ಮಿತ್ರ ಪಕ್ಷ ಎನ್‌ಸಿಪಿ ನಾಯಕ ಪ್ರಫುಲ್ ಪಟೇಲ್ ಅವರು, ಈ ಬಾರಿಯ ಸಂಸತ್ ಅಧಿವೇಶನದಲ್ಲಿ ಮಹಿಳಾ ಮೀಸಲಾತಿ ಮಸೂದೆ ಅಂಗೀಕರಿಸುವಂತೆ ನಾವು ಸರ್ಕಾರಕ್ಕೆ ಮನವಿ ಮಾಡುತ್ತೇವೆ ಎಂದು ತಿಳಿಸಿದ್ದಾರೆ.

ಭಾರತದ ಇತಿಹಾಸದಲ್ಲಿ ನಾನಾ ಕ್ರಾಂತಿಕಾರಕ ಬದಲಾವಣೆಗಳಿಗೆ ಸಾಕ್ಷಿಯಾಗಿದ್ದ 96 ವರ್ಷ ಹಿಂದಿನ ಸಂಸತ್ ಕಟ್ಟಡದಲ್ಲಿ ಸೋಮವಾರ ಕಡೇ ಅಧಿವೇಶನ ನಡೆಯಲಿದೆ. ನಾಲ್ಕು ತಿಂಗಳ ಹಿಂದಷ್ಟೇ ಹೊಸ ಕಟ್ಟಡದ ಉದ್ಘಾಟನೆಯಾಗಿದ್ದು, ಮಂಗಳವಾರದಿಂದ ಹೊಸ ಸಂಸತ್ ಭವನದಲ್ಲಿ ವಿಶೇಷ ಅಧಿವೇಶನದ ಕಾರ್ಯಕಲಾಪಗಳು ಮುಂದುವರಿಯಲಿವೆ. ಸೋಮವಾರ ಹಳೇ ಕಟ್ಟಡದಲ್ಲಿ 5 ದಿನಗಳ ವಿಶೇಷ ಅಧಿವೇಶನ ಆರಂಭವಾಗಲಿದ್ದು, ಮೊದಲ ದಿನ 75 ವರ್ಷಗಳ ಸಂಸತ್ ಭವನದ ಇತಿಹಾಸದ ಬಗ್ಗೆ ಚರ್ಚೆಯಾಗಲಿದೆ. ಈ ಕಟ್ಟಡ 1927ರ ಜ.18ರಂದು ಲಾರ್ಡ್ ಇರ್ವಿನ್‌ರಿಂದ ಉದ್ಘಾಟನೆಯಾಗಿದ್ದು, ವಸಾಹತುಶಾಹಿ ಇತಿಹಾಸ, 2ನೇ ಜಾಗತಿಕ ಮಹಾಯುದ್ಧ, ಸ್ವಾತಂತ್ರ್ಯೋತ್ಸವದ ಸಂಭ್ರಮ, ಸಂವಿಧಾನದ ಅಳವಡಿಕೆ ಮತ್ತು ಹಲವಾರು ಪ್ರಮುಖ ಮಸೂದೆಗಳ ಅಂಗೀಕಾರಕ್ಕೆ ಸಾಕ್ಷಿಯಾಗಿದೆ.

ಸೆ.20ರಂದು ಸಿಎಂ ಕಪ್‌ಗೆ ಕುಸ್ತಿ ಪಟುಗಳ ಆಯ್ಕೆ



ಮೈಸೂರು, ಸೆ.17(ಜಿಎ)-ಕರ್ನಾಟಕ ಕುಸ್ತಿ ಸಂಘ, ಕರ್ನಾಟಕ ಒಲಂಪಿಕ್ ಅಸೋಸಿಯೇಷನ್ ಮತ್ತು ಯುವ ಸಬಲೀಕರಣ ಕ್ರೀಡಾ ಇಲಾಖೆ ವತಿಯಿಂದ ಸೆ.20ರಂದು ದಸರಾ ಗೇಮ್ಸ್ ಸಿಎಂ ಕಪ್ ಮತ್ತು ಮೈಸೂರು ಚಾಂಪಿಯನ್‌ಶಿಪ್‌ಗೆ ಕರ್ನಾಟಕದ ಕುಸ್ತಿಪಟುಗಳ ಆಯ್ಕೆ ಪ್ರಕ್ರಿಯೆ ನಡೆಯಲಿದೆ ಎಂದು ಸ್ಪರ್ಧಾ ನಿರ್ದೇಶಕ ಕೆ. ವಿನೋದ್‌ಕುಮಾರ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಮೈಸೂರಿನ ಚಾಮುಂಡಿ ವಿಹಾರ್ ಒಳ ಕ್ರೀಡಾಂಗಣದಲ್ಲಿ ಕರ್ನಾಟಕದ ಹಿರಿಯರ ಪುರುಷರ ವಿಭಾಗ, ಮಹಿಳೆಯರ ಫ್ರೀ ಸ್ಟೈಲ್, ಗ್ರಿಕೋರೋಮನ್ ಹಾಗೂ ಮಹಿಳಾ ವಿಭಾಗದ ಆಯ್ಕೆ ಪ್ರಕ್ರಿಯೆ ನಡೆಯಲಿದ್ದು, ಸಂಘದ ರಾಜ್ಯಾಧ್ಯಕ್ಷ ಬಿ.ಗುಣರಂಜನ್ ಶೆಟ್ಟಿ ಅವರ ನೇತೃತ್ವದಲ್ಲಿ ನಡೆಸಲಾಗುವುದು ಎಂದರು.

ಈ ಆಯ್ಕೆ ಪ್ರಕ್ರಿಯೆಯಲ್ಲಿ ಕರ್ನಾಟಕದ ಕುಸ್ತಿ ಪಟುಗಳಿಗೆ ಮಾತ್ರ ಆದ್ಯತೆ ಇದ್ದು, ಕರ್ನಾಟಕದ ಆರ್ಮಿ, ರೈಲ್ವೇ, ಪೊಲೀಸ್ ಇಲಾಖೆ ಮತ್ತು ಎಲ್ಲಾ ಸರ್ಕಾರಿ ಇಲಾಖೆಯ ಕುಸ್ತಿ ಪಟುಗಳಿಗೆ ಅವಕಾಶವಿದ್ದು, ಕುಸ್ತಿಯಲ್ಲಿ ಭಾಗವಹಿಸುವವರು ತಮ್ಮ ಇಲಾಖೆಯಿಂದ ಅನುಮತಿ ಪತ್ರವನ್ನು ಕಡ್ಡಾಯವಾಗಿ ತರಬೇಕಿದೆ. ಅಂದು ಬೆಳಗ್ಗೆ 8 ಗಂಟೆಯಿಂದ 9 ಗಂಟೆವರೆಗೂ ದೇಹ ತೂಕ ಮಾಡಲಾಗುತ್ತದೆ. ಆಯ್ಕೆಯಲ್ಲಿ ಒಂದು ಕೆ.ಜಿ.ದೇಹ ತೂಕದ ರಿಯಾಯಿತಿ ನೀಡಲಾಗುತ್ತದೆ ಎಂದರು.

ಆಯ್ಕೆ ಪ್ರಕ್ರಿಯೆಯು ಗ್ರೀಕೋರೋಮನ್. ಫ್ರೀ ಸ್ಟೈಲ್ ಹಾಗೂ ಮಹಿಳಾ ವಿಭಾಗದ ದೇಹ ತೂಕದಲ್ಲಿ ಕುಸ್ತಿ ಪಟುಗಳನ್ನು ಆಯ್ಕೆ ಮಾಡಲಾಗುತ್ತದೆ. ಇಲ್ಲಿ ಆಯ್ಕೆಯಾದ 8 ಕುಸ್ತಿಪಟುಗಳು ಮಾತ್ರ ದಸರಾ ಗೇಮ್ಸ್ ಸಿಎಂ ಕಪ್‌ನಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ. ಬೆಳಗ್ಗೆ 10 ಗಂಟೆಗೆ ಆಯ್ಕೆ ಪ್ರಕ್ರಿಯೆ ಆರಂಭವಾಗಲಿದ್ದು, ಇಲ್ಲಿನ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗಿಯಾದ ಕುಸ್ತಿ ಪಟುಗಳಿಗೆ ಮಾತ್ರ ದಸರಾ ಕುಸ್ತಿ ಪಂದ್ಯದಲ್ಲಿ ಭಾಗವಹಿಸಲು ಅವಕಾಶವಿರುತ್ತದೆ ಎಂದು ತಿಳಿಸಿದರು.

ಆಯ್ಕೆಯಾದ ಎಲ್ಲಾ ಕುಸ್ತಿಪಟುಗಳಿಗೆ ಸಂಪೂರ್ಣ ಕ್ರೀಡಾ ಸಮವಸ್ತ್ರ ನೀಡಲಾಗುತ್ತದೆ ಹಾಗೇ ಟಿ.ಎ., ಡಿ.ಎ ಹಾಗೂ ನಗದು ಬಹುಮಾನವನ್ನು ದಸರಾ ಕ್ರೀಡಾಕೂಟದಲ್ಲಿ ನೀಡಲಿದ್ದಾರೆ. ಈ ಹಿನ್ನೆಲೆಯಲ್ಲಿ ಕಡ್ಡಾಯವಾಗಿ ಬ್ಯಾಂಕ್ ಮಾಹಿತಿ, ಇತ್ತೀಚಿನ ಪಾಸ್‌ಪೋರ್ಟ್ ಸೈಜ್ ಫೋಟೋ ತರಬೇಕು. ಮುಖ್ಯವಾಗಿ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುಸ್ತಿ ಪಟುಗಳು ಒರಿಜಿನಲ್ ಮತ್ತು ಜೆರಾಕ್ಸ್ ಆಧಾರ್ ಕಾರ್ಡ್ ಕಡ್ಡಾಯವಾಗಿ ತರಬೇಕು. ಹೆಚ್ಚಿನ ಮಾಹಿತಿಗೆ ಮೊ. 98457 27392 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಅಧ್ಯಕ್ಷ ಇಟ್ಟಿಗೆಗೂಡು ಪೈ. ಚಂದ್ರಶೇಖರ್, ಛೋಟಾ ರಫೀಕ್, ರಾಜೇಶ್, ಗಂಗಣ್ಣ, ಗಿರೀಶ್, ಜೂ. ಮಹದೇವಣ್ಣ ಕ್ಯಾತಮಾರನಹಳ್ಳಿ ಉಪಸ್ಥಿತರಿದ್ದರು.

ಬ್ರೆಜಿಲ್‌ನಲ್ಲಿ ವಿಮಾನ ಪತನ: ಸಿಬ್ಬಂದಿ ಸೇರಿ 14 ಮಂದಿ ಸಾವು



ಬ್ರೆಜಿಲ್, ಸೆ.17- ಬ್ರೆಜಿಲ್‌ನ ಬಾರ್ಸೆಲೋಸ್‌ನಲ್ಲಿ ಮಧ್ಯಮ ಗಾತ್ರದ ವಿಮಾನವೊಂದು ಶನಿವಾರ ಮಧ್ಯಾಹ್ನ (ನಿನ್ನೆ) 3 ಗಂಟೆಯ ಸುಮಾರಿಗೆ ಧರೆಗಪ್ಪಳಿಸಿದೆ. ವಿಮಾನದಲ್ಲಿದ್ದ ಪ್ರಯಾಣಿಕರು, ಸಿಬ್ಬಂದಿ ಸೇರಿದಂತೆ ಒಟ್ಟು 14 ಮಂದಿ ಸಾವನ್ನಪ್ಪಿದ್ದಾರೆ.

ಪೈಲಟ್, ಸಹ ಪೈಲಟ್, ಇಬ್ಬರು ಸಿಬ್ಬಂದಿ ಸೇರಿ ಹದಿನಾಲ್ಕು ಮಂದಿ ಪ್ರಯಾಣಿಸುತ್ತಿದ್ದರು. ದುರ್ಘಟನೆಯಲ್ಲಿ ಯಾರೊಬ್ಬರೂ ಬದುಕುಳಿದಿಲ್ಲ ಎಂದು ಬ್ರೆಜಿಲ್‌ನ ಸಿವಿಲ್ ಡಿಫೆನ್ಸ್ ಮಾಹಿತಿ ನೀಡಿದೆ.

ನತದೃಷ್ಟ ವಿಮಾನವು ಮನೌಸ್ ಟ್ಯಾಕ್ಸಿ ಏರಿಯೊ ಎಂಬ ಕಂಪನಿಗೆ ಸೇರಿದೆ. ಅಮೆಜಾನ್‌ನ ಅತಿದೊಡ್ಡ ನಗರ ಮನೌಸ್‌ನಿಂದ ಟೇಕ್ ಆಫ್ ಆಗಿತ್ತು. ಮನೌಸ್‌ನಿಂದ ಸುಮಾರು 400 ಕಿ.ಮೀ ದೂರದಲ್ಲಿರುವ ನಗರದಲ್ಲಿ ಲ್ಯಾಂಡಿಂಗ್ ವೇಳೆ ಪ್ರತಿಕೂಲ ಹವಾಮಾನದಿಂದಾಗಿ ಅಪಘಾತ ಸಂಭವಿಸಿದೆ ಎಂದು ತಿಳಿದುಬಂದಿದೆ. ವಿಮಾನದಲ್ಲಿದ್ದವರೆಲ್ಲ ಮೀನುಗಾರಿಕೆಗೆ ತೆರಳುತ್ತಿದ್ದ ಬ್ರೆಜಿಲ್ ಪ್ರವಾಸಿಗ ಪ್ರಯಾಣಿಕರು ಎಂದು ವರದಿಯಾಗಿದೆ. ಬ್ರೆಜಿಲ್ ವಾಯುಪಡೆ ತನಿಖೆಗೆ ತಜ್ಞರ ತಂಡ ಕಳುಹಿಸಿದೆ.

ಇಟಲಿಯಲ್ಲಿ ವಾಯುಪಡೆ ವಿಮಾನ ಪತನ: ಇಟಲಿಯ ಅಕ್ರೋಬ್ಯಾಟಿಕ್ ಏರ್ ಟೀಮ್ ಫ್ರೆಸ್ ಟ್ರಿಕಲೋರಿ ಎಂಬ ವಿಮಾನವು ಶನಿವಾರ ಉತ್ತರದ ಟುರಿನ್ ನಗರದ ಹೊರಭಾಗದಲ್ಲಿ ಅಭ್ಯಾಸ ನಡೆಸುತ್ತಿದ್ದಾಗ ಅಪಘಾತಕ್ಕೀಡಾಗಿದೆ. ಘಟನೆಯಲ್ಲಿ ಬಾಲಕಿ ಸಾವನ್ನಪ್ಪಿರುವುದಾಗಿ ಇಟಾಲಿ ಮಾಧ್ಯಮಗಳು ವರದಿ ಮಾಡಿವೆ.

ವಾಯುಪಡೆ ವಿಮಾನಗಳು ಏರ್‌ಶೋಗಾಗಿ ಅಭ್ಯಾಸ ನಡೆಸುತ್ತಿದ್ದಾಗ ಪತನಗೊಂಡಿದೆ. ಈ ವೇಳೆ ವಿಮಾನದ ಬಿಡಿಭಾಗಗಳು ಕಾರಿಗೆ ಅಪ್ಪಳಿಸಿದ್ದು, ಐದು ವರ್ಷದ ಮಗು ಸ್ಥಳದಲ್ಲೇ ಸಾವನ್ನಪ್ಪಿದೆ. 9 ವರ್ಷದ ಮಗು ಮತ್ತು ತಂದೆಗೆ ಸುಟ್ಟ ಗಾಯಗಳಾಗಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ವಿಮಾನ ಅಪಘಾತಕ್ಕೀಡಾಗುವ ಮುನ್ನ ಪೈಲಟ್ ಹೊರ ಜಿಗಿದಿದ್ದಾರೆ ಎಂದು ತಿಳಿದುಬಂದಿದೆ.

ವಿವಿಧ ಸಾಲ ಸೌಲಭ್ಯಗಳಿಗೆ ಅರ್ಜಿ ಆಹ್ವಾನ

ಮೈಸೂರು, ಸೆ.17- 2023-24 ನೇ ಸಾಲಿನ ಪ್ರಧಾನಮಂತ್ರಿಗಳ ಉದ್ಯೋಗ ಸೃಜನ ಯೋಜನೆಯಡಿ (PMEGP) ಗ್ರಾಮ ಪಂಚಾಯ್ತಿ, ಪಟ್ಟಣ ಪಂಚಾಯ್ತಿ ಮತ್ತು ನಗರ ಪ್ರದೇಶಗಳಲ್ಲಿ ಬ್ಯಾಂಕ್‌ಗಳ ಮುಖಾಂತರ ಸಾಲ ಪಡೆದು ಸಣ್ಣ ಕೈಗಾರಿಕೆಗೆ ಉತ್ಪಾದನಾ ವೆಚ್ಚ ರೂ. 50 ಲಕ್ಷದವರೆಗೆ ಮತ್ತು ಸೇವಾ ಉದ್ದಿಮೆಗೆ ರೂ.20 ಲಕ್ಷದವರೆಗೆ ಮತ್ತು ಸದರಿ ಸಾಲಕ್ಕೆ ಫಲಾನುಭವಿಗಳಿಗೆ ಶೇ.15 ರಿಂದ 35% ರಷ್ಟು ಸಹಾಯಧನ ಸೌಲಭ್ಯ ನೀಡಲು ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ (KVIB) ಮೈಸೂರು ವತಿಯಿಂದ www.pmegpeprotal ಅಥವಾ www.kvic.org.in ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಸಯ್ಯಾಜಿರಾವ್ ರಸ್ತೆಯಲ್ಲಿರುವ ಚಾಮರಾಜ ತಾಂತ್ರಿಕ ಸಂಸ್ಥೆ ಕಟ್ಟಡದ ಜಿಲ್ಲಾ ಕಚೇರಿಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಜಿಲ್ಲಾ ಗ್ರಾಮೋದ್ಯೋಗ ಅಧಿಕಾರಿಗಳ ದೂ.ಸಂ: 0821-2566428 ಅನ್ನು ಸಂಪರ್ಕಿಸಬಹುದು ಎಂದು ಕರ್ನಾಟಕ ರಾಜ್ಯ ಖಾದಿ ಗ್ರಾಮೋದ್ಯೋಗ ಮಂಡಳಿಯ ಜಿಲ್ಲಾ ಖಾದಿ ಗ್ರಾಮೋದ್ಯೋಗ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಸಿರು ನಮ್ಮ ಉಸಿರು

ಪಾಲಿಕೆ ಸದಸ್ಯರಿಂದ ಮಹಿಳಾ ಪೌರಕಾರ್ಮಿಕರಿಗೆ ಬಾಗಿನ



ಮೈಸೂರು, ಸೆ.17(ಜಿಎ)- ಗೌರಿ ಗಣೇಶ ಹಬ್ಬದ ಅಂಗವಾಗಿ ಪೌರಕಾರ್ಮಿಕರಿಗೆ ಬಾಗಿನ ನೀಡಿ ಗೌರವಿಸಲಾಯಿತು.

ಮೈಸೂರಿನ ಚಾಮುಂಡಿಪುರಂ ವೃತ್ತದಲ್ಲಿರುವ ತಗಡೂರು ರಾಮಚಂದ್ರರಾವ್ ಉದ್ಯಾನವನದಲ್ಲಿ ಪಾಲಿಕೆ ಆಡಳಿತ ಪಕ್ಷದ ನಾಯಕ ಮಾ.ವಿ.ರಾಮಪ್ರಸಾದ್ ಅವರು ಭಾನುವಾರ ತಮ್ಮ ವಾರ್ಡ್‌ನಲ್ಲಿ ಸ್ವಚ್ಛತಾ ಕಾರ್ಯ ಮಾಡುವ 40 ಕ್ಕೂ ಹೆಚ್ಚು ಮಹಿಳಾ ಪೌರಕಾರ್ಮಿಕರಿಗೆ ಸಂಪ್ರದಾಯದಂತೆ ಹೂ ಹಣ್ಣು ತಾಂಬೂಲ ಹಾಗೂ ಸೀರೆಯನ್ನು ಒಳಗೊಂಡ ಬಾಗಿನ ನೀಡಿ ಶುಭಕೋರಿದರು.

ನಂತರ ಮಾತನಾಡಿದ ಅವರು, ಯಾವ ಹಬ್ಬವಿದ್ದರೂ ಸ್ವಚ್ಛತಾ ಕಾರ್ಯದಲ್ಲಿ ತೊಡಗಿಸಿಕೊಳ್ಳುವ ಪೌರಕಾರ್ಮಿಕರು ತಮ್ಮ ಕೆಲಸದಲ್ಲಿಯೇ ದೇವರನ್ನು ಕಾಣುತ್ತಾರೆ. ಮಾತ್ರವಲ್ಲದೇ ಮೊದಲು ನಗರವನ್ನು ಸ್ವಚ್ಛಗೊಳಿಸಿ ಹಬ್ಬದ ವಾತಾವರಣ ಸೃಷ್ಟಿಸಿ, ನಂತರ ಅವರು ಮನೆಯಲ್ಲಿ ಹಬ್ಬ ಮಾಡುತ್ತಾರೆ. ಹೀಗಾಗಿ ನಮ್ಮ ಸಮಾಜದ ನಿಜವಾದ ಬಂಧುಗಳಾದ ಪೌರಕಾರ್ಮಿಕರನ್ನು ಸನ್ಮಾನಿಸಲಾಗುತ್ತಿದೆ ಎಂದರು.

ಕೋವಿಡ್ ಸಂದರ್ಭದಲ್ಲಿ ಜನರು ಮನೆಯಿಂದ ಹೊರಗೆ ಬಾರದ ಸಮಯದಲ್ಲಿ ಪ್ರಾಣ ರಕ್ಷಣೆ ಮಾಡಿಕೊಂಡರೆ, ಪೌರಕಾರ್ಮಿಕರು ತಮ್ಮ ಪ್ರಾಣವನ್ನು ಲೆಕ್ಕಿಸದೇ ನಗರದಾದ್ಯಂತ ಸ್ವಚ್ಛತಾ ಕಾರ್ಯ ಮಾಡಿದರು. ಹೀಗಾಗಿ ಪೌರಕಾರ್ಮಿಕರೇ ನಮ್ಮೆಲ್ಲರ ನಿಜವಾದ ವಾರಿಯರ್ಸ್ ಆಗಿದ್ದಾರೆ ಎಂದರು.

ಪೌರಕಾರ್ಮಿಕರಿಗೆ ಮೂಲಸೌಕರ್ಯ ಹಾಗೂ ಅವರ ಮಕ್ಕಳಿಗೆ ಶಿಕ್ಷಣ ಕೊಡಿಸುವುದು ಸೇರಿದಂತೆ ಇನ್ನಿತರ ಸಂಕಷ್ಟಗಳಿಗೆ ಸ್ಪಂದಿಸಬೇಕಿದೆ. ಈ ನಿಟ್ಟಿನಲ್ಲಿ ನಿಮ್ಮೊಂದಿಗೆ ನಾವಿದ್ದೇವೆ ಎಂದು ಬೆನ್ನು ತಟ್ಟಿ ಪ್ರೋತ್ಸಾಹದಾಯಕ ಕೆಲಸ ಮಾಡಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಆರೋಗ್ಯ ಪರಿವೀಕ್ಷಕ ಶಿವಪ್ರಸಾದ್, ಮುಖಂಡರಾದ ಸಂದೀಪ್, ಅದ್ವೈತ್, ಅರವಿಂದ್, ಲಲಿತಾಂಬ, ಮಂಜುನಾಥ್, ಬಸವರಾಜು, ದೇವೇಂದ್ರ ಸ್ವಾಮಿ, ತೀರ್ಥ, ಸೋಮೇಶ್, ಶ್ರೀಕಂಠ, ಶೇಖರ್, ರವಿ, ವೆಂಕಟೇಶ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಪ್ರಾಮಾಣಿಕತೆ ಮೆರೆದ ವೈದ್ಯೆ

ಮೈಸೂರು, ಸೆ.17(ಬಿಎಲ್‌ಯು)- ಮೈಸೂರಿನ ಜೆ.ಪಿ.ನಗರ ರಸ್ತೆಯಲ್ಲಿ ಮಹಿಳೆಯೊಬ್ಬರು ಬೀಳಿಸಿದ್ದ ಪರ್ಸ್‌ಅನ್ನು ಆಕೆಗೆ ನೀಡುವ ಮೂಲಕ ವೈದ್ಯರೊಬ್ಬರು ಪ್ರಾಮಾಣಿಕತೆ ಮೆರೆದಿದ್ದಾರೆ.



ಜೆ.ಪಿ.ನಗರ ಸರ್ಕಲ್ ಬಳಿ ಮಹಿಳೆಯೊಬ್ಬರು ಅರಿವಿಗೆ ಬಾರದೆ ಪರ್ಸ್ ಬೀಳಿಸಿ ಬಟ್ಟೆ ಅಂಗಡಿ ಒಳಗೆ ಹೋಗಿದ್ದರು. ಇದನ್ನು ನೋಡಿದ ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯ ವೈದ್ಯೆ ಡಾ.ಎಂ.ಪಿ.ಪ್ರೀತಮ್ ಅವರು ಪರ್ಸ್‌ಅನ್ನು ಆ ಮಹಿಳೆಗೆ ನೀಡಿದರು. ಹಣ ಹಾಗೂ ಚಿನ್ನದ ಓಲೆ ಇದ್ದ ಪರ್ಸ್ ನೀಡಿದ ವೈದ್ಯೆ ಡಾ.ಪ್ರೀತಮ್‌ಗೆ ಆ ಮಹಿಳೆ ಹೃದಯ ತುಂಬಿದ ಅಭಿನಂದನೆ ತಿಳಿಸಿದರು. ಕೇವಲ ಹತ್ತು ರೂಪಾಯಿ ಸಿಕ್ಕಿದರೂ ಕೊಡದ ಇವತ್ತಿನ ಸ್ಥಿತಿಯಲ್ಲಿ ಸಾವಿರಾರು ರೂಪಾಯಿ ಹಣ ಹಾಗೂ ಚಿನ್ನವಿದ್ದ ಪರ್ಸ್ ನೀಡಿರುವುದು ವೈದ್ಯೆಯ ಪ್ರಾಮಾಣಿಕತೆಗೆ ಸಾಕ್ಷಿಯಾಗಿದೆ.



ಮೈಸೂರು ತಾಲೂಕು ಮಟ್ಟದ ಪ್ರೌಢಶಾಲಾ ಖೋ-ಖೋ ಪಂದ್ಯಾವಳಿಯಲ್ಲಿ ಉದ್ಬೂರಿನ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳ ತಂಡ ಪ್ರಥಮ ಸ್ಥಾನ ಗಳಿಸಿ, ಜಿಲ್ಲಾ ಮಟ್ಟದ ಪಂದ್ಯಾವಳಿಗೆ ಆಯ್ಕೆಯಾಗಿದೆ. ಶಾಲೆಗೆ ಕೀರ್ತಿ ತಂದ ವಿದ್ಯಾರ್ಥಿಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿ ವಿವೇಕಾನಂದ, ಮುಖ್ಯ ಶಿಕ್ಷಕ ಲಿಂಗರಾಜ, ದೈಹಿಕ ಶಿಕ್ಷಣ ಶಿಕ್ಷಕ ಮಹದೇವಸ್ವಾಮಿ ಹಾಗೂ ಹಿರಿಯ ಶಿಕ್ಷಕಿ ಲಲಿತ ಹಾಗೂ ಸಹಶಿಕ್ಷಕರು ಅಭಿನಂದಿಸಿದರು.

ಗೌರಿ-ಗಣೇಶ ಹಬ್ಬ : ಮಾರುಕಟ್ಟೆಗಳಲ್ಲಿ ಭರ್ಜರಿ ಖರೀದಿ

ಮೈಸೂರು, ಸೆ.17(ಜಿಎ)-ಗೌರಿ-ಗಣೇಶ ಹಬ್ಬದ ಹಿಂದಿನ ದಿನವಾದ ಭಾನುವಾರ ಮೈಸೂರಿನ ದೇವರಾಜ ಮಾರುಕಟ್ಟೆ ಸೇರಿ ವಿವಿಧ ಮಾರುಕಟ್ಟೆಗಳಲ್ಲಿ ಭರ್ಜರಿ ವ್ಯಾಪಾರ ವಹಿವಾಟು ನಡೆಯಿತು. ಹಬ್ಬದ ಹಿನ್ನೆಲೆಯಲ್ಲಿ ಹೂವು-ಹಣ್ಣುಗಳಿಗೆ ಭಾರಿ ಬೇಡಿಕೆ ಹೆಚ್ಚಿತು.

ಸರ್ಕಾರಿ ರಜೆ ಹಿನ್ನೆಲೆಯಲ್ಲಿ ಭಾನುವಾರ ಬೆಳಗ್ಗೆಯಿಂದಲೇ ಮಾರುಕಟ್ಟೆಗಳಿಗೆ ಜನರು ಲಗ್ಗೆ ಇಟ್ಟು, ಗೌರಿ-ಗಣೇಶನ ಹಬ್ಬಕ್ಕೆ ಬೇಕಾಗುವ ಸಾಮಗ್ರಿ ಖರೀದಿಸಲು ಮುಗಿಬಿದ್ದಿದ್ದು, ದೇವರಾಜ ಮಾರುಕಟ್ಟೆ, ಮಂಡಿ ಮಾರ್ಕೆಟ್, ಅಗ್ರಹಾರದ ವಾಣಿವಿಲಾಸ ಮಾರುಕಟ್ಟೆ, ನಂಜುಮಳಿಗೆ, ಧನ್ವಂತ್ರಿ ರಸ್ತೆ ಸೇರಿದಂತೆ ನಗರದ ಪ್ರಮುಖ ವೃತ್ತಗಳಲ್ಲಿ ಹಬ್ಬದ ಖರೀದಿ ಭರಾಟೆ ಜೋರಾಗಿತ್ತು.

ಪ್ರಮುಖವಾಗಿ ದೇವರಾಜ ಮಾರುಕಟ್ಟೆಯಲ್ಲಿ ಕಾಲಿಡಲು ಜಾಗವಿಲ್ಲದಷ್ಟು ಜನ ಜಂಗುಳಿಯಿಂದ ಕೂಡಿತ್ತು. ವಾಣಿವಿಲಾಸ ಮಾರುಕಟ್ಟೆ, ಮಂಡಿ ಮಾರುಕಟ್ಟೆಯಲ್ಲಿ ವಿವಿಧ ಹಣ್ಣುಗಳನ್ನು ಖರೀದಿಸಿದರೆ, ಧನ್ವಂತ್ರಿ ರಸ್ತೆ, ಸಯ್ಯಾಜಿರಾವ್ ರಸ್ತೆ, ಅಗ್ರಹಾರ,



ಗಾಂಧಿ ವೃತ್ತ, ರೈಲು ನಿಲ್ದಾಣ ಸುತ್ತಮುತ್ತಲಿನ ರಸ್ತೆಗಳಲ್ಲಿ ಸೇವಂತಿಗೆ ಹೂವು ವ್ಯಾಪಾರ ಕಂಡುಬಂತು. ಹಬ್ಬದ ಹಿನ್ನೆಲೆಯಲ್ಲಿ ಮಹಿಳೆಯರು ಹೂವು, ಹಣ್ಣು, ತರಕಾರಿ, ಸೀರೆ ಮತ್ತಿತರ ಹೊಸಬಟ್ಟೆಗಳ ಖರೀದಿಯಲ್ಲಿ ಮಗ್ನರಾಗಿದ್ದರು.

ನಗರದ ಧನ್ವಂತ್ರಿ ರಸ್ತೆ, ಜೆ.ಕೆ.ಮೈದಾನದ ಆಸುಪಾಸಿನಲ್ಲಿ ಸೇವಂತಿಗೆ ಹೂವಿನ ರಾಶಿರಾಶಿ ಹಾಕಿಕೊಂಡು ಗ್ರಾಹಕರನ್ನು ಕೂಗಿ ಕೂಗಿ ಮಾರಾಟ ಮಾಡುತ್ತಿದ್ದು ಕಂಡುಬಂದಿತು. ವಾರದ ಹಿಂದಷ್ಟೇ ಸೇವಂತಿಗೆ ಹೂವು ಮಾರು 20 ರೂ. ಇದ್ದದ್ದು, ಹಬ್ಬ ಎರಡು ದಿನಗಳು ಇರುವಂತೆ 30 ರೂ.ಗೆ ಏರಿಕೆಯಾಗಿದೆ. ಮೈಸೂರು ಮಲ್ಲಿಗೆ ಒಂದು ಕೆ.ಜಿ. 800 ರೂ. ಇದ್ದದ್ದು 1 ಸಾವಿರ ರೂ. ಆಗಿದೆ. ಕನಕಾಂಬರ ಕೆ.ಜಿ. 1200 ರೂ. ಆಗಿದ್ದು, ಕಳೆದ ನಾಲ್ಕೈದು ದಿನಗಳ ಹಿಂದೆ ಕೆ.ಜಿ.ಗೆ 20ರಿಂದ 30 ರೂ.ಗೆ ಮಾರಾಟವಾಗುತ್ತಿದ್ದ ಏಲಕ್ಕಿ ಬಾಳೆ ಹಬ್ಬದ ಹಿನ್ನೆಲೆಯಲ್ಲಿ ಬೆಲೆ ಏರಿಕೆಯಾಗಿದೆ. ದೇವರಾಜ ಮಾರುಕಟ್ಟೆಯಲ್ಲಿ 50 ರೂ. ತನಕ ಮಾರಾಟವಾಯಿತು. ಸೇಬು, ಮೂಸಂಬಿ, ಕಿತ್ತಳೆ, ಪೈನಾಪಲ್ ಮೊದಲಾದ ಹಣ್ಣುಗಳ ಬೆಲೆ 30ರಿಂದ 40 ರೂ. ತನಕ ರಾತ್ರೋರಾತ್ರಿ ಜಾಸ್ತಿಯಾಗಿತ್ತು. ಅಗ್ರಹಾರದ ಸುತ್ತಮುತ್ತ ಹಳ್ಳಿಯ ಜನರು ಮಾವಿನ ಸೊಪ್ಪು, ಬಾಳೆಕಂದಿನ ವ್ಯಾಪಾರ ನಡೆಸಿದರೆ, ಕುವೆಂಪುನಗರ, ಜಯಲಕ್ಷ್ಮಿಪುರಂ, ವಿವೇಕಾನಂದನಗರ, ಒಂಟಿಕೊಪ್ಪಲು, ಜೆ.ಪಿ.ನಗರ, ಹೆಬ್ಬಾಳು, ವಿಜಯನಗರ, ಸಿದ್ದಾರ್ಥನಗರ, ಬಂಬೂಬಜಾರ್, ಎನ್.ಆರ್.ಮೊಹಲ್ಲಾ, ಛತ್ರಿಮರದ ರಸ್ತೆ ಮೊದಲಾದ ಕಡೆಗಳಲ್ಲಿ ಹೂವು, ಹಣ್ಣು ಮಾವಿನಸೊಪ್ಪು, ಬಾಳೆದಿಂಡಿನ ವ್ಯಾಪಾರದಲ್ಲಿ ತೊಡಗಿಸಿಕೊಂಡಿದ್ದರು.

ವಿವಿಧ ಅಳತೆಯ ಗೌರಿ-ಗಣೇಶನ ಮೂರ್ತಿಗಳನ್ನು ಖರೀದಿಸಿದರೆ, ಗಾಂಧಿ ವೃತ್ತ, ಸಯ್ಯಾಜಿರಾವ್ ರಸ್ತೆ,ದೇವರಾಜ ಅರಸು ರಸ್ತೆ, ಮೃಗಾಲಯ ರಸ್ತೆ, ಕೆ.ಟಿ.ಸ್ಟ್ರೀಟ್ ಮೊದಲಾದ ಕಡೆಗಳಲ್ಲಿ ಮಹಿಳೆಯರು ಸೀರೆ, ಬಳೆ ಖರೀದಿಯಲ್ಲಿ ಬ್ಯುಸಿಯಾಗಿದ್ದರು.

ಆರ್ಥಿಕ ಸದೃಢತೆಗೆ ಮೋದಿ ಮತ್ತೆ ಪ್ರಧಾನಿಯಾಗಬೇಕು

ಹೆಚ್.ಡಿ.ಕೋಟೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಜನ್ಮದಿನ ಆಚರಣೆ



ಹೆಚ್.ಡಿ.ಕೋಟೆ,ಸೆ.17– ಆರ್ಥಿಕವಾಗಿ ದೇಶ ಸದೃಢವಾಗಬೇಕಾದರೆ ಮತ್ತೆ ನರೇಂದ್ರ ಮೋದಿಯವರು ಪ್ರಧಾನಮಂತ್ರಿಯಾಗಬೇಕು ಎಂದು ಮಾಜಿ ಸಚಿವರೂ ಆದ ಸಫಾಯಿ ಕರ್ಮಚಾರಿ ಆಯೋಗದ ಮಾಜಿ ಅಧ್ಯಕ್ಷ ಕೋಟೆ ಎಂ.ಶಿವಣ್ಣ ತಿಳಿಸಿದ್ದಾರೆ.

ಹೆಚ್.ಡಿ.ಕೋಟೆ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರಧಾನ ಮಂತ್ರಿ ಮೋದಿಯವರ 73ನೇ ಹುಟ್ಟುಹಬ್ಬದ ಅಂಗವಾಗಿ ರೋಗಿಗಳಿಗೆ ಹಣ್ಣು–ಹಂಪಲುಗಳನ್ನು ವಿತರಿಸಿ ಮಾತನಾಡಿದ ಅವರು, ದೇಶದಲ್ಲಿ ರೈತಾಪಿ ವರ್ಗ, ಯುವ ಪೀಳಿಗೆ, ದೇಶದ ಎಲ್ಲಾ ಜನಾಂಗಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಉತ್ತಮ ಆಡಳಿತ ನಡೆಸಿಕೊಂಡು ಬರುತ್ತಿದ್ದಾರೆ. ಆದ್ದರಿಂದ ಮುಂದಿನ ದಿನಗಳಲ್ಲೂ ಅವರು ಪ್ರಧಾನಿ ಆದರೆ ಮಾತ್ರ ದೇಶ ಸದೃಢವಾಗಲು ಸಾಧ್ಯ ಎಂದರು.

ಮೋದಿಯವರು ಭಾರತ ದೇಶದಲ್ಲಿ ಉತ್ತಮ ಆಡಳಿತ ನೀಡಿರುವ ಹಿನ್ನೆಲೆಯಲ್ಲಿ ಇಡೀ ವಿಶ್ವದಲ್ಲೆ ಮಹಾನ್ ನಾಯಕ ಎಂದು ಖ್ಯಾತಿ ಪಡೆದಿದ್ದಾರೆ. ಮುಂದಿನ ದಿನಗಳಲ್ಲೂ ದೇಶದಲ್ಲಿ, ಉತ್ತಮ ಆಡಳಿತ ಕಾಣಬೇಕಾದರೆ ಹಾಗೂ ದೇಶದ ಉಳಿವಿಗಾಗಿ ಮತ್ತೆ ನರೇಂದ್ರ ಮೋದಿಯವರೇ ಪ್ರಧಾನ ಮಂತ್ರಿಯಾಗಬೇಕು ಎಂದರು.

ಇದೇ ಸಂದರ್ಭದಲ್ಲಿ ತಾಲೂಕು ಬಿಜೆಪಿ ಅಧ್ಯಕ್ಷ ಗುರುಸ್ವಾಮಿ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ವೆಂಕಟಸ್ವಾಮಿ, ಪ್ರಧಾನ ಕಾರ್ಯದರ್ಶಿಗಳಾದ ವಿವೇಕಾನಂದ, ಚನ್ನಪ್ಪ, ವೈದ್ಯರಾದ ಕಿರಣ್‌ಕುಮಾರ್ ಸಿಬ್ಬಂದಿಗಳಾದ ಸರೋಜಿನಿ, ಪರಮೇಶ್, ಮುಖಂಡರುಗಳಾದ ವೈಟಿ ಮಹೇಶ್, ನಂದೀಶ್, ಶಿವರಾಜಪ್ಪ, ಹಂಚಿಪುರ ಗಣಪತಿ, ಮಹದೇವ್, ಚಂದ್ರಶೇಖರ್, ಕೆಂಡಗಣ್ಣ ಸ್ವಾಮಿ, ಸತೀಶ್, ಲೋಕೇಶ್, ಶಿವಸ್ವಾಮಿ, ಲೋಕೇಶ್, ಮಹದೇವಪ್ಪ, ಚಂದ್ರಮೌಳಿ, ಬಾಲರಾಜ್, ಉಡ ನಾಗರಾಜ್, ಗೋವಿಂದ, ಸುನಿಲ್, ಮಧು, ಸುರೇಶ್ ಉಪಸ್ಥಿತರಿದ್ದರು.



ದೇಶ ಕಂಡ ಅಪ್ರತಿಮ ಯಶಸ್ವಿ ನಾಯಕ ನರೇಂದ್ರ ಮೋದಿ ಅವರು ಇಂದು ವಿಶ್ವಕರ್ಮ ದಿನಾಚರಣೆಯ ಅಂಗವಾಗಿ ವಿಶ್ವಕರ್ಮ ಕುಶಲ ಕರ್ಮಿಗಳಿಗೆ ಉತ್ತಮ ಸೌಲಭ್ಯ ನೀಡಿರುವುದು ನಿಜಕ್ಕೂ ಶ್ಲಾಘನೀಯ. ಇಂತಹ ಒಬ್ಬ ಮಹಾನಾಯಕ ನಮ್ಮ ಭಾರತದ ಪ್ರಧಾನ ಮಂತ್ರಿ ಆಗಿದ್ದಾರೆ ಎಂದರೆ ನಮ್ಮ ಭಾರತ ದೇಶದ ಎಲ್ಲಾ ಜನತೆ ಹೆಮ್ಮೆ ಪಡುವಂತ ವಿಚಾರ, ಮುಂದಿನ ದಿನಗಳಲ್ಲಿ ಅವರೇ ಪ್ರಧಾನಿ ಆಗಬೇಕು. ಅವರು ಪ್ರಧಾನಿಯಾಗುವುದನ್ನು ಯಾರಿಂದಲೂ ತಪ್ಪಿಸಲು ಸಾಧ್ಯವಿಲ್ಲ.

–ಕೆ.ಎಂ. ಕೃಷ್ಣನಾಯಕ, ಬಿಜೆಪಿ ಮುಖಂಡ.

ಸೆ.21, ಹುಣಸೂರಲ್ಲಿ ವಾರ್ಷಿಕ ಮಹಾ ಸಭೆ

ಹುಣಸೂರು.ಸೆ.17–ಪಟ್ಟಣದ ಲಕ್ಷ್ಮೀ ವಿವಿಧೋದ್ದೇಶ ಮಹಿಳಾ ಸಹಕಾರ ಸಂಘದ 16ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯು ಸೆ.21ರಂದು ನಗರದ ಪರಸಯ್ಯನ ಛತ್ರದಲ್ಲಿ ನಡೆಯಲಿದೆ ಎಂದು ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಶಶಿಕಲಾ ಬಸವಲಿಂಗಯ್ಯ ತಿಳಿಸಿದ್ದಾರೆ.

ಅಂದು ಬೆಳಗ್ಗೆ 11 ಗಂಟೆಗೆ ಸಂಘದ ಅಧ್ಯಕ್ಷರಾದ ಶ್ರೀಮತಿ ಕೆ.ಲಲಿತ ಜಿ.ಟಿ. ದೇವೇಗೌಡ ಅವರ ಅಧ್ಯಕ್ಷತೆಯಲ್ಲಿ ನಡೆಯುವ ಮಹಾಸಭೆಯಲ್ಲಿ ವಾರ್ಷಿಕ ಲೆಕ್ಕ–ಪತ್ರ ಮಂಡನೆ, ಆಯ–ವ್ಯಯ ಪಟ್ಟಿ ಮಂಜೂರು ಮಾಡುವುದು, ಸದಸ್ಯ ರಿಂದ ಬಂದಿರುವ ವಿಚಾರಗಳ ಚರ್ಚೆ, ಅಧ್ಯಕ್ಷರ ಅಪ್ಪಣೆ ಮೇರೆಗೆ ಮತ್ತಿತರ ವಿಷಯಗಳನ್ನು ಚರ್ಚಿಸಲಾಗುವುದು ಎಂದು ತಿಳಿಸಿದ್ದಾರೆ.

ತಿ.ನರಸೀಪುರದಲ್ಲಿ ಪ್ರಧಾನಿ ಮೋದಿ ಹುಟ್ಟುಹಬ್ಬ ಆಚರಣೆ

ಇಂಡಿಯಾ, ಒಕ್ಕೂಟ ಸೇರಿದಂತೆ ಯಾರಿಂದಲೂ ಮೋದಿಯನ್ನು ತಡೆಯಲಾಗದು



ತಿ.ನರಸೀಪುರ, ಸೆ.17– ರಾಷ್ಟ್ರದ ಪ್ರಧಾನ ಮಂತ್ರಿಯಾಗಲು ಅರ್ಹತೆ ಹೊಂದಿರುವ ಏಕೈಕ ವ್ಯಕ್ತಿಯೆಂದರೆ ಅದು ನರೇಂದ್ರ ಮೋದಿ ಮಾತ್ರ ಎಂದು ಚಲನಚಿತ್ರ ನಟ ಹಾಗೂ ಪುರಸಭಾ ಸದಸ್ಯ ಅರ್ಜುನ್ ರಮೇಶ್ ಅಭಿಪ್ರಾಯಪಟ್ಟರು.

ಪ್ರಧಾನಿ ನರೇಂದ್ರ ಮೋದಿಯವರ ಹುಟ್ಟುಹಬ್ಬವನ್ನು ಗೋಪಾಲಪುರ ಗ್ರಾಮದ ಬಿಜೆಪಿ ಜನಸಂಪರ್ಕ ಕೇಂದ್ರದಲ್ಲಿ ಮಕ್ಕಳಿಗೆ ಸಿಹಿ ತಿನ್ನಿಸುವ ಮೂಲಕ ಆಚರಿಸಿ ಅವರು ಮಾತನಾಡಿದರು. ಪ್ರಧಾನಮಂತ್ರಿ ಎಂದಾಕ್ಷಣ ಮೋದೀಜಿ ಅವರ ಭಾವಚಿತ್ರ ಕಣ್ಮುಂದೆ ಬಂದು ಹೋಗುತ್ತದೆ ಪ್ರಧಾನಿಯಾಗಿ ನರೇಂದ್ರ ಮೋದಿಯವರನ್ನು ಮಾತ್ರವೇ ಕಲ್ಪಿಸಿಕೊಳ್ಳಲು ಸಾಧ್ಯವೇ ಹೊರತು ಬೇರಾವ ವ್ಯಕ್ತಿಯನ್ನು ಆ ಜಾಗದಲ್ಲಿ ಕಲ್ಪಿಸಿಕೊಳ್ಳಲಾಗದು. ಹಾಗಾಗಿ ಮುಂದಿನ ಬಾರಿಯೂ ಅವರೇ ನಮ್ಮ ದೇಶದ ಪ್ರಧಾನಮಂತ್ರಿಯಾಗುವುದರಲ್ಲಿ ಯಾವುದೇ ಸಂಶಯವಿಲ್ಲ. ಅವರು ಪ್ರಧಾನಿಯಾಗುವುದನ್ನು ತಪ್ಪಿಸಲು ಇಂಡಿಯಾ ಒಕ್ಕೂಟದಿಂದಾಗಲೀ ಅಥವಾ ಮತ್ತಾವುದೇ ಒಕ್ಕೂಟದಿಂದಲೂ ಸಾಧ್ಯವಿಲ್ಲ ಎಂದರು.

ದೇಶದ ಹೆಮ್ಮೆಯ ಪ್ರಧಾನಿ ಮೋದಿಯವರಿಗೆ ಯಾವಾಗಲು ಮಕ್ಕಳನ್ನು ಕಂಡರೆ ಅತೀವ ಪ್ರೀತಿ. ಹಾಗಾಗಿ ಮಕ್ಕಳಿಗೆ ಸಿಹಿ ತಿನ್ನಿಸುವ ಮೂಲಕ ಅವರ ಹುಟ್ಟುಹಬ್ಬವನ್ನು ವಿಶೇಷವಾಗಿ ಆಚರಿಸಲಾಗುತ್ತಿದೆ ಎಂದರು.

ಚಾಮರಾಜನಗರ ಹಿಂದುಳಿದ ಜಿಲ್ಲೆ ಎಂಬ ಹಣೆ ಪಟ್ಟಿಯಿಂದ ಹೊರಬರಲು ಮೋದಿಯವರು ಜಿಲ್ಲೆಯ ಪ್ರವಾಸ ಮಾಡಬೇಕು. ಚಾ.ನಗರ ಜಿಲ್ಲೆ ಹಿಂದುಳಿದಿದೆ ಎಂದು ಅಲ್ಲಿನ ನಾಯಕರೇ ಹೇಳುತ್ತಿದ್ದಾರೆ. ಅದನ್ನು ಹೋಗಲಾಡಿಸಲು ಮೋದಿಯವರ ಜಿಲ್ಲಾ ಪ್ರವಾಸಕ್ಕೆ ಜಿಲ್ಲಾ ಹಾಗೂ ರಾಜ್ಯ ನಾಯಕರು ವೇದಿಕೆ ಕಲ್ಪಿಸಬೇಕು ಎಂದರು.

ತಾಲೂಕು ಬಾಬು ಜಗಜೀವನರಾಂ ಸಂಘದ ಅಧ್ಯಕ್ಷ ಸಿ.ಪುಟ್ಟಯ್ಯ, ತಾ.ಪಂ ಮಾಜಿ ಸದಸ್ಯ ಬಿ.ಎಲ್.ಮಹದೇವು, ಬಿಜೆಪಿ ಎಸ್‌ಸಿ ಮೋರ್ಚಾ ಜಿಲ್ಲಾಧ್ಯಕ್ಷ ಸಿ.ಡಿ.ವೆಂಕಟೇಶ್, ಸಂದೀಪ್, ರಾಜು ಗೌಡ, ಪ್ರದೀಪ್, ಸಂತೋಷ್, ಶಿವು ಮತ್ತಿತರರಿದ್ದರು.

ಶುಂಠಿ, ತೊಗರಿ, ಕಬ್ಬು ಬೆಳೆ ಮಧ್ಯೆ ಗಾಂಜಾ ಬೆಳೆದಿದ್ದ ವ್ಯಕ್ತಿಯ ಬಂಧನ



ಹುಣಸೂರು, ಸೆ.17– ತಾಲೂಕಿನ ಕೂಡ್ಲೂರು ಗ್ರಾಮದಲ್ಲಿ ಶುಂಠಿ, ತೊಗರಿ ಹಾಗೂ ಕಬ್ಬು ಬೆಳೆ ಮಧ್ಯೆ ಗಾಂಜಾ ಬೆಳೆದಿದ್ದ ಆರೋಪಿಯನ್ನು ಹುಣಸೂರು ಗ್ರಾಮಾಂತರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಗ್ರಾಮದ ನಿವಾಸಿ ಸಂತೋಷ್‌ಕುಮಾರ್(40) ಬಂಧಿತ ಆರೋಪಿ. ಖಚಿತ ಮಾಹಿತಿ ಮೇರೆಗೆ ಹುಣಸೂರು ಗ್ರಾಮಾಂತರ ಠಾಣೆ ಇನ್ಸ್‌ಪೆಕ್ಟರ್ ಸಿ.ವಿ.ರವಿ ಅವರು ತಮ್ಮ ಸಿಬ್ಬಂದಿಗಳೊಂದಿಗೆ ದಾಳಿ ನಡೆಸಿ ಆರೋಪಿಗಳನ್ನು ಬಂಧಿಸಿ 14 ಕೆಜಿ 862 ಗ್ರಾಂ ಹಸಿ ಗಾಂಜಾವನ್ನು ವಶಪಡಿಸಿಕೊಂಡರು.

ಜಿಲ್ಲಾ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್, ಅಡಿಷನಲ್ ಎಸ್ಪಿ ನಂದಿನಿ, ಡಿವೈಎಸ್ಪಿ ಮಹೇಶ್ ಅವರ ಮಾರ್ಗದರ್ಶನದಲ್ಲಿ ಈ ಕಾರ್ಯಾಚರಣೆ ನಡೆಸಲಾಯಿತು. ಸಿಬ್ಬಂದಿಗಳಾದ ಮಂಜುನಾಥ್, ರಮೇಶ್, ಮಲ್ಲೇಶ್, ನಂದೀಶ್, ರವಿ, ಇಮ್ರಾನ್ ಷರೀಫ್, ಮೆಹರಾಜ್ ಪಾಷ ಅವರು ಭಾಗವಹಿಸಿದ್ದರು.

ಹುಲಿ ದಾಳಿಗೆ ಎರಡು ಹಸುಗಳು ಬಲಿ

ಹೆಚ್.ಡಿ.ಕೋಟೆ ಬಳಿ ದುರಂತ, ಗ್ರಾಮಸ್ಥರಲ್ಲಿ ಆತಂಕ



ಹೆಚ್.ಡಿ.ಕೋಟೆ, ಸೆ.17– ಹೆಚ್.ಡಿ.ಕೋಟೆ ತಾಲೂಕಿನ ಹೊಸವಳಲು ಗ್ರಾಮದಲ್ಲಿ ಹುಲಿಯೊಂದು ಕಾಣಿಸಿಕೊಂಡಿದ್ದು, ಎರಡು ಹಸುಗಳ ಮೇಲೆ ದಾಳಿ ನಡೆಸಿ ಕೊಂದು ಹಾಕಿದೆ. ಇದರಿಂದ ಗ್ರಾಮಸ್ಥರು ಆತಂಕಗೊಂಡಿದ್ದಾರೆ.

ಗ್ರಾಮದ ಕಬಿನಿ ಹಿನ್ನೀರಿನ ಬಳಿ ಗ್ರಾಮದ ನಿವಾಸಿ ಲಿಂಗರಾಜು ಅವರ ಮಗನಾದ ವಿಕಾಸ್ ಅವರ ಎರಡು ಹಸುಗಳ ಮೇಲೆ ದಾಳಿ ಮಾಡಿ ಒಂದು ಹಸುವನ್ನು ಕೊಂದು ಹಾಕಿ, ಮತ್ತೊಂದು ಹಸುವನ್ನು ತಿಂದು ಹಾಕಿದೆ.

ಶನಿವಾರ ತಮ್ಮ ನಾಲ್ಕು ಇಲಾತಿ ಹಸುಗಳನ್ನು ಜಮೀನಿನ ಸಮೀಪವಿರುವ ಕಬಿನಿ ಹಿನ್ನೀರಿನಲ್ಲಿ ತೊಳೆಯಲು ಹೋಗಿದ್ದ ಸಂದರ್ಭದಲ್ಲಿ ಎರಡು ಹಸುಗಳನ್ನು ತೊಳೆದು ಮೈ ಒಣಗಲು ಬಿಟ್ಟು ಇನ್ನೆರಡು ಹಸುಗಳನ್ನು ತೊಳೆಯುತ್ತಿದ್ದ ವೇಳೆ ಹುಲಿ ದಾಳಿ ಮಾಡಿ ಹಸುಗಳನ್ನು ಕೊಂದುಹಾಕಿದೆ.

ಹಸುವನ್ನು ಕಳೆದುಕೊಂಡ ವಿಕಾಸ್ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಈ ಹಿಂದೆ ನಾನು ಎರಡು ಆಟೋಗಳನ್ನು ಇಟ್ಟುಕೊಂಡು ಜೀವನ ಸಾಗಿಸುತ್ತಿದ್ದೆ. ಆಟೋಗಳನ್ನು ಮಾರಿ ಸುಮಾರು 6 ಲಕ್ಷ ವೆಚ್ಚದ ಒಟ್ಟು ನಾಲ್ಕು ಇಲಾತಿ ಹಸುಗಳನ್ನು ತೆಗೆದುಕೊಂಡೆ. ಪ್ರತಿನಿತ್ಯ ನಾಲ್ಕು ಹಸುವಿನಿಂದ 35 ಲೀಟರ್ ಹಾಲನ್ನು ಕರೆದು ಡೈರಿಗೆ ಹಾಕುತ್ತಿದ್ದೆ, ದುರ್ವಿಧಿ ನನ್ನ ಎರಡು ಹಸುಗಳನ್ನು ಹುಲಿ ದಾಳಿ ಮಾಡಿ ಕೊಂದು ಹಾಕಿದೆ. ನನ್ನ ಜೀವನವೇ ಬರಿದಾಗಿದೆ ಎಂದರು.

ಹುಲಿಯನ್ನು ಸೆರೆ ಹಿಡಿಯಲು ಮನಸ್ಸನ್ನು ಕಲ್ಲು ಮಾಡಿಕೊಂಡು ಹುಲಿ ದಾಳಿಗೆ ಬಲಿಯಾದ ಹಸುವಿನ ಕರುವನ್ನೇ ಬೋನಿನಲ್ಲಿ ಇರಿಸಿದ್ದೇನೆ. ಸರ್ಕಾರ ನನ್ನ ಜೀವನ ರೂಪಿಸಿಕೊಳ್ಳಲು ಸೂಕ್ತ ಪರಿಹಾರ ಕೊಡಬೇಕು ಎಂದು ಮನವಿ ಮಾಡಿದ್ದಾರೆ. ಡಿಸಿಎಫ್ ಹರ್ಷಕುಮಾರ್ ಚಿಕ್ಕ ಭರತ್ ಮಾತನಾಡಿ, ಈ ಭಾಗದಲ್ಲಿ ಹುಲಿಯ ಓಡಾಡುತ್ತಿರುವುದು ನಮ್ಮ ಗಮನಕ್ಕೆ ಬಂದಿದ್ದು, ನಾವು ಕ್ಯಾಮೆರಾವನ್ನು ಅಳವಡಿಸಿದ್ದೇವೆ. ಕ್ಯಾಮರಾದಲ್ಲಿ ಹುಲಿಯ ಚಲನವಲನ ಚಿತ್ರಗಳು ಸೆರೆಯಾಗಿದ್ದು ಇದು ಬಂಡಿಪುರ ಅಭ್ಯಾರಣ್ಯದಿಂದ ಬಂದಿರುವ ಹುಲಿ ಎಂದು ತಿಳಿದು ಬಂದಿದೆ.

ಹುಲಿಯ ಚಲನವಲನ ಗಮನಿಸಲು ಇಲಾಖೆಯಿಂದ ಸಿಬ್ಬಂದಿಗಳನ್ನು ನೇಮಕ ಮಾಡಲಾಗಿದ್ದು, ಹಸು ತಿಂದು ಹಾಕಿರುವ ಜಾಗದಲ್ಲಿ ಹುಲಿಯನ್ನು ಸೆರೆ ಹಿಡಿಯಲು ಬೋನ್ ಇರಿಸಲಾಗಿದೆ ಎಂದು ತಿಳಿಸಿದ್ದಾರೆ.

ಸ್ಥಳಕ್ಕೆ ಅಂತರಸಂತೆ ವಲಯ ಅರಣ್ಯಾಧಿಕಾರಿ ಭರತ್, ಅಧಿಕಾರಿಯಾದ ರಾಹುಲ್, ಅಂತರಸಂತೆ ಪೊಲೀಸ್ ಠಾಣೆಯ ಎಸ್‌ಐ ರವಿಶಂಕರ್, ಸಿಬ್ಬಂದಿ ಭೇಟಿ ಮಾಡಿದ್ದಾರೆ.

ಕಲೆಯ ಉತ್ತುಂಗಕ್ಕೆ ವಿಶ್ವಕರ್ಮರ ಕೊಡುಗೆ ಅಪಾರ



ಸರಗೂರು, ಸೆ.17– ದೇಶ ವಾಸ್ತುಶಿಲ್ಪ ಕಲೆಯಲ್ಲಿ ಇಡೀ ಜಗತ್ತಿನಲ್ಲೇ ಉತ್ತುಂಗ ಸ್ಥಾನದಲ್ಲಿ ನಿಲ್ಲುವಂತಾಗಲು ವಿಶ್ವಕರ್ಮ ಸಮುದಾಯದ ಕೊಡುಗೆ ಅಪಾರವಾದದ್ದು ಎಂದು ಸಾಹಿತಿ ಕಿರಣ್ ಸಿಡ್ಲೇಹಳ್ಳಿ ತಿಳಿಸಿದರು.

ಸರಗೂರು ತಾಲೂಕು ಕಚೇರಿಯಲ್ಲಿ ಭಾನುವಾರ ನಡೆದ ವಿಶ್ವಕರ್ಮ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬ್ರಹ್ಮಾಂಡದ ಸೃಷ್ಟಿಕರ್ತ, ದೇವರ ಇಂಜಿನಿಯರ್ ವಿಶ್ವಕರ್ಮ ಎಂದೇ ಹೇಳಬಹುದು, ಭಾರತ ವಾಸ್ತುಶಿಲ್ಪ ಕಲೆಯಲ್ಲಿ ಇಡೀ ಜಗತ್ತಿನಲ್ಲಿ ಉತ್ತುಂಗ ಸ್ಥಾನದಲ್ಲಿ ನಿಲ್ಲುವಲ್ಲಿ ವಿಶ್ವಕರ್ಮ ಸಮುದಾಯದ ಕೊಡುಗೆ ಅಪಾರವಾದದ್ದು ಎಂದರು.

ಸರಗೂರು ವಿಶ್ವಕರ್ಮ ಸಮಾಜದ ಗೌರವಾಧ್ಯಕ್ಷ ಜಿ.ರವಿ, ನಮ್ಮ ಸಮಾಜ ತುಳಿತಕ್ಕೆ ಒಳಗಾದ ಸಮಾಜ, ಸರ್ಕಾರದಿಂದ ಬರುವ ಸೌಲಭ್ಯವನ್ನು ಪಡೆದುಕೊಳ್ಳುವ ನಿಟ್ಟಿನಲ್ಲಿ ಸಮುದಾಯದ ಬಂಧುಗಳು ಮುಂದಾಗಬೇಕು ಎಂದರು. ತಹಶೀಲ್ದಾರ್ ಪರಶಿವಮೂರ್ತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಪಪಂ ಅಧ್ಯಕ್ಷೆ ರಾಧಿಕಾ ಶ್ರೀನಾಥ್ ಕಾರ್ಯಕ್ರಮ ಉದ್ಘಾಟಿಸಿದರು. ಪಪಂ ಸದಸ್ಯ ಶ್ರೀನಿವಾಸ್, ಚಲುವಕೃಷ್ಣ, ಸರಗೂರು ವಿಶ್ವಕರ್ಮ ಸಮಾಜದ ಅಧ್ಯಕ್ಷ ನಟರಾಜಾಚಾರ್, ಮುಳ್ಳೂರು ಗ್ರಾಪಂ ಸದಸ್ಯ ಗೋವಿಂದಚಾರ್, ಪಿಎಸ್‌ಐ ನಂದೀಶ್ ಕುಮಾರ್, ವೆಂಕಟೇಶ್, ಸಂತೋಷ್, ಲೋಕೇಶ್, ಪ್ಲೈವುಡ್ ಮಂಜುನಾಥ್, ಸತೀಶ್ ಕದಂಬ, ಕಸಾಪ ಅಧ್ಯಕ್ಷ ಎಂ.ಕೆಂಡಗಣ್ಣ ಸ್ವಾಮಿ, ಎಸ್.ಸಿ.ಗೋಪಾಲ ಕೃಷ್ಣ ಪ್ಲೈವುಡ್ ಮಂಜುನಾಥ್, ರಾಜೇಶ್, ಬೀರ್ವಾಳ್ ಲೋಕೇಶ್, ಬಾಡಗ ರವಿ, ಬಿ.ಡಿ.ದಾಸಾಚಾರ್, ಕೋಟೆ ಸೋಮಾಚಾರ್, ವೆಂಕುರಾಮ್, ಸಿದ್ದಪ್ಪಾಜಿ, ಸತೀಶ್ ಕದಂಬ, ಪ್ರವೀಣಾ, ನಾಗೇಶ್‌ಚಾರ್, ಪ್ರವೀಣ್, ಕಿರಣಾ, ಚಂದ್ರಶೇಖರ್ ಹಾಜರಿದ್ದರು.



ಹೆಚ್.ಡಿ.ಕೋಟೆ ತಾಲೂಕು ಹೊಮ್ಮರಗಳ್ಳಿ ಗ್ರಾಮದಲ್ಲಿ ವಿಶ್ವಕರ್ಮ ಸಮಾಜದ ವತಿಯಿಂದ ವಿಶ್ವಕರ್ಮ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ವಿಶ್ವಕರ್ಮ ಜನಾಂಗದ ಮುಖಂಡರಾದ ರಾಜೇಶ್ ಪ್ರಭುಸ್ವಾಮಿ ಪ್ರಸನ್ನ, ಸೋಮಣ್ಣಾಚಾರಿ, ಸೂರ್ಯಕುಮಾರ ಆಚಾರ್, ಊರಿನ ಮುಖಂಡರು ಉಪಸ್ಥಿತರಿದ್ದರು.

ಬನ್ನಿಕುಪ್ಪೆಯಲ್ಲಿ ಆಯುಷ್ಮಾನ್‌ಭವ ಅಭಿಯಾನ

ಹುಣಸೂರು.ಸೆ.17– ಬನ್ನಿಕುಪ್ಪೆ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ವತಿಯಿಂದ ಆಯುಷ್ಮಾನ್‌ಭವ ಅಭಿಯಾನ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು ಹಾಗೂ ಡೆಂಗಿ ಜ್ವರದ ಬಗ್ಗೆ ಪ್ರಮುಖ ಬೀದಿಗಳಲ್ಲಿ ಜಾಥಾ ನಡೆಸಿ ಜಾಗೃತಿ ಮೂಡಿಸಲಾಯಿತು.

ಗ್ರಾಪಂ ಅಧ್ಯಕ್ಷ ಗೋವಿಂದನಾಯಕ, ಪಿ.ಡಿ.ಒ ರಾಘವೇಂದ್ರ ಪ್ರಸನ್ನ, ಕಾರ್ಯದರ್ಶಿ ವೇದಮೂರ್ತಿ.ಸಿ.ಎಸ್, ಆರೋಗ್ಯ ಸಹಾಯಕರಾದ ಸಣ್ಣಮಂಚಯ್ಯ, ಪವರ್, ಮುಜಾಹಿದ್, ಮೇಲ್ವಿಚಾರಕ ಸಾಗರ್, ಆಶಾ ಕಾರ್ಯಕರ್ತೆಯರು ಭಾಗವಹಿಸಿದ್ದರು.

ವಾಸ್ತುಶಿಲ್ಪ ವೈಭವಕ್ಕೆ ವಿಶ್ವಕರ್ಮರ ಕೊಡುಗೆ ಅಪಾರ



ನಂಜನಗೂಡು, ಸೆ17– ವಿಶ್ವಕರ್ಮ ಸಮಾಜದವರು ಕಲೆಗಳಲ್ಲಿ ನಿಪುಣರಾಗಿದ್ದು, ದೇಶದ ಕಲೆ, ವಾಸ್ತುಶಿಲ್ಪ ವೈಭವಕ್ಕೆ ಅವರ ಕೊಡುಗೆ ಅಪಾರವಾಗಿದೆ ಎಂದು ತಹಸೀಲ್ದಾರ್ ಶಿವಪ್ರಸಾದ್ ಅಭಿಪ್ರಾಯಪಟ್ಟಿದ್ದಾರೆ.

ನಗರದ ತಾಲೂಕು ಕಚೇರಿ ಸಭಾಂಗಣದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿ ವತಿಯಿಂದ ಏರ್ಪಡಿಸಿದ್ದ ವಿಶ್ವಕರ್ಮ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ವಿಶ್ವಕರ್ಮ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವಿಶ್ವಕರ್ಮ ಸಮಾಜ ದೇಶ ಆರ್ಥಿಕ ಪ್ರಗತಿ ಸಾಧಿಸಲು ಆಧಾರ ಸ್ತಂಭವಾಗಿದ್ದು, ಕೈಗಾರಿಕೆ, ಕೃಷಿ, ವಿಜ್ಞಾನ, ತಂತ್ರಜ್ಞಾನ, ಸಾಂಸ್ಕೃತಿಕ ಭಾಂಧವ್ಯಗಳಿಗೂ ಸಹ ಅವರ ಕೊಡುಗೆ ಅಪಾರವಾಗಿದೆ. ದೇಶದ ಶಿಲ್ಪಕಲಾ ವೈಭವಕ್ಕೆ ಬೇಲೂರು, ಹಳೇಬೀಡು, ಸೋಮನಾಥಪುರ, ದೇವಾಲಯಗಳು ಸಾಕ್ಷಿಯಾಗಿ ಚಿರಾಯುವಾಗಿ ನಿಂತಿವೆ ಎಂದರು.

ತಾಲೂಕು ವಿಶ್ವಕರ್ಮ ಸಮಾಜದ ಅಧ್ಯಕ್ಷ ಚಂದ್ರು ಮಾತನಾಡಿ, ಸಮಾಜದಲ್ಲಿ ಎಲ್ಲಾ ವರ್ಗದ ಜೊತೆ ಸಹಕಾರ ಮನೋಭಾವನೆಯಿಂದ ಜೀವಿಸುತ್ತಿದ್ದಾರೆ. ಜೊತೆಗೆ ವಿಶ್ವಕರ್ಮ ಜನಾಂಗ ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಒಗ್ಗಟ್ಟಿನ ಕೊರತೆಯಿಂದಾಗಿ ರಾಜಕೀಯವಾಗಿಯೂ ಹಿಂದುಳಿದ ಸಮಾಜವಾಗಿದೆ. ಯಾವುದೇ ರಾಜಕೀಯ ಪಕ್ಷಗಳು, ರಾಜಕಾರಣಿಗಳು, ಸಮಾಜವನ್ನು ಚುನಾವಣೆಗಳಿಗೆ ಮಾತ್ರ ಮತ ಬ್ಯಾಂಕ್ ಆಗಿ ಬಳಸಿಕೊಂಡು. ನಂತರ ಕಡೆಗಣಿಸುತ್ತಿರುವುದು ಬೇಸರದ ಸಂಗತಿಯಾಗಿದೆ ಎಂದರು.

ವಿಶ್ವಕರ್ಮ ಶಿಕ್ಷಣ ಪಡೆದು ಸಂಘಟನೆಗೊಂಡು ರಾಜಕೀಯ ಪ್ರಜ್ಞೆ ಬೆಳೆಸಿಕೊಂಡಾಗ ಮಾತ್ರ ಸಮಾಜದ ಅಭಿವೃದ್ಧಿ ಸಾಧ್ಯ. ಆದ್ದರಿಂದ ಸಮಾಜದ ಬಂಧುಗಳು ನಿಮ್ಮ ಮಕ್ಕಳಿಗೆ ಕಡ್ಡಾಯವಾಗಿ ಉತ್ತಮ ಶಿಕ್ಷಣ ಕೊಡಿಸಿ ಎಂದ ಅವರು, ಶಾಸಕರು ಸಮಾಜದ ಬಗ್ಗೆ ಕಾಳಜಿ ವಹಿಸಿ ಸಮಾಜದ ಒಬ್ಬರನ್ನು ನಗರಸಭೆಗೆ ನಾಮ ನಿರ್ದೇಶನಗೊಳಿಸಬೇಕು ಹಾಗೂ ನಗರದ ಯಾವುದಾದರೂ ಒಂದು ವೃತ್ತಕ್ಕೆ ವಿಶ್ವಕರ್ಮ ಅವರ ಹೆಸರನ್ನು ಇಡಬೇಕು ಎಂದು ಒತ್ತಾಯಿಸಿದರು.

ಸಮಾರಂಭದಲ್ಲಿ ವಿಶ್ವಕರ್ಮ ಸಮಾಜದ ಉಪಾಧ್ಯಕ್ಷ ಶ್ರೀಕಂಠ, ಸಿದ್ದಾಚಾರ್, ಮುಖಂಡ ರಮೇಶ್, ವೀರಭದ್ರ, ಪುರುಷೋತ್ತಮ್, ರಾಜು, ರಮೇಶ್, ಪುಟ್ಟಣ್ಣ, ಆಯುಷ್ ಅಧಿಕಾರಿ ಅಶೋಕ್ ಕುಮಾರ್, ಅಕ್ಷರ ದಾಸೋಹ ಅಧಿಕಾರಿ ಮಲ್ಲಿಕಾರ್ಜುನ್, ನಂದಕುಮಾರ್, ದಸಂಸ ಸಂಚಾಲಕ ಸುರೇಶ್, ಅಬ್ದುಲ್ ಖಾದರ್ ಸೇರಿದಂತೆ ಹಲವಾರು ಪ್ರಮುಖರು ಇದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಮಾರ್ಕ್ ಆಂಟೋನಿ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ತತ್ಸಮ ತದ್ಭವ(ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಜವಾನ್ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಸಪ್ತಸಾಗರದಾಚೆ ಎಲ್ಲೋ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಸಪ್ತಸಾಗರದಾಚೆ ಎಲ್ಲೋ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಮಾರ್ಕ್ ಆಂಟೋನಿ (ತ)	4 ಪ್ರದರ್ಶನಗಳು
ಸಂಗಂ	
ಜವಾನ್ (ಹಿ)	4 ಪ್ರದರ್ಶನಗಳು
ಲಿಡೋ	
ಖುಷಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಜವಾನ್ (ಹಿ)	4 ಪ್ರದರ್ಶನಗಳು
ಪ್ರಭಾ	
ನಮೋ ಭೂತಾತ್ಮ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಸಪ್ತಸಾಗರದಾಚೆ ಎಲ್ಲೋ (ಕ): ಬೆ.10.15ಕ್ಕೆ, ಮ.1.05ಕ್ಕೆ, ರಾ.7.05ಕ್ಕೆ, ರಾ.9.55ಕ್ಕೆ, ಜವಾನ್ (ಹಿಂ): ಮ.3.55ಕ್ಕೆ.
ಸ್ಕ್ರೀನ್ 2	ತತ್ಸಮ ತದ್ಭವ (ಕ): ಬೆ.11ಕ್ಕೆ, ರಾ.7.10ಕ್ಕೆ, ರಾ.9.45ಕ್ಕೆ, 13 ಪಾರ್ಟ್ 1 (ಕ): ಮ.1.45ಕ್ಕೆ, ಮಿಸ್ ಶೆಟ್ಟಿ ಮಿಸ್ಟರ್ ಪೊಲಿಶೆಟ್ಟಿ (ತೆ): ಸಂ.4.15ಕ್ಕೆ.
ಸ್ಕ್ರೀನ್ 3	ಪರಿಮಳಾ ಡಿಸೋಜಾ (ಕ): ಬೆ.11ಕ್ಕೆ, ದಿ ನನ್ 2 (ಇಂ): ಮ.1.45ಕ್ಕೆ, ಮಾರ್ಕ್ ಆಂಟೋನಿ (ತ): ಸಂ.4.15ಕ್ಕೆ, ಎ ಹಾಂಟಿಂಗ್ ಇನ್ ವೆನಿಸ್ (ಇಂ): ರಾ.7.15ಕ್ಕೆ, ರಾ.9.50ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.9.45ಕ್ಕೆ, ಮ.1ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಸಂ.4.15ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ತತ್ಸಮ ತದ್ಭವ (ಕ): ಬೆ.11.10ಕ್ಕೆ, ಸಂ.4.45ಕ್ಕೆ, ಸಪ್ತಸಾಗರದಾಚೆ ಎಲ್ಲೋ (ಕ): ಮ.1.45ಕ್ಕೆ, ರಾ.7.20ಕ್ಕೆ, ಮಾರ್ಕ್ ಆಂಟೋನಿ (ತ): ರಾ.10.20ಕ್ಕೆ.
ಸ್ಕ್ರೀನ್ 2	ಜವಾನ್ (ಹಿಂ): ಬೆ.11.15ಕ್ಕೆ, ಮ.2.50ಕ್ಕೆ, ಸಂ.6.25ಕ್ಕೆ, ರಾ.10ಕ್ಕೆ.
ಸ್ಕ್ರೀನ್ 3	ಜವಾನ್ (ಹಿಂ): ಬೆ.10.15ಕ್ಕೆ, ಮ.1.50ಕ್ಕೆ, ಸಂ.5.25ಕ್ಕೆ, ರಾ.9ಕ್ಕೆ.
ಸ್ಕ್ರೀನ್ 4	ಪರಿಮಳಾ ಡಿಸೋಜಾ (ಕ): ಬೆ.10.30ಕ್ಕೆ, 13 (ಕ): ಮ.1.20ಕ್ಕೆ, ಮಾರ್ಕ್ ಆಂಟೋನಿ (ತ): ಸಂ.4.20ಕ್ಕೆ, ಟೇಲ್ ಆಫ್ ಮಹಾನಗರ (ಕ): ರಾ.7.30ಕ್ಕೆ, ಕಾಸರ್‌ಗೋಲ್ಡ್ (ಮ): ರಾ.10.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಈ ಪಟ್ಟಣಕ್ಕೆ ಏನಾಗಿದೆ (ಕ): ಬೆ.10.45ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಮ.1.15ಕ್ಕೆ, ಶೀಲಾ (ಕ): ಸಂ.4.15ಕ್ಕೆ, ಡಿಡಿ ರಿಟರ್ನ್ಸ್ (ತ): ಸಂ.6.30ಕ್ಕೆ, ರಾ.9ಕ್ಕೆ.
ಸ್ಕ್ರೀನ್ 2	ಕೌಸಲ್ಯ ಸುಪ್ರಜಾ ರಾಮ (ಕ): ಬೆ.1.15ಕ್ಕೆ, ರಾ.7ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ) ಸಂ.4.15ಕ್ಕೆ.
ಸ್ಕ್ರೀನ್ 3	ಕೌಸಲ್ಯ ಸುಪ್ರಜಾ ರಾಮ (ಕ): ಬೆ.10.30ಕ್ಕೆ, ಸಂ.4ಕ್ಕೆ, ಮೆಗ್ 2 ದಿ ಟ್ರೆಂಚ್ (3ಡಿ) (ಇಂ): ಮ.1.20ಕ್ಕೆ, ಸಂ.6.55ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 4	ಮೆಗ್ 2 ದಿ ಟ್ರೆಂಚ್ (3ಡಿ)(ಇಂ): ಬೆ.10.45ಕ್ಕೆ, ನಮೋ ಭೂತಾತ್ಮ (ಕ): ಮ.1.10ಕ್ಕೆ, ಮ.3.50ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಸಂ.6.30ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ರಾ.9.15ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಜೈಲರ್ (ತ): ಬೆ.8.35ಕ್ಕೆ, ಬೆ.11.40ಕ್ಕೆ, ಮ.3.40ಕ್ಕೆ, ಸಂ.6.45ಕ್ಕೆ, ರಾ.10.30ಕ್ಕೆ, ಜೈಲರ್ (ಕ): ಬೆ.8.25ಕ್ಕೆ, ಮ.3.10ಕ್ಕೆ, ಓಎಂಜಿ 2 (ಹಿಂ): ಬೆ.8.20ಕ್ಕೆ, ಬೆ.11.50ಕ್ಕೆ, ಸಂ.6.40ಕ್ಕೆ, ರಾ.10.15ಕ್ಕೆ, ಗದರ್ 2 (ಹಿಂ): ಮ.12.05ಕ್ಕೆ, ಮ.3.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ರಾ.9.45ಕ್ಕೆ, ಆಚಾರ್ & ಕೋ (ಕ): ಮ.3.55ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ಮ.3.25ಕ್ಕೆ, ರಾ.10.30ಕ್ಕೆ, ನಮೋ ಭೂತಾತ್ಮ (ಕ): ಬೆ.11.55ಕ್ಕೆ, ರಾಖಿ ಔರ್ ರಾಣಿ (ಹಿಂ): ಬೆ.9.20ಕ್ಕೆ, ಸಂ.6.20ಕ್ಕೆ, ರಾ.9.50ಕ್ಕೆ, ಓಪನ್‌ಹೈಮರ್ (ಇಂ): ಸಂ.6.35ಕ್ಕೆ, ಭೋಳಾ ಶಂಕರ್ (ತೆ): ಬೆ.9.05ಕ್ಕೆ, ಮ.12.30ಕ್ಕೆ, ಮ.2.55ಕ್ಕೆ, ಸಂ.6.20ಕ್ಕೆ, ಮೆಗ್ 2 (ಇಂ): ಮ.12.50ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಸಕಾಲದಲ್ಲಿ ಸಾಲ ಹಿಂತಿರುಗಿಸಿದರೆ ಸಂಘ ಅಭಿವೃದ್ಧಿ



ಮಲ್ಲುಂಡಿ, ಸೆ.17– ಸಮೀಪದ ಹಲ್ಲರೆ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 2022–23ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ಸಂಘದ ಅಧ್ಯಕ್ಷ ಶಿವಬುದ್ದಿ ಉದ್ಘಾಟಿಸಿದರು.


ಬಳಿಕ ಮಾತನಾಡಿದ ಅವರು, ಸಂಘವು ಅಭಿವೃದ್ಧಿ ಹೊಂದಬೇಕಾದರೆ ಸಾಲ ಪಡೆದ ಸದಸ್ಯರು ಸಕಾಲದಲ್ಲಿ ಸಾಲ ಮರುಪಾವತಿ ಮಾಡಬೇಕು. ಸಾಲ ಪಡೆದವರು ಸಕಾಲದಲ್ಲಿ ಮರು ಪಾವತಿ ಮಾಡಿದರೆ ಸದಸ್ಯರಿಗೆ ಹೆಚ್ಚಿನ ಸೌಲಭ್ಯಗಳನ್ನು ನೀಡಬಹುದು. ಆದ್ದರಿಂದ ಸಾಲ ಪಡೆದ ಸದಸ್ಯರು ಸಕಾಲಕ್ಕೆ ಸಾಲ ಮರುಪಾವತಿ ಮಾಡಬೇಕು ಎಂದು ಮನವಿ ಮಾಡಿದರು.

ಸಂಘದ ಉಪಾಧ್ಯಕ್ಷ ಮಾದನಾಯಕ, ನಿರ್ದೇಶಕರುಗಳಾದ ಮಹದೇವಪ್ಪ, ಜಕ್ರಿಯಾ, ಶಿವಣ್ಣ, ಸುಬ್ರಹ್ಮಣ್ಯ, ಪುಟ್ಟದೇವಯ್ಯ, ಸಿದ್ದೇಗೌಡ, ಹೆಚ್.ಎನ್. ಬಸವರಾಜ್, ಭಾಗ್ಯಮ್ಮ, ಸಿಇಓ ಹೆಚ್ ಡಿ ಶಿವಕುಮಾರ್, ಗುಮಾಸ್ತ ಮಹದೇವಸ್ವಾಮಿ, ಅಟೆಂಡರ್ ರಮೇಶ್ ಸೇರಿದಂತೆ ಪ್ರಮುಖರು ಹಾಜರಿದ್ದರು.



ವರುಣ ವಿಧಾನಸಭಾ ಕ್ಷೇತ್ರದ ತಿರುಮಕೂಡಲಿನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಹುಟ್ಟುಹಬ್ಬವನ್ನು ಬಿಜೆಪಿ ವತಿಯಿಂದ ಸಿಹಿ ಹಂಚುವ ಮೂಲಕ ಆಚರಿಸಲಾಯಿತು. ಪ್ರಧಾನ ಕಾರ್ಯದರ್ಶಿ ಎ.ಎನ್.ರಂಗುನಾಯಕ, ಎಂ.ಸೋಮಣ್ಣ, ಹೊಸ ತಿರುಮಕೂಡಲು ಜಗದೀಶ್(ಜಗ್ಗ), ರಮೇಶ, ದೀಪು, ಶೇಖರ್, ಆಟೋ ಚಂದ್ರು, ಕಿರಣ, ವಾಸು, ಬೈರಾಪುರ ಬಾಲರಾಜು, ಚಂದ್ರಶೇಖರ್, ಹುಣಸೂರು, ಪ್ರಕಾಶ, ಪುಟ್ಟಮಾದು, ಯಜಮಾನರಾದ ನಟರಾಜು ಹಾಗೂ ಇತರೆ ಕಾರ್ಯಕರ್ತರು ಹಾಜರಿದ್ದರು


ಸಮಸ್ತ ನಾಡಿನ ಜನತೆಗೆ
ಗೌರಿ-ಗಣೇಶ
ಹಬ್ಬದ ಹಾರ್ದಿಕ
ಶುಭಾಶಯಗಳು
ಶುಭಕೋರುವವರು :
ಶಿವಪ್ರಸಾದ್ (ವಿ.ಶರತ್)
ಅಧ್ಯಕ್ಷರು, 5ನೇ ವಾರ್ಡ್, ಜಾತ್ಯಾತೀತ ಜನತಾದಳ
ಚಾಮರಾಜ ವಿಧಾನಸಭಾ ಕ್ಷೇತ್ರ, ಕುಂಬಾರ ಕೊಪ್ಪಲು, ಮೈಸೂರು


ನಾಡಿನ ಸಮಸ್ತ ಜನತೆಗೆ
ಗೌರಿ - ಗಣೇಶ
ಹಬ್ಬದ ಶುಭಾಶಯಗಳು
ವಿಘ್ನವಿನಾಯಕ ನಾಡಿನ
ಜನತೆಗೆ ಸುಖ-ಸಮೃದ್ಧಿ
ನೀಡಲಿ ಎಂದು ಪ್ರಾರ್ಥಿಸುವ
ಸಿ.ಬಸವೇಗೌಡ
ಮಾಜಿ ಅಧ್ಯಕ್ಷರು, ಮೈಸೂರು ನಗರ ಅಭಿವೃದ್ಧಿ ಪ್ರಾಧಿಕಾರ
ಮಾಜಿ ಅಧ್ಯಕ್ಷರು, ಮೈಸೂರು-ಚಾಮರಾಜನಗರ ಜಿಲ್ಲಾ ಸಹಕಾರ
ಕೇಂದ್ರ ಬ್ಯಾಂಕ್


ನಾಡಿನ ಸಮಸ್ತ ಜನತೆಗೆ ಗೌರಿ-ಗಣೇಶ ಹಬ್ಬದ ಹಾರ್ದಿಕ ಶುಭಾಶಯಗಳು
ದಿ ಮೈಸೂರು ಕೋ-ಆಪರೇಟಿವ್ ಬ್ಯಾಂಕ್‌ನ ನಿರ್ದೇಶಕರು
ಕನ್ನಡ ವಿಕಾಸ ರತ್ನ ಹಾಗೂ ಜನ ಸೇವಭೂಷಣ ಪ್ರಶಸ್ತಿ ಪುರಸ್ಕೃತರಾದ
ಎಸ್.ಆರ್.ರವಿಕುಮಾರ್ ರವರಿಗೆ
ಹುಟ್ಟುಹಬ್ಬದ ಶುಭಾಶಯಗಳು
ದಿನಾಂಕ : 18-09-2023
ಶುಭಕೋರುವವರು : ಎಸ್.ಆರ್.ರವಿ ಸ್ನೇಹ ಬಳಗ ಮೈಸೂರು